## ಅಧ್ಯಾಯ - 7

# ಸಾರಿಗೆ ಮತ್ತು ಸಂಪರ್ಕ

ಜಿಲ್ಲೆಯಲ್ಲಿ ಸಾರಿಗೆ ವ್ಯವಸ್ಥೆಯು 1844 ಕ್ಕಿಂತ ಪೂರ್ವದಲ್ಲಿ ತುಂಬಾ ಮಿತವಾಗಿದ್ದು ಎತ್ತಿನ ಗಾಡಿಗಳ ಸಂಚಾರಕ್ಕೆ ಸರ್ವಋತು ರಸ್ತೆಗಳು ಯಾವುದು ಇರಲಿಲ್ಲ. ಬ್ರಿಟಿಷರ ಆಗಮನಕ್ಕೂ ಪೂರ್ವದಲ್ಲಿ ಜಿಲ್ಲೆಗೂ ಗೋವೆಗೂ ಸಂಪರ್ಕ ಕಲ್ಪಿಸುವ ದೊಡ್ಡಮಾರ್ಗ ಒಂದನ್ನು ಶಾಸನಗಳು ಹೇಳುತ್ತವೆ. ಆದಿಲ್‌ಷಾರ ಕಾಲದಲ್ಲಿ ಕಾಳೀನದಿಯ ತೀರದ ಕದ್ರಾವರೆಗೆ ಸರಕನ್ನು ನದೀ ಮಾರ್ಗವಾಗಿ ತಂದು ಅಲ್ಲಿಂದ ಎತ್ತುಗಳ ಮೂಲಕ ಹುಬ್ಬಳ್ಳಿಗೆ ಸಾರಿಗೆ ಭೂ ಮಾರ್ಗದಿಂದ ಆಗುತ್ತಿತ್ತು. ಭಟ್ಕಳದಿಂದ 'ದರ್ಬಾ' ಮೂಲಕ ತಾನು ಹಂಪೆಗೆ ಹೋಗಿದ್ದಾಗಿ ಒಬ್ಬ ಪೋರ್ತುಗೀಸ್ ಪ್ರವಾಸಿ ವಿಜಯನಗರದ ಕಾಲದ ರಸ್ತೆಯ ನಿರ್ದೇಶನ ಮಾಡಿದ್ದು ಇಲ್ಲಿ ದರ್ಬಾ ಎಂಬುದು ಧಾರವಾಡ ಎಂದು ಊಹಿಸಲಾಗಿದೆ. ರಟ್ಟಿಹಳ್ಳಿ-ಕುಮಟಾಗಳ ನಡುವೆ ಒಂದು ರಸ್ತೆ ಪೇಶ್ವೆಯರ ಕಾಲದಲ್ಲಿ ಇತ್ತು. ಹುಬ್ಬಳ್ಳಿ-ಕುಮಟಾ ರಸ್ತೆ ಸಿರಸಿ ಮೂಲಕ ಇದ್ದು 110 ಮೈಲಿಯದಾಗಿ ಪೇಶ್ವೆಯರ ಕಾಲದಿಂದ ರೂಢಿಯಲ್ಲಿ ಇತ್ತು. ಕಲಘಟಗಿ-ಯಲ್ಲಾಪುರ-ಅರೆಬೈಲ್ ಘಟ್ಟ-ಅಂಕೋಲಾ ರಸ್ತೆ 80 ಮೈಲಿಗಳದಿತ್ತು. ಕಲಘಟಗಿ-ಯಲ್ಲಾಪುರ-ಅರೆಬೈಲ್-ಸದಾಶಿವಗಡ ಘಾಟಿ ರಸ್ತೆ 78 ಮೈಲಿ. ಕಾಡುಗಳ ನಡುವೆ ವ್ಯಾಪಾರಿಗಳು ಈ ರಸ್ತೆಗಳಲ್ಲಿ ಸಾಗುತ್ತಿದ್ದರು. ಆದರೆ ಹಿತಕರ ಹವೆಯ ಕಾಲದಲ್ಲಿ ಮಾತ್ರ ಕೆಲವು ಗಡಸು ರಸ್ತೆಗಳಲ್ಲಿ ಗಾಡಿಗಳ ಪ್ರಯಾಣ ಸಾಗುತ್ತಿತ್ತು. ಉತ್ತಮ ಹವೆಯ ಕಾಲಡಲ್ಲಿ ಕಾಲು ಹಾದಿಗಳ ಮೂಲಕವು ಸಾಮಾನು ಸರಂಜಾಮುಗಳನ್ನು ಸಾಗಿಸಲಾಗುತ್ತಿತ್ತು. ಮಳೆಗಾಲದಲ್ಲಿ ಸಂಚಾರ ಸಾಧ್ಯವಾಗುತ್ತಿರಲಿಲ್ಲ. 1850 ರಲ್ಲಿ ಧಾರವಾಡ ಮತ್ತು ಬೆಳಗಾವಿ ನಡುವಣ ರಸ್ತೆ (ಉತ್ತರಕ್ಕೆ) ಮಳೆಗಾಲದಲ್ಲಿ ಸಂಚಾರಕ್ಕೆ ಯೋಗ್ಯವಾಗಿರಲಿಲ್ಲ. ಬೇರೆ ರಸ್ತೆಗಳಲ್ಲಿಯು ಸಹ ಸೇತುವೆಗಳ ನಿರ್ಮಾಣವಾಗಿರಲಿಲ್ಲ. 1856 ರ ಸುಮಾರಿನಲ್ಲಿ ಸೇತುವೆಗಳ ಸಹಿತವಾಗಿ ನಿರ್ಮಿಸಿದ ರಸ್ತೆಗಳಲ್ಲಿ ಪುಣೆ-ಹರಿಹರ ಮಾರ್ಗ, ಬೆಳಗಾವಿ-ಹುಬ್ಬಳ್ಳಿ ರಸ್ತೆ ಹಾಗೂ 110 ಮೈಲಿ ಉದ್ದದ ಬಂದರಿಗೆ ಸಂಪರ್ಕ ನೀಡುವ ಧಾರವಾಡ-ಮುಂಡಗೋಡ-ಸಿರಸಿ-ಕುಮಟಾಗಳ ನಡುವಣ ರಸ್ತೆಗಳು ಮುಖ್ಯವಾದವು. ಪುಣೆ-ಬೆಂಗಳೂರು ರಸ್ತೆಯಲ್ಲಿ ವರದಾ ನದಿಯ ಅಡಚಣೆಯನ್ನು ನಿವಾರಿಸಲು 1866ರಲ್ಲಿ ಒಂದು ಸೇತುವೆಯನ್ನು ನಿರ್ಮಿಸಲಾಯಿತು. ಇದು ಧಾರವಾಡದಿಂದ ಸುಮಾರು 80 ಕಿ.ಮೀ. ದಕ್ಷಿಣಕ್ಕೆ ಇದ್ದಿತು. 1864 ರ ನಂತರ ಲೋಕಲ್ ಫಂಡ್ ವ್ಯವಸ್ಥೆಯ ಮೂಲಕ ಕಮೀಷನರ್ ಹಾಗೂ ಕಲೆಕ್ಟರ್‌ಗಳಿಗೆ ಹೆಚ್ಚಿನ ಹಣಕಾಸು ಸಂಪನ್ಮೂಲ ಒದಗಿ ಹೊಸ ರಸ್ತೆಗಳ ನಿರ್ಮಾಣ ಹಾಗೂ ರಸ್ತೆಗಳ ಅಭಿವೃದ್ಧಿ ವೇಗವಾಗಿ ನಡೆಯಿತು. ಬಂದರುಗಳಾದ ಕಾರವಾರ, ಕುಮಟಾ ಮತ್ತು ಗೋವಾಗಳಿಗೆ 1884 ರ ಸಮಯದಲ್ಲಿ ಧಾರವಾಡದಿಂದ ಒಳ್ಳೆಯ ಮಾರ್ಗಗಳಿದ್ದವು. ಹಾಗೂ ಗೋವಾದ ಮಾರ್ಗದಲ್ಲಿ ಸಂಚಾರ ಮತ್ತು ಸಾಗಾಣಿಕೆ ಅಲ್ಪ ಪ್ರಮಾಣದಲ್ಲಿತ್ತು.

1883 ರಲ್ಲಿ ಧಾರವಾಡವು 10 ಮುಖ್ಯವಾದ ಸಂಚಾರ ಮಾರ್ಗಗಳನ್ನು ಹೊಂದಿತ್ತು. ಅವುಗಳೆಂದರೆ 1. ಪುಣೆ-ಹರಿಹರ, 2. ಕಾರವಾರ-ಬಳ್ಳಾರಿ, 3. ಧಾರವಾಡ-ಕುಮಟಾ, 4. ಮುಂಡಗೋಡ-ಬಂಕಾಪುರ, 5. ಪಾಳಾ (ಉ.ಕ) ದಿಂದ ಬಾದಾಮಿ, 6.

ಹಾವನೂರು-ಸಮಸಗಿ, 7.ಹರಿಹರ-ಸಮಸಗಿ, 8.ಹುಬ್ಬಳ್ಳಿ-ಸೋಲ್ಲಾಪುರ, 9.ತಡಸ-ಗೋಂದಿ ಹಾಗೂ 10.ಮಾಸೂರು-ಮುಂಡರಗಿ. ಇವುಗಳಲ್ಲಿ ಕೆಲವು ಹಿತಕರ ಹವೆಯಲ್ಲಿ ಮಾತ್ರ ಗಾಡಿಗಳ ಸಂಚಾರಕ್ಕೆ ಅನುಕೂಲವಾಗಿದ್ದವು. ಧಾರವಾಡ-ಕುಮಟಾ ರಸ್ತೆಯಲ್ಲಿ ಎತ್ತಿನ ಗಾಡಿಗಳ ಸಂಚಾರ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಿತ್ತು ಹಾಗೂ ಮುಂಬೈಗೆ ಇದರ ಮೂಲಕ ಹತ್ತಿಯ ರವಾನೆಯಾಗುತ್ತಿತ್ತು. (ಇದರಿಂದ ಧಾರವಾಡ ಹತ್ತಿಗೆ 'ಕುಮ್ಟಹತ್ತಿ' ಎಂಬ ಹೆಸರು ಬಂದಿತು). ಅಲ್ಲದೆ ಗೋವಾ ಮಾರ್ಗದ ಮೂಲಕ ಅಗ್ಗದ ಉಪ್ಪು ಮತ್ತು ಉಪ್ಪಿನ ಮೀನನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. ಕಲಘಟಗಿ ಮೂಲಕವೂ ಜಿಲ್ಲೆಯ ದಕ್ಷಿಣ ಭಾಗದೆಡೆ ಈ ವ್ಯಾಪಾರ ಪೇಶ್ವೆಯರ ಕಾಲದಿಂದ ಇತ್ತು. ಜಿಲ್ಲೆಯಲ್ಲಿ ಬೆಟ್ಟಗಳ ಮೂಲಕ ಹೋಗುವ ಹಾದಿಗಳಿದ್ದವು. ಅವುಗಳನ್ನು ಹೇರಿನ ಪ್ರಾಣಿಗಳನ್ನು ಬಳಸಿ ದಾಟಬೇಕಾಗಿತ್ತು. ಅವುಗಳಲ್ಲಿ ಕಪ್ಪತಗುಡ್ಡ ಶ್ರೇಣಿಯಲ್ಲಿನ ಸೊರಟೂರು-ಡೋಣಿ ಮತ್ತು ವೀರಾಪುರ ಹಾದಿಗಳು ಮುಖ್ಯವಾಗಿದ್ದವು. ಮಿಶ್ರಿಕೋಟೆಯಿಂದ ಗೋವೆ, ಸದಾಶಿವಗಡ (ಕಾಳೀನದಿ ಮೂಲಕ), ಅಂಕೋಲಾ ಮತ್ತು ಕುಮಟಾ ಬಂದರುಗಳಿಗೆ ಸರಕು ಸಾಗಣೆ ಆಗುತ್ತಿತ್ತು. ಕಲಘಟಗಿ, ಸಾಂಬ್ರಾಣಿ (ಉ.ಕ) ಮತ್ತು ಡಿಗ್ಗಿ ಘಾಟಿಯಿಂದ ಗೋವೆಗೆ ಹೋಗುವ ಸು. 168 ಕಿ.ಮೀ. ಉದ್ದದ ರಸ್ತೆ 18 ನೇಯ ಶತಮಾನದಲ್ಲಿ ಬಳಕೆಯಲ್ಲಿ ಇತ್ತು. ಕಲಘಟಗಿಯಿಂದ ಯಲ್ಲಾಪುರ-ಬರಬಳ್ಳಿ, ಘಾಟಿ-ಸದಾಶಿವಗಡ ರಸ್ತೆ ಸು. 64 ಕಿ.ಮೀ.ಯ ಕಾಲುದಾರಿ.

ಅನೇಕ ಹೊಸ ರಸ್ತೆಗಳನ್ನು ಹಾಗೂ ಸೇತುವೆಗಳನ್ನು 1875 ರಿಂದಲೂ ನಿರ್ಮಿಸುವ ಪ್ರಯತ್ನಗಳು ಪ್ರಾರಂಭವಾಯಿತು. ಅವುಗಳ ವಿವರಗಳು ಕೆಳಕಂಡಂತಿವೆ: 1. ಹುಬ್ಬಳ್ಳಿಯಿಂದ ಸೋಲ್ಲಾಪುರದ ರಸ್ತೆಯನ್ನು ನಿರ್ಮಿಸಲು 2,30,705 ರೂಪಾಯಿಗಳ ವೆಚ್ಚವಾಯಿತು. ಹಾಗೂ ಕೆಲಸ ಪೂರ್ಣಗೊಂಡದ್ದು 1878-79 ರಲ್ಲಿ, ಕೊಂಚ ಕಾಲದನಂತರ ಸುಮಾರು 180 ಕಿ.ಮೀ. ಉದ್ದದ ಈ ರಸ್ತೆಯು ಹಾದಿಯಲ್ಲಿನ ವ್ಯಾಪಾರ ಸ್ಥಳಗಳು ಹಾಗೂ ಸೊಲ್ಲಾಪುರ ರೈಲ್ವೆ ಸ್ಟೇಷನ್ ನಡುವಣ ಇದ್ದ ಮುಖ್ಯ ಸಂಪರ್ಕ ಕೊಂಡಿಯಾಗಿತ್ತು. 1876-78ರ ಭೀಕರ ಕ್ಷಾಮದ ಕಾಲದಲ್ಲಿ ಅನೇಕ ರಸ್ತೆಗಳ ಕೆಲಸ ಆರಂಭಿಸಿದರು. 2.ಸುಮಾರು 1,27,971-00 ರೂಪಾಯಿಗಳ ವೆಚ್ಚದಲ್ಲಿ ಗದಗಿನಿಂದ ಹೆಸ್ರೂರಿಗೆ ರಸ್ತೆಯನ್ನು ನಿರ್ಮಿಸಲಾಯಿತು. ಇದರ ನಿರ್ಮಾಣ 1879-80 ರಲ್ಲಿ ಪೂರ್ಣವಾಯಿತು. 3. 1881-82 ರಲ್ಲಿ ಅಣ್ಣಿಗೇರಿ, ನವಲಗುಂದ ರಸ್ತೆಯು ನಿರ್ಮಿಸಲ್ಪಟ್ಟಿತು. ಇದಕ್ಕೆ ತಗಲಿದ ವೆಚ್ಚ 97,369-00 ರೂಪಾಯಿಗಳು. 4. ಉತ್ತರ ಕನ್ನಡ ಜಿಲ್ಲೆಗೆ ಸಂಪರ್ಕ ಕಲ್ಪಿಸುವ ಹಾವನೂರು-ಎಕ್ಕುಂಬಿ ರಸ್ತೆಯ ನಿರ್ಮಾಣಕ್ಕೆ ತಗಲಿದ ವೆಚ್ಚ 1,19,868-00 ರೂಪಾಯಿಗಳು. ಹಾಗೂ ಈ ಕೆಲಸ ಮುಗಿದ ವರ್ಷ 1883-84. 4. ಕರ್ಜಗಿ ರೈಲ್ವೆ ನಿಲ್ದಾಣದಿಂದ, ಪುಣೆ-ಬೆಂಗಳೂರು ರಸ್ತೆಗೆ ಸಂಪರ್ಕ ಕಲ್ಪಿಸಲು 1903-4 ರಲ್ಲಿ ಒಂದು ರಸ್ತೆಯನ್ನು ನಿರ್ಮಾಣ ಮಾಡಲಾಯಿತು. ಹಾಗೂ ಇದರ ವೆಚ್ಚ 26,714-00 ರೂಪಾಯಿಗಳು. ಜಿಲ್ಲೆಯಲ್ಲಿ 1910-11 ರಲ್ಲಿ ಸುಮಾರು 435 ಕಿ.ಮೀ. ಜಲ್ಲಿ ರಸ್ತೆಗಳಾಗಿದ್ದು ಮತ್ತು ಅನುಕೂಲ ಋತುವಿನಲ್ಲಿ ಪ್ರಯಾಣ ಮಾಡಬಹುದಾದ ಸು.864 ಕಿ.ಮೀ. ಉದ್ದದ ಇತರೇ ರಸ್ತೆಗಳಿದ್ದವು. ರಸ್ತೆ ಸಂಚಾರವನ್ನು ಸುಗಮಗೊಳಿಸುವ ಉದ್ದೇಶದಿಂದ 1917-18 ರಲ್ಲಿ ವರದಾ ನದಿಗೆ ಸಂಗೂರಿನ ಬಳಿ ಒಂದು ಒಡ್ಡು ದಾರಿಯನ್ನು (ಕಾಸ್‌ವೇ) ಕಟ್ಟಲಾಯಿತು. ಇದಕ್ಕೆ ತಗುಲಿದ ಖರ್ಚು 37,874-00 ರೂಪಾಯಿಗಳು. ಧಾರವಾಡದಿಂದ ಸು. 82 ಕಿ.ಮೀ. ದೂರದಲ್ಲಿರುವ ಮತ್ತೊಂದು ಸೇತುವೆ (ನಂ. 204 )ಯನ್ನು ಪುನರ್ ನಿರ್ಮಿಸಿದ್ದು ಸಹ 1917-18 ರಲ್ಲಿ, ಇದರ ಖರ್ಚು 5,282-00 ರೂಪಾಯಿಗಳು.

ಸದರ್ನ್ ಮರಾಠಾ ರೈಲ್ವೆ ಕಂಪನಿಯವರು 1882 ರಲ್ಲಿ, ರೈಲ್ವೆ ಮಾರ್ಗದ ನಿರ್ಮಾಣವನ್ನು ಆರಂಭಿಸಿ 1887 ರ ಹೊತ್ತಿಗೆ ಜಿಲ್ಲೆಯ ಮೀಟರ ಗೇಜ್ ಮಾರ್ಗಗಳನ್ನು ನಿರ್ಮಿಸಿದ್ದು ಜಿಲ್ಲೆಯಲ್ಲಿ ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆಯಲ್ಲಿ ಇದೊಂದು ಮಹತ್ವದ ಹೆಜ್ಜೆ. ಎತ್ತುಗಳ ಮೇಲೆ ಸರಕು ಹೇರಿ ಎಲ್ಲೆಡೆ (ಜಿಲ್ಲೆಯಲ್ಲಿ) ಸಾಗಿಸುತ್ತಿದ್ದ ಬಂಜಾರರು (ಲಮಾಣಿಗಳು) ರಸ್ತೆ ಸೌಕರ್ಯಗಳು ಹೆಚ್ಚಿದ ಮೇಲೆ ಕಾಣದಾದರು. ಆದರೂ ಅವರು ಕರಾವಳಿಯಿಂದ ಉಪ್ಪು ಹೇರಿ ತರುತ್ತಿದ್ದುದು ಕೆಲಕಾಲ ಮುಂದುವರಿಯಿತು. ಇದರಿಂದ ಅವರಿಗೆ ಲಮಾಣಿ (ಲವಣದಿಂದ) ಎಂಬ ಹೆಸರು ಬಂತು. ಹುಬ್ಬಳ್ಳಿ ಮತ್ತು ಧಾರವಾಡದ ಅಂಚೆ ಕಛೇರಿಗಳು ಜಿಲ್ಲೆಯ ಅತೀ ಹಳೇಯ ಅಂಚೆ ಕಛೇರಿಗಳಾಗಿದ್ದು, ಧಾರವಾಡದ ಅಂಚೆ ಕಛೇರಿ 1820 ರ ಸುಮಾರಿನಲ್ಲಿ ಆರಂಭವಾಯಿತೆಂದು ತಿಳಿಯಲಾಗಿದೆ. 1803 ರಲ್ಲಿ ಮದ್ರಾಸ್ ಮತ್ತು ಮುಂಬೈ ನಡುವೆ ಹೊಸ ಅಂಚೆ ಹಾದಿಯನ್ನು ಆರಂಭಿಸಲಾಯಿತು ಹಾಗೂ ಇದರ ಟಪ್ಪಾಲು ಚೀಲಗಳು ಧಾರವಾಡದಲ್ಲಿ ವಿನಿಮಯವಾಗುತ್ತಿದ್ದವು. ಗದಗ, ಹುಬ್ಬಳ್ಳಿ ಮತ್ತು ಧಾರವಾಡಗಳಲ್ಲಿ 1884 ರಲ್ಲಿ ತಂತೀ ಕಛೇರಿಗಳು ಕೆಲಸ ಮಾಡುತ್ತಿದ್ದವು.

## ರಸ್ತೆಗಳು

ಉತ್ತಮ ರಸ್ತೆಗಳನ್ನು ನಿರ್ಮಿಸುವ ವಿಚಾರದಲ್ಲಿ ಇಲ್ಲವೇ ರಸ್ತೆಗಳನ್ನು ವರ್ಗೀಕರಣ ಮಾಡುವುದರಲ್ಲೇ ಆಗಲಿ, 1926 ರವರೆಗೆ ಸರ್ಕಾರದಲ್ಲಿ ಯಾವುದೇ ನಿರ್ದಿಷ್ಟ ಧೋರಣೆ ಇರಲಿಲ್ಲ. ಇದೇ ವರ್ಷ ಮುಂಬೈ ಸರ್ಕಾರವು ರಸ್ತೆ ಬೋರ್ಡನ್ನು ರಚಿಸಿತು. ನಂತರ ಇದು ಬೋರ್ಡ್ ಆಫ್ ಕಮ್ಯುನಿಕೇಷನ್ಸ್ ಎಂದು ಹೆಸರು ಪಡೆಯಿತು. ಮೊದಲ ಬಾರಿಗೆ ಪ್ರಾಂತದ ರಸ್ತೆಗಳನ್ನು, ಮುಖ್ಯ ರಸ್ತೆಗಳು (ಟ್ರಂಕ್ ರಸ್ತೆಗಳು) ಹಾಗೂ ಪೂರಕ ರಸ್ತೆಗಳು (ಫೀಡರ್ ರಸ್ತೆಗಳು) ಎಂಬುದಾಗಿ ವಿಭಾಗ ಮಾಡಲಾಯಿತು. 1930 ರಲ್ಲಿ ಈ ರಸ್ತೆಗಳನ್ನು ಮೂರು ದರ್ಜೆಗಳನ್ನಾಗಿ ವಿಂಗಡಿಸಲಾಯಿತು. ಒಂದನೇ ದರ್ಜೆಯ (I) ಯ ರಸ್ತೆಗಳು ಪ್ರಾಂತೀಯ ರಸ್ತೆಗಳೆಂದು ಪರಿಗಣಿಸಲ್ಪಟ್ಟು ಸರ್ಕಾರದ ಆಡಳಿತಕ್ಕೊಳಪಟ್ಟಿತ್ತು. ಇಂತಹ ರಸ್ತೆಗಳು ಒಂದಕ್ಕಿಂತ ಹೆಚ್ಚಿನ ರಾಜ್ಯ ಅಥವಾ ಪ್ರಾಂತದ ಮೂಲಕ ಹಾದು ಹೋಗುತ್ತಿದ್ದು ಬಹು ಮುಖ್ಯ ಮಾರ್ಗಗಳಾಗಿದ್ದವು. II ನೇ ದರ್ಜೆಯ ರಸ್ತೆಗಳು ಒಂದಕ್ಕಿಂತ ಹೆಚ್ಚಿನ ಜಿಲ್ಲೆಗಳಲ್ಲಿ ಹಾದು ಹೋಗುತ್ತಿದ್ದು ಇವುಗಳನ್ನು II-ಎ ಮತ್ತು II-ಬಿ ಎಂದು ವಿಂಗಡಿಸಲಾಗಿತ್ತು. ಮೇಲ್ಕಂಡ ದರ್ಜೆಗೆ ಸೇರದ ಇತರೇ ರಸ್ತೆಗಳನ್ನು III ದರ್ಜೆಯ ರಸ್ತೆಗಳೆಂದು ಪರಿಗಣಿಸಲಾಗಿತ್ತು. ಇದರಲ್ಲಿ I ನೇ ದರ್ಜೆ ಹಾಗೂ II-ಎ ವರ್ಗಗಳ ರಸ್ತೆಗಳನ್ನು ಸರ್ಕಾರ ತನ್ನ ಆಡಳಿತದಲ್ಲಿಟ್ಟುಕೊಂಡಿದ್ದು II-ಬಿ ಮತ್ತು III ನೇಯ ವರ್ಗಗಳ ರಸ್ತೆಗಳನ್ನು ಜಿಲ್ಲಾ ಲೋಕಲ್ ಬೋರ್ಡ್‌ಗಳ ವಶಕ್ಕೆ ಕೊಟ್ಟಿತ್ತು. ಮುಂಬೈ ಪ್ರಾಂತದಲ್ಲಿ ರಸ್ತೆಗಳನ್ನು ವಿಂಗಡಣೆ ಮಾಡಿದ ವಿಧಾನವನ್ನು ಕೇಂದ್ರ ಸರ್ಕಾರವು 1930 ರಲ್ಲಿ ಅನುಮೋದಿಸಿತು. ಅಲ್ಲದೆ ರಸ್ತೆಗಳ ಜಾಲದಲ್ಲಿ ಧಾರವಾಡವನ್ನು ದಕ್ಷಿಣ ವೃತ್ತಕ್ಕೆ ಸೇರಿಸಲಾಗಿತ್ತು. ರಸ್ತೆಗಳನ್ನು ಅಭಿವೃದ್ಧಿಪಡಿಸಲು ಪೆಟ್ರೋಲ್ ತೆರಿಗೆಯಿಂದ ಸಹಾಯ ಧನವನ್ನು ಪಡೆಯುವ ಉದ್ದೇಶವನ್ನು ಇಂತಹ ವರ್ಗೀಕರಣ ಹೊಂದಿತ್ತು. ವಾಹನ ದಟ್ಟಣೆಗೆ ಅನುಸಾರವಾಗಿ ರಸ್ತೆಗಳನ್ನು ಪುನಃ ಈ ರೀತಿ ವಿಂಗಡಣೆ ಮಾಡಲಾಗಿತ್ತು: ಮೋಟಾರು ವಾಹನಗಳ ಸಂಚಾರ ಹೆಚ್ಚಿರುವ ಭಾಗ (ದಿನವು 100 ಕ್ಕಿಂತ ಹೆಚ್ಚಿನ ಮೋಟಾರು ವಾಹನಗಳ ಸಂಚಾರವಿರುವುದು), ಮೋಟಾರು ಸಂಚಾರ ಮಧ್ಯಮ ಪ್ರಮಾಣದಲ್ಲಿರುವ ಭಾಗ (ಪ್ರತಿ ದಿನ 100 ಮೋಟಾರು ವಾಹನಗಳವರೆಗೆ ಸಂಚಾರವಿರುವುದು), ಹಾಗೂ ಮೋಟಾರು ವಾಹನಗಳ ಸಂಚಾರ ಲಘು ಪ್ರಮಾಣದಲ್ಲಿರುವ ಭಾಗ (ದಿನಕ್ಕೆ 20 ಮೋಟಾರು ವಾಹನಗಳ ಸಂಚಾರವಿರುವುದು). ಜಿಲ್ಲೆಯಲ್ಲಿ ಮಾರ್ಚ್ 1933 ರಲ್ಲಿದ್ದ, ಒಂದನೇ ದರ್ಜೆಯ ರಸ್ತೆಗಳ ಉದ್ದ 350 ಕಿ.ಮೀ.ಗಳು. ಇದರಲ್ಲಿ ಧಾರವಾಡದಿಂದ ಹುಬ್ಬಳ್ಳಿ ಹಾಗೂ ಹುಬ್ಬಳ್ಳಿಯಿಂದ ಕುಮಟಾ ರಸ್ತೆಯವರೆಗಿನ ಭಾಗವು ಮೋಟಾರು ವಾಹನಗಳ ಸಂಚಾರ ಹೆಚ್ಚಿರುವ ಭಾಗವಾಗಿತ್ತು (43 ಕಿ.ಮೀ). ಇದಲ್ಲದೆ ಕಾರವಾರ-ಬಳ್ಳಾರಿ ರಸ್ತೆಯಲ್ಲಿ (ಸೈನ್ಯವನ್ನು ಸಾಗಿಸಲು ನಿರ್ಮಿಸಿದ್ದು), ಧಾರವಾಡದ ಗಡಿಯಿಂದ ಕಲಘಟಗಿಯವರೆಗಿನ 16.5 ಕಿ.ಮೀ. ಉದ್ದದ ರಸ್ತೆ ಹೆಚ್ಚಿನ ಮೋಟಾರು ವಾಹನಗಳ ಓಡಾಡುತ್ತಿದ್ದ ಭಾಗವಾಗಿತ್ತು. ಮೂರನೇ ದರ್ಜೆ ರಸ್ತೆಗಳು 681 ಕಿ.ಮೀ.ಗಳಷ್ಟು ಇದ್ದು, ಇದರಲ್ಲಿ ಸುಮಾರು 192 ಕಿ.ಮೀ.ಗಳು ಸರ್ಕಾರದ ಹತೋಟಿಯಲ್ಲಿದ್ದು ಬಾಕಿ 489 ಕಿ.ಮೀ.ಗಳು ಡಿಸ್ಟ್ರಿಕ್ಟ ಲೋಕಲ್ ಬೋರ್ಡ್‌ಗಳ ಆಡಳಿತದಲ್ಲಿತ್ತು.

1943 ರವರೆಗೆ ದೇಶದಲ್ಲಿ ರಸ್ತೆಗಳನ್ನು ವ್ಯವಸ್ಥಿತವಾಗಿ ವಿಂಗಡಿಸುವ ಪ್ರಯತ್ನಗಳು ನಡೆದಿರಲಿಲ್ಲ. ನಂತರ ನಾಗಪುರದ ಯೋಜನೆಗನುಗುಣವಾಗಿ, 1943 ರಲ್ಲಿ ರಸ್ತೆಗಳನ್ನು ಈ ರೀತಿ ವಿಂಗಡಿಸಲಾಯಿತು: 1. ರಾಷ್ಟ್ರೀಯ ಹೆದ್ದಾರಿಗಳು, 2. ರಾಜ್ಯ ಹೆದ್ದಾರಿಗಳು, 3. ಜಿಲ್ಲಾ ಪ್ರಮುಖ ರಸ್ತೆಗಳು, 4. ಜಿಲ್ಲೆಯ ಇತರೇ ರಸ್ತೆಗಳು ಹಾಗೂ 5. ಹಳ್ಳಿಯ ರಸ್ತೆಗಳು. ಈ ರಸ್ತೆಗಳನ್ನು ಪ್ರಾಮುಖ್ಯಕ್ಕೆ ಅನುಗುಣವಾಗಿ ವಿಂಗಡಿಸಿದ್ದು, ಮೊದಲ ಮೂರು ವರ್ಗಗಳು ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿದ್ದವು. ಪ್ರಥಮ ಪಂಚವಾರ್ಷಿಕ ಯೋಜನೆಯ ಮೊದಲನೇ ವರ್ಷ (1951-52) ದಲ್ಲಿ ಧಾರವಾಡ ಲೋಕೋಪಯೋಗಿ ಇಲಾಖೆಯ ಆಡಳಿತದಲ್ಲಿ 160 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿಗಳಲ್ಲಿ 134 ಕಿ.ಮೀ. ಜಲ್ಲಿ ರಸ್ತೆ, 11 ಕಿ.ಮೀ. ಟಾರಿನ ರಸ್ತೆ ಹಾಗೂ 15 ಕಿ.ಮೀ. ಮಣ್ಣಿನ ರಸ್ತೆ ಇದ್ದಿತು; ಮತ್ತು 508.8 ಕಿ.ಮೀ. ಇತರೇ ಜಿಲ್ಲಾ ರಸ್ತೆಗಳು, ಹಳ್ಳಿ ರಸ್ತೆಗಳು ಇತ್ಯಾದಿಗಳ ಪೈಕಿ ಜಲ್ಲಿ ಹಾಕಿದ್ದು 484 ಕಿ.ಮೀ. ಟಾರಿನ ರಸ್ತೆ 8 ಕಿ.ಮೀ. ಹಾಗೂ ಮಣ್ಣಿನ ರಸ್ತೆಗಳು 16 ಕಿ.ಮೀ. ಉದ್ದ ಇದ್ದಿತು. 1953 ರಲ್ಲಿ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಜಿಲ್ಲೆಯ ಪ್ರಮುಖ ಹಾಗೂ ಜಿಲ್ಲೆಯ ಇತರೇ ರಸ್ತೆಗಳಿದ್ದವು. ಅವುಗಳ ವಿವರಗಳು ಈ ರೀತಿ ಇದೆ.

**ರಾಷ್ಟ್ರೀಯ ಹೆದ್ದಾರಿ:** ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯು ಜಿಲ್ಲೆಯಲ್ಲಿ ಹಾದುಹೋಗುವ ಒಂದೇ ಹೆದ್ದಾರಿಯಾಗಿದೆ. ಇದು 173 ಕಿ.ಮೀ.ಗಳ ಉದ್ದ ಕ್ರಮಿಸಿ ಧಾರವಾಡ, ಹುಬ್ಬಳ್ಳಿ, ಕುಂದಗೋಳ, ಶಿಗ್ಗಾಂವಿ, ಹಾವೇರಿ, ಬ್ಯಾಡಗಿ ಹಾಗೂ ರಾಣೆಬೆನ್ನೂರು ತಾಲ್ಲೂಕಗಳನ್ನು ಸಂಪರ್ಕಿಸುವ ಕೊಂಡಿಯಾಗಿತ್ತು.

**ರಾಜ್ಯ ಹೆದ್ದಾರಿಗಳು:** ಕಾರವಾರ-ಬಳ್ಳಾರಿ ರಾಜ್ಯ ಹೆದ್ದಾರಿಯು ಕಾರವಾರದಿಂದ ಪ್ರಾರಂಭವಾಗಿ ಜಿಲ್ಲೆಯಲ್ಲಿ ಕಲಘಟಗಿ ತಾಲ್ಲೂಕಿನಲ್ಲಿ ಪ್ರವೇಶಿಸಿ ಹುಬ್ಬಳ್ಳಿ, ನವಲಗುಂದ, ಗದಗ ಹಾಗೂ ಮುಂಡರಗಿ ತಾಲ್ಲೂಕಗಳಲ್ಲಿ ಹಾದು ಹೋಗುತ್ತಿತ್ತು. ಗದಗಿನವರೆಗೆ ಸುಮಾರು 98 ಕಿ.ಮೀ.ಗಳ ಉದ್ದ ಮಾತ್ರವೆ ರಾಜ್ಯ ಹೆದ್ದಾರಿಯಾಗಿದ್ದು ನಂತರ ಹೆಸರೂರಿನವರೆಗೆ (ಮುಂಡರಗಿ ತಾಲ್ಲೂಕು ಮತ್ತು ಬಳ್ಳಾರಿ ಜಿಲ್ಲೆಯ ಅಂಚಿನಲ್ಲಿರುವ ಸ್ಥಳ) ಜಿಲ್ಲೆಯ ಪ್ರಮುಖ ರಸ್ತೆಯಾಗಿತ್ತು. ಕುಮಟಾ ಬಂದರಿನಿಂದ ಪ್ರಾರಂಭವಾಗುತ್ತಿದ್ದ ಮತ್ತೊಂದು ರಾಜ್ಯ ಹೆದ್ದಾರಿ, ಕುಮಟಾ ಮತ್ತು ಹುಬ್ಬಳ್ಳಿಯ ನಡುವಣದ್ದಾಗಿತ್ತು. ಶಿಗ್ಗಾಂವಿ ತಾಲ್ಲೂಕಿನಲ್ಲಿ ಕೇವಲ 15 ಕಿ.ಮೀ.ಗಳಷ್ಟು ಕ್ರಮಿಸಿ ನಂತರ ಪುಣೆ ಮತ್ತು ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯನ್ನು ಕೂಡುತ್ತಿತ್ತು. ಸೊಲ್ಲಾಪುರದಿಂದ ಪ್ರಾರಂಭವಾಗುತ್ತಿದ್ದ ಸೊಲ್ಲಾಪುರ-ಹುಬ್ಬಳ್ಳಿ ರಾಜ್ಯ ಹೆದ್ದಾರಿ, ಬಿಜಾಪುರ ಜಿಲ್ಲೆಯನ್ನು ದಾಟಿ ಜಿಲ್ಲೆಯ ನರಗುಂದ, ನವಲಗುಂದ ಮತ್ತು ಹುಬ್ಬಳ್ಳಿ ತಾಲ್ಲೂಕಗಳನ್ನು ಕ್ರಮಿಸುತ್ತಿತ್ತು. ಜಿಲ್ಲೆಯಲ್ಲಿ ಇದರ ಒಟ್ಟು ಉದ್ದ 77 ಕಿ.ಮೀ.ಗಳು.

**ಜಿಲ್ಲೆಯ ಪ್ರಮುಖ ರಸ್ತೆಗಳು:** ಒಟ್ಟು ಹತ್ತು ಪ್ರಮುಖ ರಸ್ತೆಗಳು ಜಿಲ್ಲೆಯಲ್ಲಿದ್ದು ವಿವಿಧ ಭಾಗಗಳಿಗೆ ಸಂಪರ್ಕ ಕಲ್ಪಿಸಲ್ಪಡುತ್ತಿತ್ತು. ಅವೆಂದರೆ, 1. ಗದಗ-ಪಾಳಾರಸ್ತೆ (102 ಕಿ.ಮೀ), 2. ಗದಗ-ಬಾದಾಮಿ ರಸ್ತೆ (64 ಕಿ.ಮೀ.), 3. ಹಾವನೂರು-ಎಕ್ಕಂಬಿ ರಸ್ತೆ (90 ಕಿ.ಮೀ.), 4, ಶಿರಹಟ್ಟಿ-ಮುಂಡರಗಿ ರಸ್ತೆ (36 ಕಿ.ಮೀ), 5. ಧಾರವಾಡ-ಹಳಿಯಾಳ ರಸ್ತೆ (33 ಕಿ.ಮೀ), 6. ಧಾರವಾಡ-ಗೋವಾ ರಸ್ತೆ, 7. ಧಾರವಾಡ-ಸೌದತ್ತಿ ರಸ್ತೆ (21 ಕಿ.ಮೀ) ಮತ್ತು 8. ಮಾಸೂರು-ಗುತ್ತಲ ರಸ್ತೆ (61 ಕಿ.ಮೀ) 9. ಹರಿಹರ-ಸಮಸ್ಗಿ ರಸ್ತೆ (83 ಕಿ.ಮೀ) ಮತ್ತು 10. ತಡಸ-ಗೋಂದಿ ರಸ್ತೆ (62 ಕಿ.ಮೀ).

**ಜಿಲ್ಲೆಯ ಇತರೇ ರಸ್ತೆಗಳು:** ಗ್ರಾಮಾಂತರ ಹಾಗೂ ಪಟ್ಟಣ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುತ್ತಿದ್ದ (1953 ರಲ್ಲಿ) ಜಿಲ್ಲೆಯ ಇತರೇ ರಸ್ತೆಗಳು ಈ ಕೆಳಕಂಡಂತಿದ್ದವು. ಧಾರವಾಡ ತಾಲ್ಲೂಕು 1. ಕಿತ್ತೂರು-ಅಳಗವಾಡಿ ರಸ್ತೆ ಉದ್ದ 19 ಕಿ.ಮೀ.; ಹುಬ್ಬಳ್ಳಿ ತಾಲ್ಲೂಕು: 2. ಹುಬ್ಬಳ್ಳಿ-ಹೆಬ್ಬಳ್ಳಿ ರಸ್ತೆ 7 ಕಿ.ಮೀ.; 3. ಕುಸುಗಲ್-ಬ್ಯಾಹಟ್ಟಿ ರಸ್ತೆ; 64 ಕಿ.ಮೀ.; ನವಲಗುಂದ ತಾಲ್ಲೂಕು: 4. ಹೆಬಸೂರು-ಯಮನೂರ ರಸ್ತೆ 4.2 ಕಿ.ಮೀ.; ಕಲಘಟಗಿ ತಾಲ್ಲೂಕು: 5. ಬಂದೂರು-ಚಲಮಟ್ಟಿ ರಸ್ತೆ 24 ಕಿ.ಮೀ.; 6. ಕಲಘಟಗಿ-ಬಮ್ಮಿಗಟ್ಟಿ ರಸ್ತೆ 13 ಕಿ.ಮೀ.; 7. ಕಲಘಟಗಿ-ಧಾರವಾಡ ಹಳೆಯ ರಸ್ತೆ 12.8 ಕಿ.ಮೀ.; ಗದಗ ತಾಲ್ಲೂಕು: 8. ಗದಗ-ವೆಂಕಟಾಪುರ ರಸ್ತೆ 17 ಕಿ.ಮೀ.; 9. ಮುಂಡರಗಿ-ಕೊರ್ಲಹಳ್ಳಿ 9.6 ಕಿ.ಮೀ.; 10. ಕೊರ್ಲಹಳ್ಳಿ-ಹೆಮ್ಮಿಗಿ ರಸ್ತೆ 16 ಕಿ.ಮೀ.; ರೋಣ ತಾಲ್ಲೂಕು: 11. ರೋಣ-ನರೇಗಲ್ ರಸ್ತೆ 15 ಕಿ.ಮೀ.; ರಾಣೆಬೆನ್ನೂರು ತಾಲ್ಲೂಕು: 12. ಹಲಗೇರಿ-ತುಮ್ಮಿನಕಟ್ಟಿ ರಸ್ತೆ 16 ಕಿ.ಮೀ.; 13. ಹುಲಿಹಳ್ಳಿ-ಬ್ಯಾಡಗಿ ರಸ್ತೆ 11.2 ಕಿ.ಮೀ.; 14. ರಾಣೆಬೆನ್ನೂರು-ಗಂಗಾಪುರ ರಸ್ತೆ 7.2 ಕಿ.ಮೀ.; 15. ರಾಣೆಬೆನ್ನೂರು-ಮೆಡ್ಲೇರಿ ರಸ್ತೆ 12.8 ಕಿ.ಮೀ.; ಹಿರೇಕೆರೂರು ತಾಲ್ಲೂಕು: 6. ರಟ್ಟಿಹಳ್ಳಿ-ತುಮ್ಮಿನಕಟ್ಟಿ ರಸ್ತೆ 11.8 ಕಿ.ಮೀ.; 17. ತಾವರ್ಗಿ-ರಟ್ಟಿಹಳ್ಳಿ ರಸ್ತೆ 10.4 ಕಿಮೀ.; ಕುಂದಗೋಳ ಮಹಲ್: 18. ಕುಂದಗೋಳ-ಯಲಿವಾಳ ರಸ್ತೆ 12. ಕಿ.ಮೀ.; ಶಿರಹಟ್ಟಿ ತಾಲ್ಲೂಕು: 19. ಬೆಳ್ಳಟ್ಟಿ-ಇಟಗಿ ರಸ್ತೆ 17.6 ಕಿ.ಮೀ. ಉದ್ದ; 20. ಬೆಳ್ಳಟ್ಟಿ-ಅದರಗಟ್ಟಿ-ಲಕ್ಷ್ಮೇಶ್ವರ ರಸ್ತೆ 20.8 ಕಿ.ಮೀ.; 21. ಬಟ್ಟೂರು-ಕಡಕೋಳ ರಸ್ತೆ 20.8 ಕಿ.ಮೀ.; 22. ವರವಿ-ಬನ್ನಿಕೊಪ್ಪ ರಸ್ತೆ 19.2 ಕಿ.ಮೀ.; 23. ದೊಡ್ಡೂರು-ಬಾಳೆಹೊಸೂರು ರಸ್ತೆ 14.4 ಕಿ.ಮೀ.; 24. ಶಿರಹಟ್ಟಿ-ಯಲಿಸಿರೂರು 4.8 ಕಿ.ಮೀ.; 25. ಮಾಗಡಿ-ಯರೇಬೂದಿಹಾಳ ರಸ್ತೆ 11.2 ಕಿ.ಮೀ.; ಶಿಗ್ಗಾಂವಿ ತಾಲ್ಲೂಕು: 26. ಶಿಗ್ಗಾಂವಿ-ಅಟ್ಟೀಗೆರೆ ರಸ್ತೆ 18 ಕಿ.ಮೀ.; ಮತ್ತು ಹಾವೇರಿ ತಾಲ್ಲೂಕು: 27. ಸೋಮನಕಟ್ಟಿ-ಹೊಸರಿತ್ತಿ ರಸ್ತೆ 8 ಕಿ.ಮೀ.

**ವಿವಿಧ ಇಲಾಖೆಗಳ ಅಧೀನದಲ್ಲಿದ್ದ ಒಟ್ಟು ರಸ್ತೆಗಳ ವಿವರ (ಕಿ.ಮೀ.ಗಳಲ್ಲಿ) (1951-52)**

| | ಇಲಾಖೆ | ಜಲ್ಲಿ (ಮತ್ತು ಡಾಂಬರು) ರಸ್ತೆಗಳು | ಮಣ್ಣು ರಸ್ತೆಗಳು | ಒಟ್ಟು |
|---|---|---|---|---|
| 1. | ಲೋಕೋಪಯೋಗಿ ಇಲಾಖೆ ರಸ್ತೆಗಳು | 808.0 | 33.0 | 841.0 |
| 2. | ಜಿಲ್ಲೆಯ ಸ್ಥಳೀಯ ಸಂಸ್ಥೆಗಳ ರಸ್ತೆಗಳು | 707.0 | 800.0 | 1507.0 |
| 3. | ಪುರಸಭೆಯ ರಸ್ತೆಗಳು | 280.0 | 90.0 | 370.0 |
| | ಒಟ್ಟು | 1795.0 | 923.0 | 2718.0 |

**ಜಿಲ್ಲೆಯ ಪ್ರತಿ ಪುರಸಭೆಯ ಅಧೀನದಲ್ಲಿದ್ದ ರಸ್ತೆಗಳ ಅಂಕಿ ಅಂಶಗಳು (1951-52) (ಕಿ.ಮೀ.ಗಳಲ್ಲಿ)**

| | ಪುರಸಭೆ | ಜಲ್ಲಿ ಹಾಗೂ ಡಾಂಬರ್ ಹಾಕಿರುವುದು | ಜಲ್ಲಿ ಹಾಕದೆ ಇರುವುದು | ಒಟ್ಟು |
|---|---|---|---|---|
| 1 | ಬ್ಯಾಡಗಿ | 6.0 | 5.3 | 11.3 |
| 2 | ಧಾರವಾಡ | 89.6 | 12.8 | 102.4 |
| 3 | ಗದಗ-ಬೆಟಗೇರಿ | 24.0 | 17.7 | 41.7 |
| 4 | ಗುಡಗೇರಿ | 3.2 | 0.8 | 4.0 |
| 5 | ಹಾವೇರಿ | 7.6 | 4.7 | 12.3 |
| 6 | ಹುಬ್ಬಳ್ಳಿ | 72.0 | 16.0 | 88.0 |
| 7 | ಕುಂದಗೋಳ | 4.0 | 1.6 | 5.6 |
| 8 | ಲಕ್ಷ್ಮೇಶ್ವರ | 16.0 | 8.0 | 24.0 |
| 9 | ನರಗುಂದ | 8.8 | 7.5 | 16.3 |
| 10 | ನವಲಗುಂದ | 5.0 | 2.6 | 7.6 |
| 11 | ರಾಣೆಬೆನ್ನೂರು | 20.8 | 11.2 | 32.0 |
| 12 | ಸವಣೂರು | 16.0 | - | 16.0 |
| 13 | ಶಿಗ್ಗಿ | 1.6 | 3.2 | 4.8 |
| 14 | ಶಿರಹಟ್ಟಿ | 5.6 | - | 5.6 |
| | ಒಟ್ಟು | 280.2 | 91.4 | 371.6 |

ರಾಜ್ಯದ ಏಕೀಕರಣದ ನಂತರ ಹಾಗೂ ಪಂಚವಾರ್ಷಿಕ ಯೋಜನೆಗಳಲ್ಲಿ ರಸ್ತೆಗಳ ಸರ್ವತೋಮುಖ ಅಭಿವೃದ್ಧಿಗೆ ಗಮನ ಹರಿಸಲಾಯಿತು. ಎರಡನೇಯ ಪಂಚವಾರ್ಷಿಕ ಯೋಜನೆಯಲ್ಲಿ (1956-1961), 61 ಕಿ.ಮೀ. ಉದ್ದದ ಹೊಸ ರಸ್ತೆಗಳ ನಿರ್ಮಾಣ ನಡೆದು 197 ಕಿ.ಮೀ. ಉದ್ದದ ರಸ್ತೆ ಮೇಲ್ಮೈಗೆ ಟಾರು ಅಥವಾ ಆಸ್ಫಾಲ್ಟಿಂಗ್ ಮಾಡಲಾಯಿತು. ಸುಮಾರು 958 ಕಿ.ಮೀ. ಗ್ರಾಮೀಣ ರಸ್ತೆಗಳನ್ನು ಸಹ ನಿರ್ಮಿಸಲಾಯಿತು. 1961-66 ರ ಮೂರನೇಯ ಪಂಚವಾರ್ಷಿಕ ಯೋಜನೆಯಲ್ಲಿ 249 ಕಿ.ಮೀ. ರಸ್ತೆಗಳನ್ನು ಹೊಸದಾಗಿ ಮಾಡಿದ್ದು, ಮುಖ್ಯ ಸ್ಥಳಗಳಿಗೆ ಸಂಪರ್ಕ ಕಲ್ಪಿಸಲು ಈ ಅವಧಿಯಲ್ಲಿ ಗ್ರಾಮೀಣ ಕ್ಷೇತ್ರದಲ್ಲಿ 1,006 ಕಿ.ಮೀ. ಉದ್ದದ ರಸ್ತೆಗಳನ್ನು ನಿರ್ಮಿಸಿದ್ದಲ್ಲದೇ, 196 ಕಿ.ಮೀ. ರಸ್ತೆಗಳ ಮೇಲ್ಮೈಗೆ ಟಾರು ಅಥವಾ ಆಸ್ಫಾಲ್ಟಿಂಗ್ ಹಾಕಲಾಯಿತು. ಇದರ ಪರಿಣಾಮವಾಗಿ 1956 ರಲ್ಲಿದ್ದ 3,118 ಕಿ.ಮೀ.ರಸ್ತೆಗಳು 1966 ರ ವೇಳೆಗೆ 3,690 ಕಿ.ಮೀ.ಗಳಿಗೆ ಏರಿಕೆಯಾಯಿತು. ಮೂರು ವಾರ್ಷಿಕ ಯೋಜನೆಗಳು 1966-67, 1967-68 ಹಾಗೂ 1968-69 ರಲ್ಲಿ ಕಾರ್ಯಗತವಾದವು. ಇದರಡಿಯಲ್ಲಿ ಜಿಲ್ಲೆಯಲ್ಲಿ 89.55 ಲಕ್ಷ ರೂಪಾಯಿಗಳ ವೆಚ್ಚದಲ್ಲಿ 325 ಕಿ.ಮೀ. ಉದ್ದದ ರಸ್ತೆಗಳ ಮೇಲ್ಮೈನ್ನು ಉತ್ತಮಪಡಿಸಲಾಯಿತು, 172 ಕಿ.ಮೀ. ಗ್ರಾಮೀಣ ರಸ್ತೆಗಳನ್ನು ಹಾಗೂ 21 ಕಿ.ಮೀ. ಉದ್ದದ ಇತರೇ ರಸ್ತೆಗಳನ್ನು ನಿರ್ಮಾಣ ಮಾಡಲಾಯಿತು. ಹೊಸ ರಸ್ತೆಗಳ ನಿರ್ಮಾಣಕ್ಕೆ ಹಾಗೂ ರಸ್ತೆಗಳ ಗುಣಮಟ್ಟ ಹೆಚ್ಚಿಸುವುದಕ್ಕೆ ನಾಲ್ಕನೇಯ ಪಂಚವಾರ್ಷಿಕ ಯೋಜನೆಯಲ್ಲಿ (1969-70 ರಿಂದ 1973-74) ಆದ್ಯತೆಯನ್ನು ಕೊಡಲಾಗಿತ್ತು. ಈ ಯೋಜನೆಯಡಿಯಲ್ಲಿ 568 ಕಿ.ಮೀ. ಉದ್ದದ ಗ್ರಾಮೀಣ ರಸ್ತೆಗಳನ್ನು ನಿರ್ಮಾಣ ಮಾಡಲಾಯಿತು. ಸುಮಾರು 90 ಕಿ.ಮೀ. ಇತರೇ ರಸ್ತೆಗಳನ್ನು ಮಾಡಿಸಿದ್ದು, 225 ಕಿ.ಮೀ. ರಸ್ತೆಗಳ ಗುಣಮಟ್ಟ ಹೆಚ್ಚಿಸಿದ್ದು ಹಾಗೂ 221 ಕಿ.ಮೀ ಉದ್ದದ ರಸ್ತೆಯ ಮೇಲ್ಮೈಗೆ ಟಾರು ಅಥವಾ ಆಸ್ಫಾಲ್ಟಿಂಗ್ ಹಾಕಿಸಿದ್ದು ಸಹ ಈ ಯೋಜನೆಯ ಅವಧಿಯಲ್ಲಿ. 1974 ರ ವೇಳೆಗೆ

ರಸ್ತೆಗಳ ಒಟ್ಟು ಉದ್ದ 4,754 ಕಿ.ಮೀ.ಗಳಾಗಿದ್ದು ಇದರಲ್ಲಿ ಮೇಲ್ಮೈ ಇರುವ ರಸ್ತೆಗಳ ಉದ್ದ 2,905 ಕಿ.ಮೀ.ಗಳು. ದಿನಾಂಕ 31.3.1976 ರಲ್ಲಿದ್ದ ಎಲ್ಲಾ ರಸ್ತೆಗಳ ಒಟ್ಟು ಉದ್ದ 5,442 ಕಿ.ಮೀ.ಗಳಾಗಿದ್ದು, ಪ್ರತಿ 100 ಚ.ಕಿ.ಮೀ.ಗಳಿಗೆ 40 ಕಿ.ಮೀ. ರಸ್ತೆ ಸಂಪರ್ಕ ಇದ್ದಿತು. ಹಾಗೂ ಇದು 1981 ರಲ್ಲಿ 43 ಕಿ.ಮೀ.ಗಳಿಗೆ ಏರಿಕೆಯಾಯಿತು. ನಾನಾ ಅಭಿವೃದ್ಧಿ ಯೋಜನೆಗಳಿಂದಾಗಿ 1986 ರಲ್ಲಿ 6,946 ಕಿ.ಮೀ. ರಸ್ತೆಗಳಿದ್ದು ಪ್ರತಿ 100 ಚ.ಕಿ.ಮೀ.ಗೆ 51 ಕಿ.ಮೀ. ರಸ್ತೆಯಿದ್ದಿತು. ಪುನಃ 1991 ರಲ್ಲಿ ರಸ್ತೆಗಳಲ್ಲಿ ತೀವ್ರ ಏರಿಕೆಯಾಗಿ, ಪ್ರತಿ 100 ಚ.ಕಿ.ಮೀ.ಗಳಿಗೆ 68 ಕಿ.ಮೀ.ಗಳ ರಸ್ತೆಗಳಿದ್ದವು ಹಾಗೂ ಒಟ್ಟು ರಸ್ತೆಗಳು 9,382 ಕಿ.ಮೀ.ಗಳು. ಒಟ್ಟು ರಸ್ತೆಗಳ ಉದ್ದ 31-3-1994 ರ ಅಂತ್ಯಕ್ಕೆ 9,369 ಕಿ.ಮೀ.ಗಳಾಗಿತ್ತು.

**ರಾಷ್ಟ್ರೀಯ ಹೆದ್ದಾರಿ:** ರಾಷ್ಟ್ರೀಯ ಹೆದ್ದಾರಿ ಸಂಖ್ಯೆ ನಾಲ್ಕು ಜಿಲ್ಲೆಯಲ್ಲಿ ಹಾದು ಹೋಗುತ್ತದೆ. ಉತ್ತಮ ಗುಣಮಟ್ಟದ ಹಾಗೂ ಟಾರಿನ ಮೇಲ್ಮೈ ಇರುವ 160 ಕಿ.ಮೀ.ಗಳ ಈ ರಸ್ತೆ ಧಾರವಾಡ ತಾಲ್ಲೂಕಿನಲ್ಲಿ 30 ಕಿ.ಮೀ., ಹುಬ್ಬಳ್ಳಿ 27 ಕಿ.ಮೀ., ಶಿಗ್ಗಾಂವಿ 30 ಕಿ.ಮೀ., ಹಾವೇರಿ 19 ಕಿ.ಮೀ., ರಾಣೆಬೆನ್ನೂರು 36 ಕಿ.ಮೀ., ಬ್ಯಾಡಗಿ 11 ಕಿ.ಮೀ., ಹಾಗೂ ಸವಣೂರು ತಾಲ್ಲೂಕಿನಲ್ಲಿ 7 ಕಿ.ಮೀ., ದೂರ ಕ್ರಮಿಸುತ್ತದೆ. ಕೆಲವೊಂದು ರಾಜ್ಯ ಹೆದ್ದಾರಿಗಳು ಜಿಲ್ಲೆಯಲ್ಲಿ ಹಾದು ಹೋಗುತ್ತವೆ. ಇವು ಉತ್ತಮ ಗುಣಮಟ್ಟದ್ದಾಗಿ ಸುಮಾರು 695 ಕಿ.ಮೀ. ಉದ್ದವಿದ್ದು ಟಾರಿನ ಮೇಲ್ಮೈಯನ್ನು ಹೊಂದಿದೆ, ಹಾಗೂ ಸಂಪರ್ಕಿಸುವ ಸ್ಥಳಗಳು ಈ ರೀತಿ ಇವೆ:

ರಾಜ್ಯ ಹೆದ್ದಾರಿ ಸಂಖ್ಯೆ.2: ಸಿರಸಿ-ಯಕ್ಕಂಬಿ-ಹಾವೇರಿ-ಮೈಲಾರ-ಹರಪನಹಳ್ಳಿ ಮಾರ್ಗವಾಗಿ; ಜಿಲ್ಲೆಯಲ್ಲಿ ಇದರ ಉದ್ದ 75.73 ಕಿ.ಮೀ.

ಹೆದ್ದಾರಿ ಸಂಖ್ಯೆ.6: ಕಾರವಾರ, ಕೈಗಾ, ಮುಂಡಗೋಡ, ಬಂಕಾಪುರ, ಸವಣೂರ್, ಗದಗ, ಗಜೇಂದ್ರಗಡ, ಇಳಕಲ್ ಮಾರ್ಗ; ಜಿಲ್ಲೆಯಲ್ಲಿ ಉದ್ದ 145.97 ಕಿ.ಮೀ.

ಹೆದ್ದಾರಿ ನಂ.28: ಸೂಪಾ, ಹಳಿಯಾಳ, ಧಾರವಾಡ, ಹೆಬಸೂರ ಮಾರ್ಗ, ಒಟ್ಟು ಉದ್ದ 56.85 ಕಿ.ಮೀ. ಹೆದ್ದಾರಿ ನಂ.30: ನರಗುಂದ, ಸಿಂದನೂರು ಮಾರ್ಗ, ರೋಣ ಮತ್ತು ಕುಷ್ಟಗಿ ಮೂಲಕ 74.30 ಕಿ.ಮೀ.ಗಳು.

ಹೆದ್ದಾರಿ ಸಂಖ್ಯೆ 34: ಧಾರವಾಡದಿಂದ ಗೋವೆಗೆ (ಧಾರವಾಡವನ್ನು ಅನಮೋಡ್‌ಗೆ ಸಂಪರ್ಕಿಸುವುದು); ಒಟ್ಟು ಉದ್ದ 29.9 ಕಿ.ಮೀ.

ಹೆದ್ದಾರಿ ನಂ.42: ಅಂಕೋಲಾ, ಜೋಳದರಾಸಿಗಳ ನಡುವಿನ ಮಾರ್ಗ, ಯಲ್ಲಾಪುರ, ಕಲಘಟಗಿ, ಗದಗ, ಹೊಸಪೇಟೆ, ಬಳ್ಳಾರಿಗಳ ನಂತರ ಆಂಧ್ರಪ್ರದೇಶದ ಗುತ್ತಿಗೆ; ಜಿಲ್ಲೆಯಲ್ಲಿರುವ ಇದರ ಉದ್ದ ಒಟ್ಟು 132.2 ಕಿ.ಮೀ.ಗಳು.

ರಾಜ್ಯ ಹೆದ್ದಾರಿ ನಂ.63: ಬಿಜಾಪುರ-ಹುಬ್ಬಳ್ಳಿ ನಡುವೆ ನರಗುಂದ, ನವಲಗುಂದ ಮಾರ್ಗ; ಜಿಲ್ಲೆಯಲ್ಲಿರುವ ರಸ್ತೆ ಉದ್ದ 78.2 ಕಿ.ಮೀ.

ರಾಜ್ಯ ಹೆದ್ದಾರಿ ನಂ.65: ಬಿಜಾಪುರ, ಧಾರವಾಡ ನಡುವೆ ಜಮಖಂಡಿ, ರಾಮದುರ್ಗ, ಸವದತ್ತಿ ಮೂಲಕ ಜಿಲ್ಲೆಯಲ್ಲಿ ಹಾದುಹೋಗುವ ಈ ಮಾರ್ಗದ ಉದ್ದ 20.7 ಕಿ.ಮೀ.ಗಳು.

ಹೆದ್ದಾರಿ ನಂ.69: ಕುಮಟಾ, ಸಿರಸಿ, ಮುಂಡಗೋಡ, ತಡಸ ಮೂಲಕ; ಜಿಲ್ಲೆಯಲ್ಲಿರುವ ಈ ಮಾರ್ಗದ ಉದ್ದ 16 ಕಿ.ಮೀ.ಗಳು.

ರಾಜ್ಯ ಹೆದ್ದಾರಿ ನಂ.93: ಖಾನಾಪುರ, ತಾಳಗುಪ್ಪ ನಡುವೆ (ಸಿರಸಿ ಮತ್ತು ಸಿದ್ದಾಪುರ ಮಾರ್ಗ) ಜಿಲ್ಲೆಯಲ್ಲಿ ಈ ಮಾರ್ಗ ಕೇವಲ 4.05 ಕಿ.ಮೀ.ಗಳು ಹಾದುಹೋಗುತ್ತವೆ.

ರಸ್ತೆಗಳ ನಿರ್ವಹಣೆಯಲ್ಲಿ ಲೋಕೋಪಯೋಗಿ ಇಲಾಖೆಗೆ ಉತ್ತಮ ಪರಿಣತಿ ಇರುವುದರಿಂದ ತಾಲ್ಲೂಕ್ ಬೋರ್ಡ್, ಅರಣ್ಯ ಇಲಾಖೆ ಮುಂತಾದವುಗಳ ವಶವಿದ್ದ ರಸ್ತೆಗಳನ್ನು ವರ್ಗಾಯಿಸಿ ರಾಜ್ಯ ನಿಧಿಯ ರಸ್ತೆಗಳಾಗಿ ಪರಿವರ್ತಿಸಲಾಗಿದೆ. ಈ ರೀತಿ 1958-59 ನೇ ಸಾಲಿನಿಂದ 31.3.1991 ರವರೆಗೆ ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಲಾದ ರಸ್ತೆಗಳ ಉದ್ದ 4,401 ಕಿ.ಮೀ.ಗಳು.

(ಕೋಷ್ಟಕ 7.1 ಮತ್ತು 7.2 ಮುಂದಿನ ಪುಟದಲ್ಲಿ)

**ಕೋಷ್ಟಕ 7.3: ತಾಲೂಕ್‌ವಾರಾಗಿ ವಿವಿಧ ವರ್ಗಗಳ ರಸ್ತೆಗಳ ವಿವರಗಳ ಪಟ್ಟಿ**

(31.3.1993 ರಲ್ಲಿ) ಕಿ.ಮೀ.ಗಳಲ್ಲಿ

| | | ರಾಷ್ಟ್ರೀಯ ಹೆದ್ದಾರಿ | ರಾಜ್ಯ ಹೆದ್ದಾರಿ | ಜಿಲ್ಲಾ ಮುಖ್ಯ ರಸ್ತೆ | ಇತರ ಜಿಲ್ಲಾ ರಸ್ತೆ | ಹಳ್ಳಿಯ ರಸ್ತೆ | ಒಟ್ಟು |
|---|---|---|---|---|---|---|---|
| 1 | ಬ್ಯಾಡಗಿ | 11 | - | 50 | 12 | 465 | 538 |
| 2 | ಧಾರವಾಡ | 30 | 98 | 74 | - | 454 | 656 |
| 3 | ಗದಗ | - | 84 | 57 | - | 307 | 448 |
| 4 | ಹಾನಗಲ್ | - | 66 | 46 | - | 669 | 781 |
| 5 | ಹಾವೇರಿ | 19 | 44 | 54 | 8 | 477 | 602 |
| 6 | ಹಿರೇಕೆರೂರು | - | - | 132 | 15 | 764 | 911 |
| 7 | ಹುಬ್ಬಳ್ಳಿ | 27 | 72 | 40 | 8 | 280 | 427 |
| 8 | ಕಲಘಟಗಿ | - | 33 | 57 | 25 | 263 | 378 |
| 9 | ಕುಂದಗೋಳ | - | - | 51 | - | 352 | 403 |
| 10 | ಮುಂಡರಗಿ | - | 12 | 94 | - | 430 | 536 |
| 11 | ನರಗುಂದ | - | 40 | 13 | 8 | 214 | 275 |
| 12 | ನವಲಗುಂದ | - | 46 | 88 | 11 | 268 | 413 |
| 13 | ರಾಣೆಬೆನ್ನೂರು | 36 | - | 83 | - | 816 | 935 |
| 14 | ರೋಣ | - | 91 | 116 | - | 494 | 701 |
| 15 | ಸವಣೂರು | 7 | 22 | 14 | - | 329 | 372 |
| 16 | ಶಿಗ್ಗಾಂವಿ | 30 | 65 | 37 | 5 | 232 | 369 |
| 17 | ಶಿರಹಟ್ಟಿ | - | 22 | 89 | 5 | 521 | 637 |
| | ಒಟ್ಟು | 160 | 695 | 1095 | 97 | 7335 | 9382 |

**ಗ್ರಾಮೀಣ ಸಂಪರ್ಕ**

ಗ್ರಾಮಾಂತರ ಪ್ರದೇಶಗಳಲ್ಲಿ ವಾಸಮಾಡುವ ರೈತರು ತಮ್ಮ ಬೆಳೆಯನ್ನು ಮಾರುಕಟ್ಟೆಗಳಿಗೆ ತೆಗೆದುಕೊಂಡು ಹೋಗಲು ಅಥವಾ ಪಟ್ಟಣ ಪ್ರದೇಶಗಳಿಂದ ಅಗತ್ಯ ವಸ್ತುಗಳನ್ನು ತರಲು ಗ್ರಾಮೀಣ ರಸ್ತೆಗಳನ್ನು ಅವಲಂಬಿಸಿದ್ದಾರೆ. ಆದ್ದರಿಂದ ಹಳ್ಳಿಗಳಿಗೆ ಸರ್ವ ಋತು ಅಥವಾ ಯೋಗ್ಯ ಋತುವಿನ ರಸ್ತೆಗಳನ್ನು ನಿರ್ಮಿಸುವ ಕಾರ್ಯವನ್ನು ಎರಡನೇಯ ಪಂಚವಾರ್ಷಿಕ ಯೋಜನೆಯಲ್ಲಿ 1959-60 ನೇ ಸಾಲಿನಿಂದ ಪ್ರಾರಂಭಿಸಲಾಯಿತು. ಈ ಕಾರ್ಯಕ್ರಮದಲ್ಲಿ ಗ್ರಾಮೀಣ ರಸ್ತೆಗಳ ನಿರ್ಮಾಣ, ತಪ್ಪಿಹೋಗಿರುವ ರಸ್ತೆಗಳ ಜೋಡಣೆ ಹಾಗೂ ಲೋಕೋಪಯೋಗಿಯೇತರ ರಸ್ತೆಗಳಲ್ಲಿ 20 ಅಡಿಗಳಿಗಿಂತ ಹೆಚ್ಚಿನ ಉದ್ದದ ಅಡ್ಡ ಚರಂಡಿಗಳ (ಕ್ರಾಸ್ ಡ್ರೈನೇಜ್) ನಿರ್ಮಾಣ ಮುಖ್ಯವಾದವು.

**ಕೋಷ್ಟಕ 7.1 : 1956 ರಿಂದ 1994 ನೇ ಸಾಲಿನವರೆಗೆ ಜಿಲ್ಲೆಯಲ್ಲಿದ್ದ ವಿವಿಧ ವರ್ಗದ ರಸ್ತೆಗಳು (31.3.1994 ರವರೆಗೆ)**

(ಕಿ.ಮೀ.ಗಳಲ್ಲಿ)

| ವರ್ಷ | ರಾಷ್ಟ್ರೀಯ ಹೆದ್ದಾರಿ | ರಾಜ್ಯ ಹೆದ್ದಾರಿ | ಜಿಲ್ಲಾ ಪ್ರಮುಖ ರಸ್ತೆ | ಇತರೇ ಜಿಲ್ಲಾ ರಸ್ತೆ | ಹಳ್ಳಿಯ ರಸ್ತೆ | ಒಟ್ಟು | ನೀರಾವರಿ ಪ್ರದೇಶ ರಸ್ತೆ | ಟಿ.ಡಿ.ಬಿ ರಸ್ತೆ | ಅರಣ್ಯ ರಸ್ತೆ | ಒಟ್ಟು | ಮೇಲ್ಮೈ ಇರುವ ರಸ್ತೆ | ಮೇಲ್ಮೈ ಇಲ್ಲದ ರಸ್ತೆ | ರಸ್ತೆ ಉದ್ದ ಪ್ರತಿ 100 ಚ.ಕಿ.ಮೀ. |
|---|---|---|---|---|---|---|---|---|---|---|---|---|---|
| 1956 | 160 | 260 | 700 | 155 | - | 875 | - | 2188 | 55 | 3118 | 1192 | 1026 | 22 |
| 1966 | 160 | 313 | 1078 | 43 | 618 | 2212 | - | 1420 | 58 | 3690 | 1986 | 1704 | 26 |
| 1976 | 160 | 370 | 1137 | 318 | 1827 | 3812 | - | 1585 | 45 | 5442 | 3484 | 1958 | 40 |
| 1986 | 160 | 370 | 1262 | 242 | 3682 | 5716 | 54 | 1131 | 45 | 6946 | 5412 | 1534 | 51 |
| 1989 | 160 | 694 | 1103 | 97 | 3663 | 5709 | 157 | 1141 | 45 | 7052 | 5747 | 1305 | 51 |
| 1990 | 160 | 695 | 1095 | 97 | 3661 | 5708 | 157 | 2473 | 45 | 8383 | 5967 | 2416 | 61 |
| 1991 | 160 | 695 | 1095 | 97 | 3671 | 5718 | 612 | 3007 | 45 | 9382 | 6280 | 3102 | 68 |
| 1994 | 160 | 654 | 2004 | 23 | 2836 | 5677 | 599 | 3007 | 45 | 9369 | - | - | - |

ಆಧಾರ: ಲೋಕೋಪಯೋಗಿ ಇಲಾಖೆ.

**ಕೋಷ್ಟಕ 7.2: ವಿವಿಧ ಇಲಾಖೆಗಳ ಅಧೀನದಲ್ಲಿದ್ದ ವಿವಿಧ ವರ್ಗಗಳ ರಸ್ತೆಗಳು ಹಾಗೂ ಅವುಗಳ ತಾಲೂಕವಾರು ವಿವರಗಳು.**

(ದಿನಾಂಕ 31.3.1992 ರಲ್ಲಿದ್ದಂತೆ ಕಿಲೋ ಮೀಟರ್‌ಗಳಲ್ಲಿ)

| ತಾಲ್ಲೂಕು | ರಾಷ್ಟ್ರೀಯ ಹೆದ್ದಾರಿ | ಲೋಕೋಪಯೋಗಿ ಇಲಾಖೆ | ಜಿಲ್ಲಾಪರಿಷತ್ ರಸ್ತೆ | ನೀರಾವರಿ ಪ್ರದೇಶ ರಸ್ತೆ | ತಾಲ್ಲೂಕ ಬೋರ್ಡ್ ರಸ್ತೆಗಳು | ಅರಣ್ಯ ಇಲಾಖೆ ರಸ್ತೆ | ರಾಷ್ಟ್ರೀಯ ಹೆದ್ದಾರಿ | ರಾಜ್ಯ ಹೆದ್ದಾರಿ | ಜಿಲ್ಲಾ ಪ್ರಮುಖ ರಸ್ತೆ | ಜಿಲ್ಲೆಯ ಇತರೇ ರಸ್ತೆ | ಹಳ್ಳಿಯ ರಸ್ತೆ | 8 ರಿಂದ 12 ಒಟ್ಟು | ಟಾರು ಹಾಕಿರುವುದು | ಜಲ್ಲಿ ಹಾಕಿರುವುದು |
|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 |
| ಧಾರವಾಡ | 30 | 172 | 184 | 72 | 184 | 14 | 30 | 98 | 74 | - | 454 | 656 | 220 | 242 |
| ಹುಬ್ಬಳ್ಳಿ | 27 | 112 | 203 | 40 | 45 | - | 27 | 72 | 40 | 8 | 280 | 427 | 180 | 189 |
| ಕಲಘಟಗಿ | - | 90 | 210 | 30 | 30 | 18 | - | 33 | 57 | 25 | 263 | 378 | 141 | 172 |
| ಕುಂದಗೋಳ | - | 51 | 207 | - | 145 | - | - | - | - | 51 | 352 | 403 | 59 | 170 |
| ಶಿಗ್ಗಾಂವಿ | 30 | 102 | 150 | - | 78 | 9 | 30 | 65 | 37 | 5 | 232 | 369 | 149 | 139 |
| ಹಾವೇರಿ | 19 | 98 | 294 | 44 | 147 | - | 19 | 44 | 54 | 8 | 477 | 602 | 148 | 310 |
| ಹಾನಗಲ್ | - | 112 | 251 | 88 | 326 | 4 | - | 66 | 46 | - | 669 | 781 | 130 | 374 |
| ಹಿರೇಕೆರೂರು | - | 132 | 389 | 57 | 333 | - | - | - | 132 | 15 | 764 | 911 | 200 | 364 |
| ರಾಣೆಬೆನ್ನೂರು | 36 | 83 | 317 | 99 | 400 | - | 36 | - | 83 | - | 816 | 935 | 178 | 387 |
| ಬ್ಯಾಡಗಿ | 11 | 50 | 209 | - | 268 | - | 11 | - | 50 | 12 | 465 | 538 | 98 | 226 |
| ಸವಣೂರು | 7 | 36 | 197 | 3 | 129 | - | 7 | 22 | 14 | - | 329 | 372 | 68 | 205 |
| ಗದಗ | - | 141 | 227 | 25 | 55 | - | - | 84 | 57 | - | 307 | 448 | 204 | 135 |
| ಮುಂಡರಗಿ | - | 106 | 190 | 19 | 221 | - | - | 12 | 94 | - | 430 | 536 | 122 | 182 |
| ರೋಣ | - | 207 | 232 | 26 | 234 | - | - | 91 | 116 | - | 494 | 699 | 213 | 217 |
| ನರಗುಂದ | - | 53 | 136 | 44 | 42 | - | - | 40 | 13 | 8 | 214 | 275 | 69 | 148 |
| ನವಲಗುಂದ | - | 134 | 187 | 47 | 33 | - | - | 46 | 88 | 11 | 256 | 401 | 139 | 217 |
| ಶಿರಹಟ್ಟಿ | - | 111 | 185 | 4 | 337 | - | - | 22 | 89 | 5 | 521 | 637 | 132 | 154 |

ಆಧಾರ: ಲೋಕೋಪಯೋಗಿ ಇಲಾಖೆ

ಧಾರವಾಡ ಜಿಲ್ಲೆಯಲ್ಲಿ 1961-62 ರಿಂದ 1964-65 ರವರೆಗೆ ಗ್ರಾಮೀಣ ರಸ್ತೆಗಳ ನಿರ್ಮಾಣದ ಪ್ರಗತಿ ಮತ್ತು ಅದಕ್ಕೆ ತಗುಲಿದ ವೆಚ್ಚ.

| | ಕಿ.ಮೀ.ಗಳಲ್ಲಿ | ಲಕ್ಷಗಳಲ್ಲಿ |
|---|---|---|
| 1961-62 | 563.00 | 39.35 |
| 1962-63 | 0.00 | 3.97 |
| 1963-64 | 373.58 | 3.38 |
| 1964.65 | 69.80 | 4.23 |
| | 1006.38 | 51.53 |

ಇದೇ ಕಾರ್ಯಕ್ರಮದಂತೆ 31.3.1964 ರವರೆಗೆ 51 ಅಡ್ಡ ಚರಂಡಿಗಳು ಅಥವಾ ಕ್ರಾಸ್ ಡ್ರೈನೇಜ್‌ಗಳನ್ನು ಪೂರ್ಣಗೊಳಿಸಲಾಯಿತು.

ಗ್ರಾಮೀಣ ರಸ್ತೆಗಳ ಸಂಪರ್ಕ ಕಾರ್ಯಕ್ರಮದಲ್ಲಿ ದಿನಾಂಕ 31.3.1961 ರಿಂದ 31.3.1974 ರವರೆಗೆ ಪೂರ್ಣಗೊಳಿಸಿದ ರಸ್ತೆಗಳ ಒಟ್ಟು ಉದ್ದ ಹಾಗೂ ಅದಕ್ಕೆ ತಗುಲಿದ ವೆಚ್ಚದ ವಿವರಗಳ ಪಟ್ಟಿ. (ಕಿ.ಮೀ.ಗಳಲ್ಲಿ) ಪೂರ್ಣಗೊಳಿಸಿದ ಒಟ್ಟು ಉದ್ದ: 1,066 ಕಿ.ಮೀ, 31.3.61 ರಿಂದ 31.3.1974 ರವರೆಗೆ; ವಾರ್ಷಿಕವಾಗಿ: 1969-1,178; 1971-1,390; 1972-1,457; 1973-1,516; 1974-1,746.

ಐದನೇಯ ಪಂಚವಾರ್ಷಿಕ ಯೋಜನೆಯಲ್ಲಿ (1974-1979) ಗ್ರಾಮೀಣ ಸಂಪರ್ಕ ಕಾರ್ಯಕ್ರಮವನ್ನು ಕನಿಷ್ಠ ಅಗತ್ಯಗಳ ಕಾರ್ಯಕ್ರಮದಲ್ಲಿ ('ಮಿನಿಮಮ್ ನೀಡ್ಸ್ ಪ್ರೋಗ್ರಾಮ') ಸೇರಿಸಲಾಯಿತು. ಇದರ ಅನುಸಾರ ಕಡಿಮೆ ಜನಸಾಂದ್ರತೆಯುಳ್ಳ ಪ್ರದೇಶಗಳಲ್ಲಿ 1000 ಕ್ಕಿಂತ ಹೆಚ್ಚಿನ ಜನಸಂಖ್ಯೆಯುಳ್ಳ ಹಳ್ಳಿಗಳಿಗೆ ಹಾಗೂ ಹೆಚ್ಚಿನ ಜನ ಸಾಂದ್ರತೆಯುಳ್ಳ ಪ್ರದೇಶಗಳಲ್ಲಿ 1,500 ಕ್ಕಿಂತ ಹೆಚ್ಚು ಜನ ಸಂಖ್ಯೆಯುಳ್ಳ ಹಳ್ಳಿಗಳಿಗೆ ಸರ್ವ ಋತು ಸಂಪರ್ಕ ಕಲ್ಪಿಸಲು ಉದ್ದೇಶಿಸಲಾಗಿತ್ತು. ಇಂತಹ 28 ಹಳ್ಳಿಗಳನ್ನು ವಿವಿಧ ತಾಲ್ಲೂಕುಗಳಲ್ಲಿ ಗುರುತಿಸಲಾಗಿದ್ದು ಸುಮಾರು 86.27 ಲಕ್ಷ ರೂಪಾಯಿಗಳ ಅಂದಾಜು ವೆಚ್ಚದಲ್ಲಿ 246.50 ಕಿ.ಮೀ. ಉದ್ದದ ರಸ್ತೆಗಳನ್ನು ನಿರ್ಮಾಣ ಮಾಡಬೇಕಿತ್ತು. 1979 ರಲ್ಲಿ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ರಾಜ್ಯದಲ್ಲಿ ಒಂದು ಮಹಾ ಯೋಜನೆಯನ್ನು ('ಮಾಸ್ಟರ್ ಪ್ಲ್ಯಾನ್') ತಯಾರಿಸಲಾಯಿತು.

**ಕೋಷ್ಟಕ 7.4: ಜಿಲ್ಲೆಯಲ್ಲಿ ಹಳ್ಳಿಗಳು ಹೊಂದಿದ್ದ ರಸ್ತೆ ಸೌಲಭ್ಯದ ವಿವರಗಳ ಪಟ್ಟಿ**

(ದಿನಾಂಕ 31.3.79, 85 ಹಾಗೂ 94 ನೇ ಸಾಲಿನಲ್ಲಿ)

| | ಸರ್ವಋತು ರಸ್ತೆಗಳಿರುವ ಹಳ್ಳಿಗಳು | ಯೋಗ್ಯ ಋತುವಿನ ರಸ್ತೆಗಳಿರುವ ಹಳ್ಳಿಗಳು | ಕಚ್ಚಾ ಅಥವಾ ವಾಹನ ಯೋಗ್ಯ ವಲ್ಲದ ರಸ್ತೆಗಳಿರುವ ಹಳ್ಳಿಗಳು | ಯಾವುದೇ ರಸ್ತೆಯು ಇಲ್ಲದ ಹಳ್ಳಿಗಳ ಸಂಖ್ಯೆ | ಒಟ್ಟು |
|---|---|---|---|---|---|
| 31.3.1979 | 550 | 365 | 369 | 56 | 1,340 |
| 31.3.1982 | 633 | 420 | 249 | 38 | 1,340* |
| 31.3.1985 | 856 | 324 | 131 | 11 | 1,322 |
| 31.3.1994 | 1051 | 213 | 58 | - | 1,322 |

* ಮುಂದೆ ಕಂದಾಯ ಗ್ರಾಮಗಳ ಸಂಖ್ಯೆ ಕಡಿತವಾಗಿದೆ.

## ಕೋಷ್ಟಕ 7.5

### ದಿನಾಂಕ 31.3.94 ರ ಅಂತ್ಯಕ್ಕೆ ಧಾರವಾಡ ಜಿಲ್ಲೆಯ ವಿವಿಧ ವರ್ಗಗಳ ರಸ್ತೆ ಸಂಪರ್ಕವನ್ನು ಹೊಂದಿದ್ದ ತಾಲೂಕುವಾರು ಹಳ್ಳಿಗಳ ಸಂಖ್ಯೆ

| | | ಸರ್ವ ಋತು | ಯೋಗ್ಯ ಋತು | ವಾಹನ ಯೋಗ್ಯ |
|---|---|---|---|---|
| 1 | ಧಾರವಾಡ | 11 | 20 | 8 |
| 2 | ಹುಬ್ಬಳ್ಳಿ | 41 | 6 | - |
| 3 | ಕಲಘಟಗಿ | 66 | 7 | 9 |
| 4 | ಶಿಗ್ಗಾಂವಿ | 78 | 11 | 4 |
| 5 | ಕುಂದಗೋಳ | 39 | 15 | 2 |
| 6 | ಹಾವೇರಿ | 81 | 5 | - |
| 7 | ಹಾನಗಲ್ | 69 | 64 | 9 |
| 8 | ಹಿರೇಕೆರೂರು | 98 | 11 | 15 |
| 9 | ರಾಣೆಬೆನ್ನೂರ | 103 | - | - |
| 10 | ಬ್ಯಾಡಗಿ | 52 | 8 | 2 |
| 11 | ಸವಣೂರು | 52 | 10 | - |
| 12 | ಗದಗ | 54 | - | - |
| 13 | ಶಿರಹಟ್ಟಿ | 61 | 15 | - |
| 14 | ನರಗುಂದ | 26 | 7 | - |
| 15 | ನವಲಗುಂದ | 48 | 8 | 2 |
| 16 | ಮುಂಡರಗಿ | 43 | 8 | - |
| 17 | ರೋಣ | 63 | 21 | 7 |
| | | 1051 | 213 | 58 |

**ಕನಿಷ್ಟ ಅಗತ್ಯಗಳ ಕಾರ್ಯಕ್ರಮ:** ಕನಿಷ್ಟ ಅಗತ್ಯಗಳ ಕಾರ್ಯಕ್ರಮವನ್ನು ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ್ದರೂ ಕೂಡ ಇದು ಪ್ರಾರಂಭವಾಗಿದ್ದು 1981ರಲ್ಲಿ. ಈ ಕಾರ್ಯಕ್ರಮದ ಅನ್ವಯ ಜಿಲ್ಲೆಯಲ್ಲಿ ಕೈಗೊಳ್ಳಲಾದ ಹಳ್ಳಿ ರಸ್ತೆಗಳ ಕಾಮಗಾರಿಗಳು ಹಾಗೂ ಪೂರ್ಣಗೊಂಡ ರಸ್ತೆಗಳ ಉದ್ದವನ್ನು ಈ ಕೆಳಕಂಡಂತೆ ಕೊಟ್ಟಿದೆ.

| ವರ್ಷ | ತೆಗೆದುಕೊಂಡ ಹಳ್ಳಿ ರಸ್ತೆ ಕಾಮಗಾರಿಗಳು | ಹೊಸ ರಸ್ತೆಗಳು ಒಟ್ಟು ಉದ್ದ ಕಿ.ಮೀ. |
|---|---|---|
| 31.3.1981 | 22 | 117.85 |
| 81-82 | 3 | 23.00 |
| 82-83 | 1 | 1.00 |

| ವರ್ಷ | ತೆಗೆದುಕೊಂಡ ಹಳ್ಳಿ ರಸ್ತೆ ಕಾಮಗಾರಿಗಳು | ಹೊಸ ರಸ್ತೆಗಳು ಒಟ್ಟು ಉದ್ದ ಕಿ.ಮೀ. |
|---|---|---|
| 83-84 | 9 | 16.50 |
| 84-85 | 10 | 30.50 |

**ಸೇತುವೆಗಳು:** ಜಿಲ್ಲೆಯಲ್ಲಿ ಅನೇಕ ಕಡೆ ನದಿಗಳು ಹಾಗೂ ನಾಲಾಗಳು ರಸ್ತೆ ಸಂಚಾರಕ್ಕೆ ಅಡ್ಡಿ ಆಗಿದ್ದರಿಂದ ಸುಗಮ ಸಂಚಾರಕ್ಕೆ ಸೇತುವೆಗಳನ್ನು ನಿರ್ಮಿಸುವ ಪ್ರಯತ್ನಗಳು 1850 ರಿಂದಲೇ ಪ್ರಾರಂಭವಾಯಿತು. ಈ ದಿಸೆಯಲ್ಲಿ ಪುಣೆ-ಬೆಂಗಳೂರು ರಸ್ತೆಯಲ್ಲಿ ವರದಾ ನದಿಯ ಮೇಲಿನ ಸೇತುವೆ ಬಹು ಮುಖ್ಯವಾದದ್ದು. 400 ಅಡಿಗಳ ಉದ್ದದ ಇದನ್ನು 1866 ನೇ ಇಸ್ವಿಯಲ್ಲಿ 2,46,000 ರೂಪಾಯಿಗಳ ವೆಚ್ಚದಲ್ಲಿ ಪೂರ್ಣ ಮಾಡಿ ಸಂಚಾರಕ್ಕೆ ತೆರೆಯಲಾಯಿತು. ಪ್ರಮುಖವಾಗಿದ್ದ ಸೇತುವೆಗಳಲ್ಲಿ ಕುಮದ್ವತಿ ನದಿಗೆ ಮಾಸೂರಿಗೆ ಬಳಿ ಕಟ್ಟಲಾದ ಸೇತುವೆಯು ಒಂದು. ಸುಮಾರು 54.90 ಮೀಟರ್ ನೀರಿನ ಅಂತರವಿದ್ದ (ಲೀನಿಯರ್ ವಾಟರ್‌ವೇ) ಈ ಸೇತುವೆಗೆ ತಗುಲಿದ ವೆಚ್ಚ 2.30 ಲಕ್ಷ ರೂಪಾಯಿಗಳು. 1942 ರಲ್ಲಿ ಕಾರವಾರ-ಬಳ್ಳಾರಿ ರಸ್ತೆಯಲ್ಲಿ ನಲವಡಿಯ ಸಮೀಪ ಕಟ್ಟಿದ ಸೇತುವೆಯ ನೀರಿನ ಅಂತರ 70.08 ಮೀಟರ್‌ಗಳು. ಸುಮಾರು 120 ಅಡಿಗಳ ನೀರಿನ ಅಂತರವಿರುವ ಕಾಸ್‌ವೇಯು, ಕಾರವಾರ, ಬಳ್ಳಾರಿ ರಸ್ತೆಯಲ್ಲಿ ಭದ್ರಾಪುರದ ಬಳಿ ನಿರ್ಮಿಸಲ್ಪಟ್ಟಿತು (1923-24 ರಲ್ಲಿ). 1967 ರಲ್ಲಿ ಯಮನೂರು ಬಳಿ ರಾಜ್ಯ ಹೆದ್ದಾರಿಯ ಮೇಲೆ ಕಟ್ಟಿದ ಸೇತುವೆಯ ಉದ್ದ 175.59 ಮೀಟರ್‌ಗಳಾಗಿತ್ತು. ಈ ಕಾಮಗಾರಿಗೆ ತಗುಲಿದ ವೆಚ್ಚ 10.50 ಲಕ್ಷ ರೂಪಾಯಿಗಳು. ಸುಮಾರು 7.54 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕಾರವಾರ-ಬಳ್ಳಾರಿ ರಾಜ್ಯ ಹೆದ್ದಾರಿಯಲ್ಲಿ, ಶಿರಗುಪ್ಪ ಬಳಿ ಕಟ್ಟಲ್ಪಟ್ಟ ಸೇತುವೆಯ ನೀರಿನ ಅಂತರ (ಲಿನಿಯರ್ ವಾಟರ್‌ವೇ) 98.49 ಮೀಟರ್‌ಗಳು. 1970 ರಲ್ಲಿ ವರದಾನದಿಗೆ ಬಸಾಪುರ-ಮರೋಳ ರಸ್ತೆಯಲ್ಲಿ ನಿರ್ಮಿಸಿದ (ಹಾವೇರಿ ವಿಭಾಗದಲ್ಲಿ) ಸೇತುವೆಗೆ ತಗುಲಿದ ವೆಚ್ಚ 6.50 ಲಕ್ಷ ರೂಪಾಯಿಗಳು. ತುಂಗಭದ್ರಾ ನದಿಗೆ ಹಾವನೂರು-ಎಕ್ಕಂಬಿ ರಸ್ತೆಯಲ್ಲಿ ನಿರ್ಮಿಸಿರುವ ಸೇತುವೆ 73-74 ರಲ್ಲಿ ಮುಗಿಸಲ್ಪಟ್ಟಿತು. ಸುಮಾರು 366 ಮೀಟರ್ ನೀರಿನ ಅಂತರದ ಈ ಸೇತುವೆಗೆ ತಗುಲಿದ ಖರ್ಚು 26.00 ಲಕ್ಷ ರೂಪಾಯಿಗಳು. ಇತ್ತೀಚಿನ ವರ್ಷಗಳಲ್ಲಿ ಕಟ್ಟಿದ ಸೇತುವೆಗಳಲ್ಲಿ ಹೊಸರಿತ್ತಿ-ಲಕ್ಷ್ಮೇಶ್ವರ ರಸ್ತೆಯಲ್ಲಿ, ಹೊಸರಿತ್ತಿ ಬಳಿ ನಿರ್ಮಿಸಿದ ಸೇತುವೆಯು ಒಂದು. ಈ 179 ಮೀಟರ್ ನೀರಿನ ಅಂತರವಿರುವ ಸೇತುವೆಗೆ ಆಗಿರುವ ಖರ್ಚು 15.44 ಲಕ್ಷ ರೂಪಾಯಿಗಳು. ಮನಗುಂದ-ಬ್ಯಾಡಗಿ ನಡುವೆ ಕುಸನೂರು ಬಳಿಯ ಸೇತುವೆ 1979-80 ರಲ್ಲಿ ಪೂರ್ಣಗೊಂಡಿತು. 42 ಮೀಟರ್ ನೀರಿನ ಅಂತರದ ಈ ರಸ್ತೆಯನ್ನು ನಿರ್ಮಿಸಲು ವೆಚ್ಚವಾದ ಹಣ 6.60 ಲಕ್ಷ ರೂಪಾಯಿಗಳು. ಹೊಸ ಸೇತುವೆಗಳ ನಿರ್ಮಾಣ ಹಾಗೂ ಹಳೇಯ ಸೇತುವೆಗಳ ರಿಪೇರಿ, ನಿರ್ವಹಣೆ ಇತ್ಯಾದಿಗಳಿಗೆ ಸರ್ಕಾರವು ಪ್ರತೀವರ್ಷ ಸಾಕಷ್ಟು ಹಣ ವ್ಯಯಮಾಡುತ್ತಿದೆ. ಈ ಬಾಬುಗಳಿಗೆ 1961-62 ರಿಂದಲೂ ಖರ್ಚು ಮಾಡುತ್ತಿರುವುದು (ಲಕ್ಷ ರೂ.ಗಳಲ್ಲಿ) ಈ ರೀತಿ ಇದೆ.

1961-62: 10.06; 1966-67: 29.35; 1971-72: 27.56; 1974-75: 4.47; 1975-76: 4.92; 1979-80: 28.46; 1980-81: 48.93; 1981-82: 28.77; 1985-86:37.56; 1992-93: 24.31.

**ಕೋಷ್ಟಕ 7.6: ರಾಷ್ಟ್ರೀಯ ಹೆದ್ದಾರಿಗಳು ಹಾಗೂ ರಾಜ್ಯ ನಿಧಿಯ ರಸ್ತೆಗಳಲ್ಲಿದ್ದ ಸಣ್ಣ ಸೇತುವೆಗಳು ಹಾಗೂ ಕಲ್‌ವರ್ಟ (ಅಡ್ಡಬರಂಡಿ)ಗಳ ಸಂಖ್ಯೆ**

| | 6 ಮೀಟರ್‌ಗಳಿಗಿಂತ ಕಡಿಮೆ | 6 ರಿಂದ 12 ಮೀ. ಒಳಗೆ | 12 ಮೀ. ಗಿಂತ ಹೆಚ್ಚು 18 ಮೀಗಿಂತ ಕಡಿಮೆ | 18 ಮೀ.ಗಿಂತ ಹೆಚ್ಚು 24 ಮೀ. ಗಿಂತ ಕಡಿಮೆ | 24ಮೀ. ಗಿಂತ ಹೆಚ್ಚು 30 ಮೀ. ಗಿಂತ ಕಡಿಮೆ | ಒಟ್ಟು | 30 ಮೀ.ಗಿಂತ ಹೆಚ್ಚು 60ಮೀ ಗಿಂತ ಕಡಿಮೆ |
|---|---|---|---|---|---|---|---|
| 31.3.1982 | 2569 | 183 | 41 | 46 | 45 | 2884 | - |
| 31.3.1986 | 3529 | 318 | 90 | 70 | 62 | 4069 | 65 |
| 31.3.1992 | 4870 | 404 | 116 | 72 | 61 | 5523 | 71 |

## ಜಿಲ್ಲಾ ಪರಿಷತ್ ರಸ್ತೆಗಳು

ಧಾರವಾಡ ಜಿಲ್ಲಾ ಪರಿಷತ್ ದಿನಾಂಕ 1.4.1987 ರಿಂದ ಕಾರ್ಯವನ್ನು ಪ್ರಾರಂಭಿಸಿತು. ಗ್ರಾಮಾಂತರ ಪ್ರದೇಶಗಳ ಅನೇಕ ರಸ್ತೆಗಳನ್ನು ಜಿಲ್ಲಾ ಪರಿಷತ್ ಗಳಿಗೆ ವಹಿಸಲಾಯಿತು. ಈಗ ಜಿಲ್ಲಾ ಪರಿಷತ್ ಗ್ರಾಮಾಂತರ ಪ್ರದೇಶಗಳಲ್ಲಿ ಸೇತುವೆಗಳ ಹಾಗೂ ರಸ್ತೆಗಳು ನಿರ್ಮಾಣ, ರಿಪೇರಿ ಇತ್ಯಾದಿಗಳನ್ನು ಸರ್ಕಾರದ ನಿಧಿಗಳ ಮೂಲಕ ಕೈಗೊಳ್ಳುತ್ತಿದೆ. 1987-88ನೇ ಸಾಲಿನಿಂದ 1991-92ನೇ ಸಾಲಿನವರೆಗೆ ಜಿಲ್ಲಾ ಪರಿಷತ್ತಿನ ವತಿಯಿಂದ ನಡೆದ ಅಭಿವೃದ್ಧಿ ಕಾರ್ಯಗಳ ವಿವರಗಳು ಈ ಕೆಳಕಂಡಂತಿದೆ.

| ವಿವರಗಳು | | 87-88 | 88-89 | 89-90 | 90-91 | 91-92 |
|---|---|---|---|---|---|---|
| 1. ಗ್ರಾಮಾಂತರ ಸಂಪರ್ಕ | ಕಿಮೀ | 1 | 2 | – | - | 1 |
| 2. ಗ್ರಾಮಾಂತರ ರಸ್ತೆಗಳ ಸುಸಂಘಟಿತ ಯೋಜನೆ | ” | 1 | 4 | 7 | 2 | 9 |
| 3. ಸೇತು ಬಂಧನ | ನಂ. | 9 | 9 | 24 | 8 | 10 |
| 4. ಹಳ್ಳಿಯ ಪರಿಮಿತಿ ರಸ್ತೆಗಳಿಗೆ ಡಾಂಬರು ಹಾಕುವುದು | ಕಿಮೀ | 2 | 2 | - | - | 3 |
| 5. ರಸ್ತೆಗಳಿಗೆ ಡಾಂಬರು ಹಾಕುವುದು | ” | 11 | - | 47 | 1 | 12 |
| 6. ಇತರ ರಸ್ತೆಗಳ ನಿರ್ಮಾಣ | ” | 11 | - | 4 | 7 | 12 |
| 7. ಹೊಸ ಸೇತುವೆಗಳು | ನಂ. | 15 | 1 | 9 | 7 | 5 |
| 8. ಹಳ್ಳಿ ಹೆದ್ದಾರಿ | ಕಿಮೀ. | 1 | 2 | 7 | 1 | 7 |
| 9. ಜನಗಳ ನೆರವಿನಿಂದ ರಸ್ತೆ ನಿರ್ಮಾಣ | ” | - | - | 2 | - | 4 |
| 10. ಗ್ರಾಮಾಂತರ ಸಂಪರ್ಕ | ” | 3 | 7 | 6 | 12 | 11 |
| 11. ಅವಶ್ಯ ಕಾರ್ಯಕ್ರಮ (ಎಂ.ಎನ್.ಪಿ.) | ” | 14 | - | - | - | - |
| 12. ಹರಿಜನ ವಾಡಾ ರಸ್ತೆಗಳು | ” | 13 | 12 | 28 | 21 | 25 |
| 13. ಸಕ್ಕರೆ ಕಾರ್ಖಾನೆ ಪ್ರದೇಶದಲ್ಲಿ ರಸ್ತೆ ನಿರ್ಮಾಣ | ” | – | - | 2 | 4 | 5 |
| 14. ರಸ್ತೆಗಳು ಮತ್ತು ಸೇತುವೆಗಳ ನಿರ್ಮಾಣ ಹಾಗೂ ರಿಪೇರಿ ಇತ್ಯಾದಿಗಳಿಗೆ ಸರ್ಕಾರದ ನಿಧಿಗಳ ಮೂಲಕ ಮಾಡಲಾದ ವೆಚ್ಚ | ಲಕ್ಷ ರೂ. ಗಳಲ್ಲಿ | 102 | 103 | 270 | 118 | 219 |

(ಮೂಲ : ಜಿಲ್ಲಾ ಪರಿಷತ್ ಆಡಳಿತ ವರದಿಗಳು)

## ಸಂಚಾರ ಗಣತಿ ಮತ್ತು ವಾಹನ ಸಮೀಕ್ಷೆ

ಲೋಕೋಪಯೋಗಿ ಇಲಾಖೆಯ 1959ನೇ ಸಾಲಿನಿಂದಲೂ ಸಂಚಾರ ಗಣತಿ ಮತ್ತು ವಾಹನ ಸಮೀಕ್ಷೆಯನ್ನು ಕೈಗೊಳ್ಳುತ್ತಿದೆ. ಇದಲ್ಲದೇ ಆಯ್ದ ರಸ್ತೆಗಳಲ್ಲಿ ಪ್ರತಿ ವರ್ಷವೂ ಮಾದರಿ ಸಮೀಕ್ಷೆಯನ್ನು ನಡೆಸಲಾಗುತ್ತಿದೆ. ಈ ಸಮೀಕ್ಷೆಗಳ ಉದ್ದೇಶ ರಸ್ತೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಸಂಗ್ರಹಿಸಿ, ಅಭಿವೃದ್ಧಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವುದೇ ಆಗಿದೆ. ಧಾರವಾಡ ಜಿಲ್ಲೆಯಲ್ಲಿ 1992-93ನೇ ಸಾಲಿನಲ್ಲಿ ಕೈಗೊಂಡ ಸಮೀಕ್ಷೆ ಸಮಯದಲ್ಲಿ 32 ಗಣತಿ ಕೇಂದ್ರಗಳನ್ನು ರಾಜ್ಯ ಹೆದ್ದಾರಿಯಲ್ಲಿ ಹಾಗೂ 111 ಗಣತಿ ಕೇಂದ್ರಗಳನ್ನು ಜಿಲ್ಲಾ ಮುಖ್ಯ ರಸ್ತೆಗಳಲ್ಲೂ ಸ್ಥಾಪಿಸಲಾಗಿತ್ತು. ಈ ಸಮೀಕ್ಷೆಗಳಲ್ಲಿ ಕಂಡುಬಂದ ಅಂಶಗಳು ಕೆಳಕಂಡಂತಿದೆ.

**ಪ್ರತೀ ಗಣತಿ ಕೇಂದ್ರದಲ್ಲಿ ದಿನದ 24 ಗಂಟೆಗಳಲ್ಲಿ ಕಂಡು ಬಂದ ಸರಾಸರಿ ಸಂಚಾರ ದಟ್ಟಣೆ (ಮೆಟ್ರಿಕ್ ಟನ್‌ಗಳಲ್ಲಿ)**

| ವರ್ಷ | ರಾಜ್ಯ ಹೆದ್ದಾರಿಗಳು | ಜಿಲ್ಲಾ ಮುಖ್ಯ ರಸ್ತೆಗಳು | ಇತರ ಜಿಲ್ಲಾ ರಸ್ತೆಗಳು | ಹಳ್ಳಿಯ ರಸ್ತೆಗಳು | ಒಟ್ಟು |
|---|---|---|---|---|---|
| 1970-71 | 2,027 | 852 | 663 | 289 | 959 |
| 1987-88 | 4,906 | 2,140 | 1,165 | 1,083 | 1,657 |
| * 1992-93 | 5,432 | 1,424 | 465 | 7,271 | 1,394 |

* (ತಾತ್ಕಲಿಕ ಅಂಕಿ ಅಂಶಗಳು)

ರಾಜ್ಯ ಹೆದ್ದಾರಿಯ ಮೂಲಕ ಸಾಗಿಸಲ್ಪಟ್ಟ ಸರಕು 1970-71ನೇ ಸಾಲಿನಲ್ಲಿ ದಿನದ 24 ಗಂಟೆಗಳಲ್ಲಿ 2,027 ಮೆಟ್ರಿಕ್ ಟನ್ ಆಗಿದ್ದರೆ 1987-88ರಲ್ಲಿ ಇದು 4,906 ಮತ್ತು 1992-93ರಲ್ಲಿ 5,432 ಮೆ.ಟನ್ ಆಗಿತ್ತು. ಇದೇ ರೀತಿ ಎಲ್ಲಾ ವರ್ಗಗಳ ರಸ್ತೆಗಳಲ್ಲಿ ಸರಕು ಸಾಗಾಣಿಕೆ ತೀವ್ರ ರೀತಿಯಲ್ಲಿ ಏರಿಕೆಯಾಗಿರುವುದು ಕಂಡು ಬಂದಿದೆ.

**ಹಾಯ್ಗಡ**

ಅನೇಕ ಹೊಳೆಗಳು ಮತ್ತು ನದಿಗಳು ಜಿಲ್ಲೆಯಲ್ಲಿ ಹರಿಯುತ್ತಿದ್ದು ಇವುಗಳನ್ನು ದಾಟಲು 1883-84 ರಲ್ಲಿ, 30 ಹಾಯ್ಗಡ (ಕಡವು ಅಥವಾ ಫೆರ್ರಿ)ಗಳು ವಿವಿಧ ಭಾಗಗಳಲ್ಲಿದ್ದವು. ಇವುಗಳಲ್ಲಿ ಮೂರು ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿದ್ದು ಉಳಿದವು ಡಿಸ್ಟ್ರಿಕ್ಟ ಲೋಕಲ್ ಬೋರ್ಡ್‌ಗಳ ಅಧೀನದಲ್ಲಿದ್ದವು. ಲೋಕೋಪಯೋಗಿ ಇಲಾಖೆ ಆಡಳಿತದಲ್ಲಿದ್ದವುಗಳಲ್ಲಿ ಒಂದನೇಯದು, ಮುಂಡರಗಿ ಬಳಿ ಹೆಸ್ರೂರ್‌ನ ಹತ್ತಿರ ತುಂಗಭದ್ರಾನದಿಯ ಹಾಯ್ಗಡ, ಧಾರವಾಡ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಸಂಪರ್ಕ ಕಲ್ಪಿಸುತ್ತಿತ್ತು. (ಮೂರು ದೋಣಿಗಳ ಮೂಲಕ ಸೇವೆ ಒದಗಿಸಲಾಗುತ್ತಿತ್ತು). ಎರಡನೇಯದು ಹಾವನೂರು-ಎಕ್ಕಂಬಿ ರಸ್ತೆಯಲ್ಲಿ ತುಂಗಭದ್ರಾ ನದಿಗೆ, ಮೂರನೇಯದು ಸಂಗೂರಿನ ಬಳಿ ವರದಾನದಿಗೆ (ಹಾವೇರಿ ತಾಲೂಕು). ರಸ್ತೆ ಸಂಚಾರಕ್ಕೆ ನದಿಗಳು ಹಾಗೂ ಹೊಳೆಗಳಿಂದ ಅಡ್ಡಿಯುಂಟಾಗುತ್ತಿತ್ತು.

ಸ್ವಾತಂತ್ರ್ಯಾನಂತರ ಪಂಚವಾರ್ಷಿಕ ಯೋಜನೆಗಳಲ್ಲಿ ನಿರ್ಮಿಸಿದ ಉತ್ತಮ ರಸ್ತೆಗಳು ಹಾಗೂ ಸೇತುವೆಗಳು ಜಿಲ್ಲೆಯ ವಿವಿಧ ಭಾಗಗಳಿಗೆ ಸಂಪರ್ಕ ಕಲ್ಪಿಸಿವೆ. ಮೋಟಾರು ವಾಹನಗಳ ಸಂಚಾರ ಹೆಚ್ಚಾಗಿದೆ. ಆದರೂ ಸಹ ಜನರು ಕೆಲವು ಕಡೆ ನದಿ ಅಥವಾ ಹೊಳೆಗಳನ್ನು ದಾಟಲು ಹಾಯ್ಗಡಗಳನ್ನು ಅವಲಂಬಿಸಿರುತ್ತಾರೆ. 1981 ರಲ್ಲಿ ಜಿಲ್ಲೆಯಲ್ಲಿ 30 ಹಾಯ್ಗಡಗಳಲ್ಲಿ ಒಂದನ್ನು ಇಲಾಖೆಯ ವತಿಯಿಂದ ನಡೆಸಲ್ಪಟ್ಟು, ಮೂರು ಗುತ್ತಿಗೆಯ ಮೂಲಕ ನಡೆಸಲ್ಪಡುತ್ತಿತ್ತು. ಇವುಗಳಲ್ಲಿ ಹೆಸರೂರು ಮತ್ತು ಸೋವಿನಹಳ್ಳಿ ನಡುವಣದನ್ನು (ತುಂಗಭದ್ರಾ) ಒಳನಾಡು ಜಲಸಾರಿಗೆ ಇಲಾಖೆಯೆ ನಡೆಸುತ್ತಿತ್ತು. ತುಂಗಭದ್ರಾ ನದಿಯ ಮೂರು ಹಾಯ್ಗಡಗಳನ್ನು ಇಲಾಖೆಯ ಹರಾಜು ಗುತ್ತಿಗೆಯ ಮೇಲೆ ನಡೆಸಲಾಗುತ್ತಿತ್ತು. ಅದೆಂದರೆ, 1. ಇಟಗಿ, ಶಿರಹಟ್ಟಿ ನಡುವೆ 2. ಕೊರ್ಲಹಳ್ಳಿ-ಮಾಹಲಗಟ್ಟಿ 3. ಸಿಂಗಟಾಲೂರ್-ನವಲಿಮಧ್ಯೆ. ದಿನಾಂಕ 31.3.1992 ರಲ್ಲೂ ಜಿಲ್ಲೆಯಲ್ಲಿ ಒಟ್ಟು 26 ಹಾಯ್ಗಡಗಳಿದ್ದು ಅವುಗಳಲ್ಲಿ ಒಂದು ಇಲಾಖೆ ನಿರ್ವಹಣೆಯಲ್ಲಿದ್ದು ಇತರ ಮೂರನ್ನು ಗುತ್ತಿಗೆಯ ಮೇಲೆ ನಡೆಸಲಾಗುತ್ತಿತ್ತು. ಇವುಗಳ ಆಡಳಿತ ಮತ್ತು ಹತೋಟಿ ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆಗೆ ಸೇರಿದೆ.

ಇತ್ತೀಚೆಗೆ ಜಿಲ್ಲೆಯಲ್ಲಿ ಎರಡು ದೋಣಿ ದುರಂತಗಳು ಸಂಭವಿಸಿದವು. ಮೊದಲನೇಯದು ರಾಣೆಬೆನ್ನೂರು ತಾಲ್ಲೂಕಿನ ತುಂಗಭದ್ರಾ ನದಿಯ ಚಿಕ್ಕಕುರುವತ್ತಿ-ಹಿರೇಕುರುವತ್ತಿ ಹಾಯ್ಗಡದಲ್ಲಿ ದಿನಾಂಕ 16.8.93 ರಲ್ಲಿ ಸಂಭವಿಸಿದ ದೋಣಿ ದುರಂತ. ಇದರಲ್ಲಿ 7 ಜನ ಪ್ರಯಾಣಿಕರು ಬಲಿಯಾದರು. ಪರಿಣಾಮವಾಗಿ ಮೈಲಾರ ಮಂಡಲ ಪಂಚಾಯ್ತಿಯ ಅಧೀನದಲ್ಲಿದ್ದ ಈ ಹಾಯ್ಗಡವನ್ನು ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ವರ್ಗಾಯಿಸಿ, ಇಲಾಖೆಯ ವತಿಯಿಂದಲೇ ಯಾಂತ್ರಿಕ ದೋಣಿಯನ್ನು ತೊಡಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಎರಡನೇಯ ದುರಂತವು ಮುಂಡರಗಿ ತಾಲ್ಲೂಕಿನಲ್ಲಿ ಹರಿಯುವ ತುಂಗಭದ್ರಾ

## ಧಾರವಾಡ ಜಿಲ್ಲೆಯಲ್ಲಿರುವ ಕಡವುಗಳ ವಿವರಗಳು (ಜನವರಿ 1995 ರಲ್ಲಿದ್ದಂತೆ)

| ಕ್ರಮ ಸಂಖ್ಯೆ | ಕಡವಿನ ಹೆಸರು | ನದಿಯ ಹೆಸರು | ತಾಲೂಕು | ಕಡವು ಸೇವೆಯನ್ನು ನಡೆಸುತ್ತಿರುವ ಪ್ರಾಧಿಕಾರ |
|---|---|---|---|---|
| 1. | ಬೇಲೂರು-ಹಲವಾಗಲು | ತುಂಗಭದ್ರಾ | ರಾಣೆಬೆನ್ನೂರು | ಗ್ರಾಮ ಪಂಚಾಯ್ತಿ, ಬೆಲೂರು |
| 2. | ಹಿರೇಬಿದರಿ-ಚಿಕ್ಕಬಿದರಿ | ” | ” | ಗ್ರಾಮ ಪಂಚಾಯ್ತಿ, ಹಿರೇಬಿದರಿ |
| 3. | ಸೋಮಲಾಪುರ-ನಿಟ್ಟೂರು | ” | ” | ” |
| 4. | ಉದ್ಗಟ್ಟಿ-ತಾವರಗುಂದಿ | ” | ” | ಗ್ರಾಮ ಪಂಚಾಯ್ತಿ, ಬೆಲೂರು |
| 5. | ಐರಣಿ-ಸಾರ್ಥಿ | ” | ” | ” |
| 6. | ಮಡ್ಲೇರಿ-ವಸಾಪುರ | ” | ” | ಗ್ರಾಮ ಪಂಚಾಯ್ತಿ, ವಡ್ಲೂರು |
| 7. | ಹೊಳೆ ಆನ್ವೇರಿ-ಇಂಗಳಗುಂದಿ | ” | ” | ” |
| 8. | ಕೋಟಿಹಾಳ-ಎಲಿಹಲಿ | ” | ” | ನಟುವಳ್ಳಿ ಗ್ರಾಮದವರಿಂದ ತಾಲೂಕ್ ಪಂಚಾಯ್ತಿ ಸಮಿತಿ ರಾಣೆಬೆನ್ನೂರು |
| 9. | ಮುದೇನೂರು-ಇಂಗಳಗುಂದಿ | ” | ” | ” |
| 10. | ಕಳಸೂರು-ದೇವಗಿರಿ | ವರದಾ | ಸವಣೂರು | ತಾಲೂಕ್ ಪಂಚಾಯ್ತಿ, ಸವಣೂರು |
| 11. | ನದೀನೀರಲಗಿ-ಕೋಣನತಂಬಿಗಿ | ” | ” | ” |
| 12. | ಬಾಳಂಬೀಡು-ಲಕಮಾಪುರ | ” | ಹಾನಗಲ್ | ಕ್ಷೇತ್ರಾಭಿವೃದ್ಧಿ ಅಧಿಕಾರಿ, ಹಾನಗಲ್ |
| 13. | ಹಾವಣಗಿ-ಸೋಮಲಾಪುರ | ” | ” | ” |
| 14. | ಅಡೂರು-ತುಮರಿಕೊಪ್ಪ | ” | ” | ” |
| 15. | ಶೀಗಿಹಳ್ಳಿ-ಭದ್ರಹಳ್ಳಿ | ” | ” | ” |
| 16. | ಕೂಡ್ಲಾ-ನಾಗನೂರು | ” | ” | ” |
| 17. | ಹುಳ್ಳೂರು-ಅಂಕನಹಳ್ಳಿ | ತುಂಗಭದ್ರಾ | ಹಿರೇಕೆರೂರು | ಹುಳ್ಳೂರಿನ ಶ್ರೀ ಲಕ್ಷ್ಮೀರಂಗನಾಥಸ್ವಾಮಿ ದೇವಾಲಯದ ವತಿಯಿಂದ ಗ್ರಾಮ ಪಂಚಾಯ್ತಿ ಹುಳ್ಳೂರು |
| 18. | ಕಂಗೇರಿ-ಗೋವಿನಹಾಳ | ” | ” | ಗ್ರಾಮ ಪಂಚಾಯ್ತಿ, ಹುಳ್ಳೂರು |
| 19. | ಮರದಕೇರಿ-ಕೋಣಂತಾಳ | ” | ” | ಶ್ರೀ ಬಸವೇಶ್ವರ ದೇವಸ್ಥಾನದ ವತಿಯಿಂದ |
| 20. | ಹೆಸರೂರು-ಸೋವಿನಹಳ್ಳಿ | ” | ಮುಂಡರಗಿ | ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ |
| 21. | ಕೊರ್ಲಹಳ್ಳಿ | ” | ” | ” |
| 22. | ಸಿಂಗಟಾಲೂರು | ” | ” | ” |
| 23. | ಹಾವನೂರು - ಹಾಂವಶಿ | ” | ಹಾವೇರಿ | ” |
| 24. | ಹೊಳೆ ಇಟಗಿ | ” | ಶಿರಹಟ್ಟಿ | ” |

(ಮೂಲ : ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ)

ನದಿಯ ಸಿಂಗಟಾಲೂರು-ನವಲಿ ಹಾಯ್ಗಡದಲ್ಲಿ ದಿನಾಂಕ 28.5.1994 ರಂದು ಸಂಭವಿಸಿತು. ಇದರಲ್ಲಿ 34 ಮಂದಿ ಪ್ರಯಾಣಿಕರು ಮೃತಪಟ್ಟರು. ನಂತರ 28.5.1994 ರಿಂದ ಇಲಾಖೆಯೇ ಫೈಬರಗ್ಲಾಸ್ ನಾವೆಯನ್ನು ತೊಡಗಿಸಿ ತನ್ನ ಸಿಬ್ಬಂದಿಯ ಮೂಲಕ ಈ ಹಾಯ್ಗಡವನ್ನು ನಿರ್ವಹಿಸುತ್ತಿದೆ. ಹೆಸರೂರು-ಸೋವಿನ ಹಳ್ಳಿ ಹಾಯ್ಗಡ ಸೇವೆಯನ್ನು ಇಲಾಖೆಯೇ ನಡೆಸುತ್ತಿದೆ, ಹಾಗೂ 93-94 ನೇ ಸಾಲಿನಲ್ಲಿ ಇದರಿಂದ ಬಂದ ಆದಾಯ 35,782 ರೂಪಾಯಿಗಳು. ದಿನಾಂಕ 19.1.1995 ರಲ್ಲಿ ಜಿಲ್ಲೆಯಲ್ಲಿದ್ದ ಒಟ್ಟು ಹಾಯ್ಗಡಗಳು 24. ಆಗಾಗ್ಗೆ ಸಂಭವಿಸುವ ದೋಣಿದುರಂತಗಳನ್ನು ತಡೆಗಟ್ಟಲು ಜಲ ಸಾರಿಗೆಗೆ ಯೋಗ್ಯವಲ್ಲದ ನಾವೆಗಳ ಒಡಾಟವನ್ನು ರದ್ದು ಮಾಡಲಾಗುತ್ತಿದೆ.

## ಸಾರ್ವಜನಿಕ ಸಂಚಾರ

ಎರಡನೆಯ ಮಹಾಯುದ್ಧದ ನಂತರ (1918) ಮೋಟಾರು ವಾಹನಗಳು ಜಿಲ್ಲೆಯಲ್ಲಿ ಕಾಣಿಸಿಕೊಂಡವು. ಸಾಮಾನು ಸಾರಿಗೆಗೆ ಅಲ್ಲದೇ ಜನರ ಸಾರಿಗೆಗೆ ಕಾರುಗಳು ಮತ್ತು ಮೋಟಾರು ವಾಹನಗಳ ಓಡಾಟ ಆರಂಭವಾಗಿ, ಎರಡನೆಯ ಮಹಾಯುದ್ಧದ ಕಾಲಕ್ಕೆ ಇದು ಇನ್ನೂ ಹೆಚ್ಚಿತು. ಖಾಸಗಿ ಕಂಪನಿಗಳು ಮೋಟಾರು ವಾಹನಗಳನ್ನು ಓಡಿಸಲು ಆರಂಭಿಸಿದವು. ಯಮನಪ್ಪ ತಲವಾಯಿ ಎಂಬುವರು 1920-21 ರಲ್ಲಿ ಧಾರವಾಡದಿಂದ ಸೌಂದತ್ತಿಗೆ ಬಸ್ ಓಡಿಸಲು ಆರಂಭಿಸಿದರೆಂದು ಹೇಳಿಕೆ ಇದೆ. ಧಾರವಾಡ ಡಿಸ್ಟ್ರಿಕ್ಟ್ ಮೋಟಾರ್‌ಸರ್ವಿಸ್ ಎಂಬ ಖಾಸಗಿ ಮೋಟಾರು ಸಾರಿಗೆಗಳ ಒಂದುಜಾಲ ಹುಬ್ಬಳ್ಳಿಯನ್ನು ಕೇಂದ್ರವಾಗಿ ಹೊಂದಿತ್ತು. ಗದಗಿನ ಬಸರೀಗಿಡದ ವೀರಪ್ಪನವರ ಕಂಪನಿ ಇತ್ತು. ಇದಲ್ಲದೇ ಧಾರವಾಡ ಹುಬ್ಬಳ್ಳಿಗಳ ನಡುವೆ ವಾಹನಗಳನ್ನು ಓಡಿಸುವ ಒಂದು ಕಂಪನಿ ಕಾರ್ಯಾಚರಣೆಯಲ್ಲಿ ಇತ್ತು. 1947 ರಲ್ಲಿ ಮುಂಬೈ ಸರಕಾರ ರಸ್ತೆ ಸಾರಿಗೆ ರಾಷ್ಟ್ರೀಕರಣ ಆರಂಭಿಸಿತು. ಧಾರವಾಡ ಜಿಲ್ಲೆಯಲ್ಲಿ 1949 ರಲ್ಲಿ ಇದನ್ನು ಜಾರಿಗೆ ತರಲಾಯಿತು. 1957 ರ ಮೇ 1 ರಿಂದ ಹುಬ್ಬಳ್ಳಿ ವಿಭಾಗದ ಕೆಲವೊಂದು ಮಾರ್ಗಗಳನ್ನು ಜಿಲ್ಲೆಯಲ್ಲಿ ಮೊದಲು ರಾಷ್ಟ್ರೀಕರಿಸಿದರು. ಹಿಂದೆ ಇದ್ದ ಸ್ಟೇಟ್ ಟ್ರಾನ್ಸ್‌ಪೋರ್ಟ್ (ಎಸ್.ಟಿ.) ಬದಲಿಗೆ ಕೆ.ಎಸ್.ಆರ್.ಟಿ.ಸಿ. ಅಸ್ತಿತ್ವಕ್ಕೆ ಬಂತು. ಹಿಂದೆ ಮೋಟಾರು ವಾಹನಗಳ ಮೇಲೆ ನಿಯಂತ್ರಣಕ್ಕೆ ಜಿಲ್ಲೆಯಲ್ಲಿ ಯಾವ ಕಛೇರಿಯು ಇರಲಿಲ್ಲ, ಮುಂಬೈಯಿಂದ ವಾಹನಗಳನ್ನು ತಪಾಸಣೆ ಮಾಡುವುದಕ್ಕೆ ಒಬ್ಬ ಇನ್ಸ್‌ಪೆಕ್ಟರ್ ಬಂದು ಹೋಗುತ್ತಿದ್ದನು. 1940 ರಲ್ಲಿ ಬೆಳಗಾವಿಯಲ್ಲಿ ಒಂದು ಸಾರಿಗೆ ಕಛೇರಿಯನ್ನು ಸ್ಥಾಪಿಸಿದಾಗ ಧಾರವಾಡ ಜಿಲ್ಲೆಯನ್ನು ಸಹ ಇದರ ವ್ಯಾಪ್ತಿಗೆ ಸೇರಿಸಲಾಯಿತು. ಮುಂಬೈಯ ತೆರಿಗೆ ಕಾಯ್ದೆಯಲ್ಲಿ, ವ್ಯವಸಾಯಕ್ಕೆ ಉಪಯೋಗಿಸುವ ವಾಹನಗಳನ್ನು ಹೊರತುಪಡಿಸಿ ಇತರೇ ವಾಹನಗಳ ಮೇಲೆ ತೆರಿಗೆಯನ್ನು ವಿಧಿಸಲಾಗಿತ್ತು. ಹಾಗೂ ಪುರಸಭೆಗಳು ಮತ್ತು ಸರ್ಕಾರ ವಿಧಿಸುತ್ತಿದ್ದ ಎಲ್ಲಾ ಸುಂಕಗಳನ್ನು ರದ್ದುಗೊಳಿಸಲಾಯಿತು. ತೆರಿಗೆ ಪಾವತಿ ಮಾಡಿದ್ದಕ್ಕೆ ನೋಂದಣಿ ಅಧಿಕಾರಿಗಳು ಟೋಕನ್ ಅಥವಾ ಗುರುತಿನ ಬಿಲ್ಲೆಗಳನ್ನು ಕೊಡುತ್ತಿದ್ದರು. ಧಾರವಾಡ ಜಿಲ್ಲೆಯ ಪುರಸಭೆಗಳಲ್ಲಿ ಸಂಚಾರ ಮಾಡುತ್ತಿದ್ದ ಮೋಟಾರು ವಾಹನಗಳು ಮತ್ತು ಇತರ ವಾಹನಗಳು 1953 ರ ಸುಮಾರಿನಲ್ಲಿ ಈ ರೀತಿ ಇತ್ತು. (1) ಮೋಟಾರು ವಾಹನಗಳು 1,059 (2) ಕುದುರೆಗಳಿಂದ ಎಳೆಯಲ್ಪಡುತ್ತಿದ್ದ ವಾಹನಗಳು 374 (3) ಎತ್ತಿನ ಗಾಡಿಗಳ ಸಂಖ್ಯೆ 5,079 (4) ಬೈಸಿಕಲ್‌ಗಳು 3,329 (5) ಕೈಗಾಡಿಗಳು 130.

ರಾಜ್ಯದ ಪುನರ್ವಿಂಗಡಣೆಯಾದ ನಂತರ 1958 ರಲ್ಲಿ ಧಾರವಾಡದಲ್ಲಿ ಪ್ರಾದೇಶಿಕ ಸಾರಿಗೆ ಕಛೇರಿಯನ್ನು (ಆರ್.ಟಿ.ಓ.) ಸ್ಥಾಪಿಸಲಾಯಿತು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮೋಟಾರು ವಾಹನಗಳಿಗೆ ಸಂಬಂಧಿಸಿದಂತೆ ರೂಪಿಸುವ ಕಾಯ್ದೆಗಳು ಹಾಗೂ ನಿಯಮಾವಳಿಗಳನ್ನು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಜಾರಿಗೆ ತರುವುದು, ಹೊಸ ವಾಹನಗಳ ನೋಂದಣಿ, ಸರ್ಕಾರಕ್ಕೆ ಬರಬೇಕಾದ ವಾಹನಗಳ ತೆರಿಗೆಯನ್ನು ವಸೂಲು ಮಾಡುವುದು ಇದರ ಕರ್ತವ್ಯವಾಗಿತ್ತು. ಹಾಗೂ ಕಾಯ್ದೆಗಳು ಈ ರೀತಿ ಇದ್ದವು: (1) ಮೋಟಾರು ವಾಹನಗಳ ಅಧಿನಿಯಮ 1939 (ಕೇಂದ್ರ ಕಾಯ್ದೆ 4, 1939), (2) ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ 1957, (3) ಕರ್ನಾಟಕ ಮೋಟಾರು ವಾಹನಗಳು ನಿಯಮ 1963, ಹಾಗೂ (4) ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿಯಮ 1957. ಜಿಲ್ಲಾ ಮಟ್ಟದಲ್ಲಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳು ಕೆಲಸ ನಿರ್ವಹಿಸುತ್ತಿದ್ದವು. ಇವು ಈಗಲೂ 1988 ರ ಮೋಟಾರು ವಾಹನಗಳ ಕಾಯ್ದೆಯ ಸೆಕ್ಷನ್ 68 ರ ಪ್ರಕಾರ ರಚಿಸಲಾಗಿದ್ದು ಭಾಗಶಃ ನ್ಯಾಯಾಂಗಗಳಂತೆ ಕಾರ್ಯಗಳನ್ನು ನಿರ್ವಹಿಸುತ್ತಿವೆ. ಜಿಲ್ಲಾಧಿಕಾರಿಗಳು ಇದರ ಅಧ್ಯಕ್ಷರು ಮತ್ತು ಪೋಲೀಸ್ ಅಧೀಕ್ಷಕರು ಒಬ್ಬ ಸದಸ್ಯರು. ಪ್ರಾದೇಶಿಕ ಸಾರಿಗೆ ಅಧಿಕಾರಿ ಈ ಸಮಿತಿಯ ಪದನಿಮಿತ್ತ ಕಾರ್ಯದರ್ಶಿ; ಮತ್ತು ಇವರಿಗೆ ಕೆಲವು ಅಧಿಕಾರಗಳನ್ನು ಕೊಡಲಾಗಿದೆ. ಅಂತರರಾಜ್ಯ ರಹದಾರಿಗಳನ್ನು

ಅಥವಾ ಇತರೇ ಪರವಾನಗಿಗಳನ್ನು ಮಂಜೂರು ಮಾಡುವುದು, ಮುಂದುವರೆಸುವುದು ಅಥವಾ ರದ್ದುಗೊಳಿಸುವ ಅಧಿಕಾರವನ್ನು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳು\ಪದನಿಮಿತ್ತ ಕಾರ್ಯದರ್ಶಿಯವರು ಹೊಂದಿರುತ್ತಾರೆ. ಬದಲಾಗುತ್ತಿರುವ ಸಮಯ ಹಾಗೂ ಸನ್ನಿವೇಶಗಳ ಹಿನ್ನಲೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮೋಟಾರು ವಾಹನಗಳ ಕಾಯ್ದೆಯಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡಿವೆ. ಈಗ ಚಾಲ್ತಿಯಲ್ಲಿರುವ ಕಾಯ್ದೆ ಹಾಗೂ ನಿಯಮಾವಳಿಗಳು ಈ ರೀತಿ ಇವೆ:

(1) ಮೋಟಾರು ವಾಹನಗಳ ಅಧಿನಿಯಮ 1988 (1988 ರ 59 ನೇ ಕೇಂದ್ರ ಅಧಿನಿಯಮ), (2) 1957 ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, (3) ಕೇಂದ್ರ ಸರ್ಕಾರದ ಮೋಟಾರು ವಾಹನಗಳ ನಿಯಮ 1989, (4) ಕರ್ನಾಟಕ ಮೋಟಾರು ವಾಹನಗಳ ನಿಯಮ 1989, ಮತ್ತು (5) ಕರ್ನಾಟಕ ಮೋಟಾರು ವಾಹನಗಳ ನಿಯಮ 1957.

ಜಿಲ್ಲೆಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಬೆಳಗಾವಿ ವಿಭಾಗದ ಸಾರಿಗೆ ಡೆಪ್ಯೂಟಿ ಕಮೀಷನರ್‌ರ ಆಡಳಿತಕ್ಕೆ ಒಳಪಟ್ಟಿರುತ್ತಾರೆ. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮತ್ತು ಸಹಾಯಕ ಸಾರಿಗೆ ಅಧಿಕಾರಿಗಳು ತಮ್ಮ ತಮ್ಮ ಪ್ರದೇಶಗಳ ವ್ಯಾಪ್ತಿಯಲ್ಲಿ ಚಾಲಕರಿಗೆ ಹಾಗೂ ಕಂಡಕ್ಟರುಗಳಿಗೆ ಲೈಸನ್ಸ ಕೊಡುವ ಅಧಿಕಾರ ಪಡೆದಿದ್ದಾರೆ. ಅರ್ಹತಾ ಪರೀಕ್ಷೆಗಳಲ್ಲಿ ತೇರ್ಗಡೆಯಾದ ಅರ್ಜಿದಾರರಿಗೆ ಲೈಸನ್ಸ್‌ಗಳನ್ನು ಕೊಡಲಾಗುತ್ತದೆ. ಮೋಟಾರು ವಾಹನಗಳ ಅಪಘಾತಗಳನ್ನು ಕಡಿಮೆ ಮಾಡಲು, ವಾಹನ ಚಾಲಕರ ಪರವಾನಿಗೆಗಳಿಗೆ ಅರ್ಜಿ ಸಲ್ಲಿಸುವರನ್ನು ಕಠಿಣವಾಗಿ ಪರೀಕ್ಷಿಸಲು ಸಂಬಂಧಿಸಿದವರಿಗೆ ಇಲಾಖೆಯು ಆಗಿಂದ್ದಾಗೆ ಸೂಚನೆಗಳನ್ನು ಕೊಡುತ್ತದೆ. ದಿನಾಂಕ 31.3.1991 ರ ಅಂತ್ಯಕ್ಕೆ ಧಾರವಾಡದ ಸಾರಿಗೆ ಕಛೇರಿ 5,325 ವಾಹನ ಚಾಲಕರ ಪರವಾನಿಗೆ ಮತ್ತು 938 ನಿರ್ವಾಹಕರ ಪರವಾನಿಗೆಗಳನ್ನು ಕೊಟ್ಟಿದೆ. ಗದಗ ಮತ್ತು ಹಾವೇರಿ ಸಾರಿಗೆ ಕಛೇರಿಗಳು ಇದೇ ಅವಧಿಗೆ ಕ್ರಮವಾಗಿ 2,008 ಮತ್ತು 1,017 ಚಾಲಕರ ಪರವಾನಿಗಿ ಮತ್ತು 691 ಹಾಗೂ 470 ನಿರ್ವಾಹಕರ ಪರವಾನಿಗೆಗಳನ್ನು ಕೊಟ್ಟಿದೆ.

ದ್ವಿಚಕ್ರ ವಾಹನಗಳ ಹಾಗೂ ಕಾರು ಚಾಲಕರಿಗೆ ವಾಹನಗಳನ್ನು ನಡೆಸಲು ಪ್ಲಾಸ್ಟಿಕ್ ಕಾರ್ಡಿನ ಲೈಸನ್ಸಗಳನ್ನು ಕೊಡುವ ಯೋಜನೆಯನ್ನು 1984-85 ರಲ್ಲಿ ಪ್ರಾಯೋಗಿಕವಾಗಿ ಬೆಂಗಳೂರಿನಲ್ಲಿ ಆರಂಭಿಸಲಾಯಿತು. ಇದು ಜನಪ್ರಿಯವಾಗಿದ್ದರಿಂದ ಈ ಯೋಜನೆಯನ್ನು 85-86 ನೇ ಸಾಲಿನಲ್ಲಿ ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸಲಾಯಿತು. ಕೊಳೆಯಾಗದೆ ಬಾಳಿಕೆ ಬರುವಂತಹ ಪ್ಲಾಸ್ಟಿಕ್ ಕಾರ್ಡ್‌ಗಳು ಸಣ್ಣ ಗಾತ್ರದಲ್ಲಿದ್ದು ಸುಲಭವಾಗಿ ಜೇಬಿನಲ್ಲಿ ಕೊಂಡಯ್ಯಬಹುದು. 1986-87 ರಿಂದ 31.3.1991 ರವರೆಗೆ ಪ್ಲಾಸ್ಟಿಕ್ ಕಾರ್ಡಿನಲ್ಲಿ ಚಾಲಕರ ಲೈಸನ್ಸ್ ಕೊಟ್ಟಿರುವ ವಿವರಗಳು ಈ ಮುಂದೆ ಕೊಡಲಾಗಿದೆ: ನೀಲಿಕಾರ್ಡ್ ದ್ವಿಚಕ್ರ ವಾಹನಗಳಿಗೆ 2,317, ಹಸಿರು ಕಾರ್ಡ್ ಲಘುವಾಹನಗಳಿಗೆ 183, ಕೆಂಪುಕಾರ್ಡ್, ಮೋಟಾರು ಕಾರು ಮತ್ತು ಲಘುವಾಹನಗಳಿಗೆ 935. ಇದರಿಂದ ಇಲಾಖೆಗೆ 35,976 ರೂಪಾಯಿಗಳ ಆದಾಯ ಬಂದಿದೆ. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು 1988 ರ ಮೋಟಾರು ವಾಹನಗಳ ಅಧಿನಿಯಮದ ಪ್ರಕಾರ ಚಾಲಕರ ತರಬೇತಿ ಶಾಲೆಗಳ ಸ್ಥಾಪನೆಗೆ ಲೈಸನ್ಸ್ ಕೊಡುವ ಅಧಿಕಾರ ಹೊಂದಿರುತ್ತಾರೆ. ಅಲ್ಲದೆ ಅವುಗಳ ಮೇಲೆ ನಿಯಂತ್ರಣವನ್ನು ಸಹ ಹೊಂದಿರುತ್ತಾರೆ.

ಜಿಲ್ಲೆಯಲ್ಲಿ ಮುಖ್ಯ ಸ್ಥಳಗಳಲ್ಲಿ ಸ್ಥಾಪನೆಗೊಂಡು ನಡೆಯುತ್ತಿರುವ ಮೋಟಾರು ವಾಹನ ಚಾಲಕ ತರಬೇತಿ ಶಾಲೆಗಳ ಹೆಸರು ಈ ರೀತಿ ಇದೆ: (1) ಪರ್‌ಫೆಕ್ಟ ಮೋಟಾರು ಡ್ರೈವಿಂಗ್ ಟ್ರೈನಿಂಗ್ ಸ್ಕೂಲ್, ನವನಗರ, ಹುಬ್ಬಳ್ಳಿ, (2) ಜನತಾ ಮೋಟಾರು ಡ್ರೈವಿಂಗ್ ಟ್ರೈನಿಂಗ್ ಸ್ಕೂಲ್, ಇನ್‌ಸ್ಟಿಟ್ಯೂಟ್ ಆಫ್ ಇಂಜಿನೀಯರಿಂಗ್, ಧಾರವಾಡ, (3) ಹರ್ಷ ಮೋಟಾರು ಡ್ರೈವಿಂಗ್ ಸ್ಕೂಲ್, ನವನಗರ, ಹುಬ್ಬಳ್ಳಿ, (4) ಕರ್ನಾಟಕ ಮೋಟಾರು ಡ್ರೈವಿಂಗ್ ಟ್ರೈನಿಂಗ್ ಸ್ಕೂಲ್, ಧಾರವಾಡ, (5) ಶ್ರೀ ಸಂತಸಾಯಿ ಮೋಟಾರು ಡ್ರೈವಿಂಗ್ ಟ್ರೈನಿಂಗ್ ಸ್ಕೂಲ್, ಗದಗ, (6) ಶ್ರೀ ಮಂಜುನಾಥ ಸೂಪರ್ ಮೋಟಾರು ಡ್ರೈವಿಂಗ್ ಟ್ರೈನಿಂಗ್ ಸ್ಕೂಲ್, ರಾಣೆಬೆನ್ನೂರು. ಈ ತರಬೇತಿ ಶಾಲೆಗಳಲ್ಲಿ 1990-91 ನೇ ಸಾಲಿನ ಅಂತ್ಯಕ್ಕೆ ಲಘುಮೋಟಾರು ವಾಹನಗಳು, ಆಟೋ ರಿಕ್ಷಾಗಳು, ಹಾಗೂ ದೊಡ್ಡ ಮೋಟಾರು ವಾಹನಗಳ ಚಾಲಕರ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರ ಸಂಖ್ಯೆ 962.

ಒಮ್ಮೆ ಮಾತ್ರ ದ್ವಿಚಕ್ರ ವಾಹನಗಳಿಗೆ ಪಾವತಿ ಮಾಡುವ ಆಜೀವ ತೆರಿಗೆಯನ್ನು 1.4.1986 ರಿಂದ ಪ್ರಾರಂಭಿಸಲಾಯಿತು. ಧಾರವಾಡ ಜಿಲ್ಲೆಯಲ್ಲಿನ ವಾಹನಗಳಲ್ಲಿ, ಶೇಕಡಾ 60 ಕ್ಕೂ ಹೆಚ್ಚಿಗೆ ದ್ವಿಚಕ್ರ ವಾಹನಗಳಿವೆ. ಇದು ಯಶಸ್ವಿಯಾದ ಕಾರ್ಯಕ್ರಮವಾಗಿ

ಸರ್ಕಾರಕ್ಕೆ ಹೆಚ್ಚಿನ ವರಮಾನ ತಂದಿದೆ. ದಿನಾಂಕ 31.3.1987ನೇ ಸಾಲಿನ ಕೊನೆಯಲ್ಲಿ ಈ ಯೋಜನೆಯ ಅನ್ವಯ ಉಪಯೋಗ ಪಡೆದ ದ್ವಿಚಕ್ರ ವಾಹನಗಳ ಮಾಲಿಕರ ಸಂಖ್ಯೆ ಹಾಗೂ ಸರಕಾರಕ್ಕೆ ಸಂದಾಯವಾದ ತೆರಿಗೆ ಈ ರೀತಿ ಇದೆ.

| | ಪ್ರಾದೇಶಿಕ ಸಾರಿಗೆ ಕಛೇರಿ | ತೆರಿಗೆ ಪಾವತಿ ಮಾಡಿದವರ ಸಂಖ್ಯೆ | ಸರ್ಕಾರದ ಬೊಕ್ಕಸಕ್ಕೆ ಸಂದಾಯವಾದ ತೆರಿಗೆ (ರೂ) |
|---|---|---|---|
| 1. | ಧಾರವಾಡ | 10,228 | 53,55,786 |
| 2. | ಗದಗ | 2,542 | 12,09,605 |
| 3. | ಹಾವೇರಿ | 2,259 | 11,07,752 |

ಕೋಷ್ಟಕ 7.8 ಮತ್ತು 7.9 ಮುಂದಿನ ಪುಟದಲ್ಲಿ

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ**

ಖಾಸಗಿ ಜನರು ನಡೆಸುತ್ತಿದ್ದ ರಸ್ತೆ ಸಾರಿಗೆಯನ್ನು ರಾಷ್ಟ್ರೀಕರಣ ಮಾಡುವ ಕಾರ್ಯವನ್ನು ಮುಂಬೈ ಸರ್ಕಾರವು 1947 ರಲ್ಲೇ ಆರಂಭಿಸಿತು. ರಾಷ್ಟ್ರೀಕರಣ ಮಾಡಿದ ರಸ್ತೆ ಸಾರಿಗೆಯ ಆಡಳಿತ ನಿರ್ವಹಣೆ ಹಾಗೂ ಬಸ್ಸುಗಳನ್ನು ಸಮರ್ಪಕವಾಗಿ ಓಡಿಸಲು ಮುಂಬೈ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ಸ್ಥಾಪಿಸಿತು. ಧಾರವಾಡ ಜಿಲ್ಲೆಯ ಕೆಲವು ಮಾರ್ಗಗಳನ್ನು ಮುಂಬೈ ರಸ್ತೆ ಸಾರಿಗೆ ಸಂಸ್ಥೆ ರಾಷ್ಟ್ರೀಕರಣ ಮಾಡಿ ತನ್ನ ಬೆಳಗಾವಿ ವಿಭಾಗದ ಮೂಲಕ ನಿರ್ವಹಣೆ ಆರಂಭಿಸಿತು (1949). ಕಾಲಕ್ರಮೇಣ ಅನೇಕ ಹೊಸ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಿದ್ದರಿಂದ ಅಲ್ಲಿಯವರೆಗೆ ಉಪ ವಿಭಾಗವಾಗಿದ್ದ, ಹುಬ್ಬಳ್ಳಿಯನ್ನು ಸ್ವತಂತ್ರವಾದ ವಿಭಾಗ ಕೇಂದ್ರವನ್ನಾಗಿ ಮಾಡಿತು. 1952 ರಲ್ಲಿ ರಚನೆಯಾದ ಈ ವಿಭಾಗ ಧಾರವಾಡ ಜಿಲ್ಲೆಯ ಬಹುಭಾಗ (ಸ್ವಲ್ಪ ಭಾಗ ಬೆಳಗಾವಿ ವಿಭಾಗದ ಅಧೀನದಲ್ಲಿ) ಮತ್ತು ಉತ್ತರ ಕನ್ನಡ ಜಿಲ್ಲೆಯ ಬಹು ಭಾಗಗಳನ್ನೊಳಗೊಂಡಿತ್ತು. ಈ ವಿಭಾಗದಲ್ಲಿ 84 ಮಾರ್ಗಗಳಿದ್ದು, 112 ವಾಹನಗಳಲ್ಲಿ (ಮೇ 1953 ) ನಿತ್ಯ ಸರಾಸರಿ 11,888 ಪ್ರಯಾಣಿಕರನ್ನು ಸಾಗಿಸುತ್ತಿತ್ತು. ನಗರ ಸಾರಿಗೆಯ ಖಾಸಗಿ ವ್ಯವಸ್ಥೆ ಹುಬ್ಬಳ್ಳಿ ಪಟ್ಟಣದಲ್ಲಿ ಇದ್ದು, ಅದರ ಬಸ್ಸುಗಳು ಸಿದ್ಧಾರೂಢಮಠ, ದುರ್ಗದ ಬೈಲು, ಸ್ಟೇಷನ್, ಉಣಕಲ್, ವೀರಾಪುರ, ನಾಗಶೆಟ್ಟಿಕೊಪ್ಪ, ಬಿದ್ನಾಳ ಮುಂತಾದ ಸ್ಥಳಗಳಿಗೆ ಓಡುತ್ತಿದ್ದವು. ಹುಬ್ಬಳ್ಳಿಯಲ್ಲಿ ವಿಭಾಗೀಯ ಕಾರ್ಯಾಗಾರ (ವರ್ಕ್‌ಷಾಪ್)ವನ್ನು 1953 ರಲ್ಲಿ ಸ್ಥಾಪಿಸಲಾಯಿತು. ಈ ವಿಭಾಗದ ಎಲ್ಲಾ 112ಬಸ್ಸುಗಳ ನಿರ್ವಹಣೆ ಹಾಗೂ ದೊಡ್ಡ ರಿಪೇರಿ ಕೆಲಸಗಳನ್ನು ಹುಬ್ಬಳ್ಳಿ ಕಾರ್ಯಾಗಾರದಲ್ಲಿ ಮಾಡಲಾಗುತ್ತಿತ್ತು. ಹುಬ್ಬಳ್ಳಿ, ಗದಗ, ಹಾವೇರಿಗಳಲ್ಲಿ ಡಿಪ್ಪೋಗಳಿದ್ದು ಅವುಗಳಲ್ಲಿ ಕ್ರಮವಾಗಿ 37, 16 ಮತ್ತು 15 ಬಸ್ಸುಗಳಿದ್ದವು. ಹಿರೇಕೆರೂರು ಮತ್ತು ಕಾರವಾರ, ಸಿರಸಿ ಹಾಗೂ ರೋಣ ಗ್ಯಾರೇಜುಗಳಲ್ಲಿ 5 ರಿಂದ 9 ರವರೆಗೆ ಬಸ್ಸುಗಳಿದ್ದವು.

ರಾಜ್ಯ ಪುನರ್ವಿಂಗಡನೆಯ ಕಾಲಕ್ಕೆ ಮುಂಬಯಿ ರಾಜ್ಯದಿಂದ ಅನೇಕ ಬಸ್ಸುಗಳು ಹಾಗೂ ರಾಷ್ಟ್ರೀಕೃತ ಮಾರ್ಗಗಳು, ಮೈಸೂರು ರಾಜ್ಯಕ್ಕೆ ವರ್ಗಾಯಿಸಲ್ಪಟ್ಟವು. ಇವು ಮೈಸೂರು ಸರ್ಕಾರದ ರಸ್ತೆ ಇಲಾಖೆಯ ಆಡಳಿತಕ್ಕೊಳಪಟ್ಟಿತ್ತು. 1961 ರಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆ.ಎಸ್.ಆರ್.ಟಿ.ಸಿ.) ಸ್ಥಾಪನೆಯಾದ ಮೇಲೆ ಎಲ್ಲಾ ಬಸ್ಸುಗಳ ಹಾಗೂ ರಾಷ್ಟ್ರೀಕೃತ ಮಾರ್ಗಗಳನ್ನು ಅದಕ್ಕೆ ವಹಿಸಿಕೊಡಲಾಯಿತು. ದಿನಾಂಕ 16.7.1959 ರಂದು ಜಿಲ್ಲೆಯ ಮಾರ್ಗಗಳನ್ನು ರಾಷ್ಟ್ರೀಕರಣ ಗೊಳಿಸಲಾಯಿತು. ವಿವಿಧ ಅವಧಿಗಳಲ್ಲಿ ಹುಬ್ಬಳ್ಳಿ ವಿಭಾಗದಲ್ಲಿದ್ದ ಬಸ್ಸುಗಳು, ರಾಷ್ಟ್ರೀಕೃತ ಮಾರ್ಗಗಳು, ರೂಟ್‌ಗಳು ಇತ್ಯಾದಿಗಳು ಈ ರೀತಿ ಇದ್ದಿತು.

## ಕೋಷ್ಟಕ 7.8: ನೋಂದಣಿಯಾಗಿ ಉಪಯೋಗದಲ್ಲಿದ್ದ ತಾಲೂಕುವಾರು ವಾಹನಗಳ ವಿವರಗಳು - 92-93

| ಸಂ | ವಿವರ | ಧಾರವಾಡ | ಹುಬ್ಬಳ್ಳಿ | ನವಲಗುಂದ | ನರಗುಂದ | ಕಲಘಟಗಿ | ಒಟ್ಟು | ಗದಗ | ಕುಂದಗೋಳ | ರೋಣ | ಶಿರಹಟ್ಟಿ | ಮುಂಡರಗಿ | ಒಟ್ಟು | ಹಾವೇರಿ | ರಾಣೆಬೆನ್ನೂರು | ಬ್ಯಾಡಗಿ | ಹಿರೇಕೆರೂರು | ಸವಣೂರು | ಹಾನಗಲ್ | ಶಿಗ್ಗಾಂವಿ | ಒಟ್ಟು |
|---|---|---|---|---|---|---|---|---|---|---|---|---|---|---|---|---|---|---|---|---|---|
| 1 | ಮೋಟಾರು ಸೈಕಲ್\ಸ್ಕೂಟರ್\ ಮೊಪೆಡ್‌ಗಳು | 17,236 | 27,776 | 1,474 | 1,120 | 665 | 48,271 | 7,027 | 573 | 832 | 715 | 441 | 9,588 | 2,426 | 2,633 | 790 | 792 | 782 | 811 | 738 | 8,971 |
| 2 | ಕಾರುಗಳು | 1,538 | 3,255 | 147 | 101 | 78 | 5,119 | 555 | 46 | 48 | 82 | 20 | 751 | 173 | 235 | 46 | 48 | 61 | 66 | 43 | 672 |
| 3 | ಜಾಲ್ತಿಯಲ್ಲಿದ್ದ ವಾಹನಗಳು | 2 | 5 | - | - | - | 7 | 2 | - | - | - | - | 2 | 1 | - | - | - | - | - | - | 1 |
| 4 | ಜೀಪುಗಳು | 527 | 375 | 67 | 81 | 34 | 1,084 | 98 | 13 | 19 | 22 | 7 | 159 | 58 | 56 | 11 | 11 | 12 | 88 | 12 | 248 |
| 5 | ಆಟೋರಿಕ್ಷಾಗಳು | 1,211 | 2,335 | 58 | 29 | 17 | 4,150 | 196 | - | 3 | 1 | - | 200 | 121 | 182 | - | - | 11 | 3 | 4 | 321 |
| 6 | ಬಾಡಿಗೆ ಕಾರುಗಳು | 198 | 352 | 29 | 18 | 15 | 612 | 57 | 2 | 8 | 1 | 1 | 69 | 69 | 49 | 24 | 18 | 14 | 16 | 13 | 203 |
| 7 | ಸರ್ವೋಪಯೋಗಿ ಬಸ್ಸುಗಳು | 73 | 79 | 3 | 2 | 1 | 158 | 19 | - | 3 | 3 | 1 | 26 | - | - | - | - | - | - | - | |
| 8 | ಸ್ಟೇಷನ್ ವ್ಯಾಗನ್‌ಗಳು | 1 | 3 | - | - | - | 4 | 10 | 3 | 2 | 1 | 1 | 17 | - | - | - | - | - | - | - | - |
| 9 | ಮಜಲು ಗಾಡಿಗಳು | | | | | | | | | | | | | | | | | | | | |
| | ಎ) ಕ.ರಾ. ರಸ್ತೆ ಸಾರಿಗೆ ಬಸ್ಸುಗಳು | - | 2,289 | - | - | - | 2,289 | 18 | - | - | - | - | 18 | - | - | - | - | - | - | - | - |
| | ಬಿ) ಖಾಸಗಿ ಬಸ್ಸುಗಳು | - | 5 | - | - | - | 5 | 8 | - | - | - | - | 8 | - | - | - | - | - | - | - | - |
| 10 | ಸರಕು ಸಾಗಿಸುವ ವಾಹನಗಳು | 1,671 | 3,223 | 269 | 184 | 122 | 5,469 | 394 | 29 | 81 | 54 | 20 | 578 | - | - | - | - | - | - | - | - |
| 11 | ಟ್ರ್ಯಾಕ್ಟರ್ | 929 | 1,077 | 959 | 838 | 272 | 4,075 | 591 | 899 | 418 | 310 | 114 | 2,332 | - | - | - | - | - | - | - | - |
| 12 | ಟ್ರೈಲರ್ | 788 | 805 | 970 | 540 | 147 | 3,250 | 610 | 851 | 390 | 296 | 109 | 2,256 | - | - | - | - | - | - | - | - |
| 13 | ಡಂಪರುಗಳು | - | 5 | - | - | - | 5 | - | - | - | - | - | - | - | - | - | - | - | - | - | - |
| 14 | ಬುಲ್ಡೋಜರುಗಳು | - | - | - | - | - | - | - | - | - | - | - | - | - | - | - | - | - | - | - | - |
| 15 | ರೋಡ್ ರೋಲರ್‌ಗಳು | - | - | - | - | - | - | - | - | - | - | - | - | - | - | - | - | - | - | - | - |
| 16 | ಟಿಪ್ಪರುಗಳು | 73 | 164 | 42 | 41 | 18 | 338 | - | - | - | - | - | - | - | - | - | - | - | - | - | - |
| 17 | ಟ್ಯಾಂಕರ್‌ಗಳು | - | - | - | - | - | - | - | - | - | - | - | - | - | - | - | - | - | - | - | - |
| 18 | ಪವರ್ ಟಿಲ್ಲರ್‌ಗಳು | 17 | 13 | 2 | 1 | - | 33 | 1 | - | - | - | - | 1 | - | - | - | - | - | - | - | - |
| 19 | ಇತರೆ ವಾಹನಗಳು | 132 | 101 | 27 | 20 | 16 | 296 | 53 | 4 | 2 | 1 | 3 | 63 | - | - | - | - | - | - | - | - |

| ಸಂ | ವಿವರ | ಧಾರವಾಡ | ಹುಬ್ಬಳ್ಳಿ | ನವಲಗುಂದ | ನರಗುಂದ | ಕಲಘಟಗಿ | ಒಟ್ಟು | ಗದಗ | ಕುಂದಗೋಳ | ರೋಣ | ಶಿರಹಟ್ಟಿ | ಮುಂಡರಗಿ | ಒಟ್ಟು | ಹಾವೇರಿ | ರಾಣೆಬೆನ್ನೂರು | ಬ್ಯಾಡಗಿ | ಹಿರೇಕೆರೂರು | ಸವಣೂರು | ಹಾನಗಲ್ | ಶಿಗ್ಗಾಂವಿ | ಒಟ್ಟು |
|---|---|---|---|---|---|---|---|---|---|---|---|---|---|---|---|---|---|---|---|---|---|
| 20 | ಅಂಬ್ಯೂಲೆನ್ಸ್ ವಾಹನಗಳು | 7 | 9 | 1 | 1 | 1 | 19 | 3 | - | - | - | - | 3 | - | - | - | - | - | - | - | - |
| 21 | ಅಗ್ನಿಶಾಮಕ ಇಂಜಿನ್‌ಗಳು | 4 | 9 | - | - | - | 13 | 2 | - | - | - | - | 2 | - | - | - | - | - | - | - | - |
| 22 | ಟ್ಯಾಂಕರ್ | 13 | 37 | 3 | 3 | 1 | 57 | 8 | - | - | - | - | 8 | - | - | - | - | - | - | - | - |
| 23 | ಇತರೇ ವಾಹನ | 6 | 7 | 3 | 3 | 1 | 20 | 33 | 2 | 12 | 8 | 2 | 57 | - | - | - | - | - | - | - | - |

## ಕೋಷ್ಟಕ 7.9: ಧಾರವಾಡ ಜಿಲ್ಲೆಯಲ್ಲಿದ್ದ ವಿವಿಧ ಮೋಟಾರು ವಾಹನಗಳ ಅಂಕಿ ಅಂಶಗಳು (31.3.1961 ರಿಂದ 31.3.92 ರ ವರೆಗೆ)

| | ಮಜಲು ಗಾಡಿಗಳು | | | | | | | | ಸರಕು ಸಾಗಿಸುವ ವಾಹನಗಳು | | | | | |
|---|---|---|---|---|---|---|---|---|---|---|---|---|---|---|
| ವರ್ಷ | ಮೋಟಾರು ಸೈಕಲ್‌ಗಳು/ ಸ್ಕೂಟರ್ | ಮೋಟಾರು ಕಾರುಗಳು | ಜೀಪುಗಳು | ಆಟೋ ರಿಕ್ಷಾಗಳು | ಸರ್ವೋಪಯೋಗಿ ಬಸ್ಸುಗಳು | ಬಾಡಿಗೆ ಕಾರುಗಳು | ರಾಜ್ಯ ರಸ್ತೆ ಸಾರಿಗೆ ಬಸ್ಸುಗಳು | ಖಾಸಗಿ ಬಸ್ಸುಗಳು | ಖಾಸಗಿ ವಾಹನಗಳು | ಸಾರ್ವಜನಿಕ ವಾಹನಗಳು | ಟ್ರ್ಯಾಕ್ಟರ್‌ಗಳು | ಟ್ರೈಲರ್‌ಗಳು | ಇತರೇ ವಾಹನ | ಒಟ್ಟು ವಾಹನಗಳು ಗಳು |
| 1960-61 | 183 | 698 | - | 2 | 3 | 26 | - | * 249 | - | * 404 | - | - | 237 | 1,802 |
| 1966-67 | 575 | 1,118 | - | 30 | 31 | 15 | - | * 360 | - | * 1,621 | - | - | 602 | 4,352 |
| 1970-71 | 1,708 | 1,539 | 41 | 182 | 40 | 40 | 704 | - | - | * 1,956 | - | - | 1,572 | 7,742 |
| 1972-73 | 2,709 | 1,799 | 368 | 302 | 66 | 53 | 864 | 20 | 145 | 1,909 | 434 | 149 | 1,163 | 9,981 |
| 1977-78 | 7,013 | 2,174 | 523 | 772 | 72 | 92 | 1,105 | 8 | 254 | 2,278 | 556 | 170 | 2,645 | 17,662 |
| 1983-84 | 18,103 | 3,212 | 708 | 1,638 | 176 | 175 | - | * 1,327 | - | * 3,787 | 4,418 | - | 4,269 | 37,813 |
| 1986-87 | 30,865 | 3,783 | 879 | 2,559 | 223 | 435 | 1,661 | 5 | 289 | 3,878 | 5,832 | 5,193 | 567 | 56,189 |
| 1989-90 | 49,555 | 4,707 | 1,049 | 3,564 | 220 | 516 | 2,059 | 6 | - | * 5,312 | 6,917 | 6,199 | 688 | 80,792 |
| 1990-91 | 55,006 | 5,301 | 1,187 | 3,792 | 205 | 589 | 2,168 | 8 | - | * 5,704 | 7,297 | 6,517 | 843 | 88,617 |
| 1991-92 | 60,636 | 6,156 | 1,312 | 4,090 | 208 | 657 | 2,289 | 13 | - | * 6,132 | 7,662 | 6,891 | 1,097 | 97,143 |
| 1993-94 | 73,098 | 7,160 | 1,468 | 5,419 | 496 | 1,001 | 2,676 | 23 | - | * 6,901 | 9,504 | 8,460 | 1,657 | 1,17,803 |

* ರಸ್ತೆ ಸಾರಿಗೆ ಬಸ್ಸುಗಳು ಹಾಗೂ ಖಾಸಗಿ ಬಸ್ಸುಗಳ ಒಟ್ಟು ಸಂಖ್ಯೆ

* ಖಾಸಗಿ ವಾಹನಗಳು ಮತ್ತು ಸಾರ್ವಜನಿಕ ವಾಹನಗಳ ಒಟ್ಟು ಸಂಖ್ಯೆ

| | 31.5.1953 | 31.3.75 | 31.3.76 | 31.3.77 | 31.12.77 |
|---|---|---|---|---|---|
| ರೂಟ್‌ಗಳು | 84 | 544 | 588 | 649 | 671 |
| ರೂಟ್ ಮೈಲೇಜ್ | 2,834 ಮೈಲಿ | 23,692 | 26,839 | 28,029 | 29,286 |
| ಬಸ್ಸುಗಳು | 112 | 349 | 382 | 389 | 383 |
| ಪ್ರತಿ ದಿನದ ಪ್ರಯಾಣಿಕರ ಸಂಖ್ಯೆ ಸರಾಸರಿ | 11,188 | 1,67,880 | 1,72,877 | 1,75,994 | 1,82,417 |

ಜಿಲ್ಲೆಯಲ್ಲಿ ದಿನಾಂಕ 31.3.1994 ರಂದು ಹುಬ್ಬಳ್ಳಿ ವಿಭಾಗ ಮತ್ತು ಗದಗು ವಿಭಾಗಗಳು ಕೆಲಸ ಮಾಡುತ್ತಿದ್ದವು. ಹುಬ್ಬಳ್ಳಿ ವಿಭಾಗದಲ್ಲಿದ್ದ ಡಿಪೋಗಳು ಹುಬ್ಬಳ್ಳಿ (ಗ್ರಾ.), ಹುಬ್ಬಳ್ಳಿ (ನಗರ), ಧಾರವಾಡ, ಹಾವೇರಿ, ಹಿರೇಕೆರೂರು, ರಾಣೆಬೆನ್ನೂರು ಹಾಗೂ ನರಗುಂದ. ಗದಗ ವಿಭಾಗದ ಅಧೀನದಲ್ಲಿ ಗದಗ, ರೋಣ ಮತ್ತು ಲಕ್ಷ್ಮೇಶ್ವರ ಡಿಪೋಗಳಿದ್ದವು. ಧಾರವಾಡ ವಿಭಾಗದ ಸಂಚಾರ ಚಟುವಟಿಕೆಗಳ ವಿವರಗಳು.

| | | 31.3.1994 |
|---|---|---|
| 1. | ಬಸ್ಸುಗಳ ಸಂಖ್ಯೆ | 633 |
| 2. | ಅಂತರ ರಾಜ್ಯ ಮಾರ್ಗಗಳು | 16 |
| 3. | ಷೆಡ್ಯೂಲ್‌ಗಳು | 580 |
| 4. | ದಿನಂ ಪ್ರತಿ ಒಟ್ಟು ಷೆಡ್ಯೂಲ್ | 1.81 (ಲಕ್ಷ ಕಿ.ಮೀ.) |
| 5. | ಎಕ್ಸ್‌ಪ್ರೆಸ್ ಬಸ್ಸುಗಳು | 133 |
| 6. | ಸುವಿಹಾರಿ ಬಸ್ಸುಗಳು | 13 |
| 7. | ರಾತ್ರಿ ವೇಳೆ ಹೊರಡುವ ಬಸ್ಸುಗಳು | 39 |
| 8. | ದಿನವಹಿ ಪ್ರಯಾಣ ಮಾಡುವವರ ಸಂಖ್ಯೆ | 1,64,048 |
| 9. | ಪ್ರತಿ ದಿನದ ಆದಾಯ | 11.41 (ಲಕ್ಷ ರೂ.) |
| 10. | ವಾರ್ಷಿಕ ಆದಾಯ | 4,240.16 (ಲಕ್ಷ ರೂ.) |
| 11. | ರೂಟ್‌ಗಳು | 1,105 |
| 12. | ರೂಟ್‌ಗಳ ಒಟ್ಟು ಉದ್ದ | 1.81 (ಲಕ್ಷ ಕಿ.ಮೀ.) |

ಪ್ರಸ್ತುತ ಧಾರವಾಡ ವಿಭಾಗವು ಲಾಭಗಳಿಸುತ್ತಿಲ್ಲ. ನಗರ ಸಾರಿಗೆಗಳನ್ನು ಹೊಂದಿರುವ ಪಟ್ಟಣಗಳು ಹುಬ್ಬಳ್ಳಿ, ಧಾರವಾಡ ಮತ್ತು ಗದಗ-ಬೆಟಗೇರಿಗಳು. ಹುಬ್ಬಳ್ಳಿ ನಗರ ಸಾರಿಗೆಯಲ್ಲಿ 238 ರೂಟ್‌ಗಳಿವೆ. ಹಾಗೂ ಧಾರವಾಡ ನಗರ ಸಾರಿಗೆಯಲ್ಲಿ 126 ರೂಟ್‌ಗಳಿವೆ. ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ಸುಸ್ಥಿತಿಯಲ್ಲಿಟ್ಟು ಅವುಗಳನ್ನು ವೇಳೆಗೆ ಸರಿಯಾಗಿ ನಿಗದಿತ ಮಾರ್ಗದಲ್ಲಿ ಓಡಿಸಲು ಹುಬ್ಬಳ್ಳಿಯಲ್ಲಿರುವ ಪ್ರಾದೇಶಿಕ ಕಾರ್ಯಗಾರ ಹಾಗೂ ಹುಬ್ಬಳ್ಳಿ ಮತ್ತು ಗದಗಿನ ವಿಭಾಗೀಯ ಕಾರ್ಯಾಗಾರಗಳು (ವರ್ಕ್‌ಷಾಪ್) ಮುಖ್ಯ ಪಾತ್ರವಹಿಸುತ್ತಿವೆ. ಪ್ರಯಾಣಿಕರಿಗೆ ಹೆಚ್ಚಿನ ರೀತಿಯಲ್ಲಿ ಸೌಲಭ್ಯ ಕಲ್ಪಿಸಲು ಹುಬ್ಬಳ್ಳಿ ಮತ್ತು ಧಾರವಾಡ ಅವಳಿ ನಗರಗಳ ಮಧ್ಯೆ ಪುಷ್ಪಕ ಮಾದರಿ ಬಸ್ ಸೌಕರ್ಯವನ್ನು ಏರ್ಪಡಿಸಲಾಗಿದೆ. ಸಾರಿಗೆ ಸಂಸ್ಥೆಯು ಹುಬ್ಬಳ್ಳಿಯಲ್ಲಿ ಒಂದು ಮುದ್ರಣಾಲಯ, ಸಿಬ್ಬಂದಿ ತರಬೇತಿ ಕೇಂದ್ರ ಹಾಗೂ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ಸ್ಥಾಪಿಸಿದೆ. ಕೊನೆಯ ಸಂಸ್ಥೆಯಲ್ಲಿ ಸಿಬ್ಬಂದಿಯ ಮಕ್ಕಳಿಗೆ

ತಾಂತ್ರಿಕ ಶಿಕ್ಷಣವನ್ನು ನೀಡಲಾಗುತ್ತಿದೆ. ಹುಬ್ಬಳ್ಳಿಯಲ್ಲಿ ಒಂದು ಆಸ್ಪತ್ರೆಯನ್ನು ನಡೆಸಲಾಗುತ್ತಿದೆ. ಅಲ್ಲದೇ ಧಾರವಾಡ, ಹಾವೇರಿ, ಹಿರೇಕೆರೂರು, ನರಗುಂದ ಹಾಗೂ ರಾಣೆಬೆನ್ನೂರು ಘಟಕಗಳಲ್ಲಿ ಅರೆಕಾಲಿಕ ವೈದ್ಯರ ಸೇವೆಯನ್ನು ಒದಗಿಸಲಾಗಿದೆ. ಸಿಬ್ಬಂದಿಯ ವಾಸಕ್ಕಾಗಿ ಇಲಾಖೆಯಿಂದ 100 ವಸತಿ ಗೃಹಗಳನ್ನು ಕಟ್ಟಿಸಲಾಗಿದೆ. ಸಂಸ್ಥೆಯ ಮುಂದಿನ ಯೋಜನೆ ಹೆಬ್ಬಳ್ಳಿ, ಕಮಡೊಳ್ಳಿ ಹಾಗೂ ಹುಲಗೂರು ಗ್ರಾಮಗಳಲ್ಲಿ ಬಸ್ ನಿಲ್ದಾಣದ ಕಾರ್ಯ ಹಾಗೂ ಹಾನಗಲ್ ಘಟಕದ ಕಟ್ಟಡ ಯೋಜನೆ ಕೈಗೆತ್ತಿಕೊಳ್ಳುವುದು. ಹುಬ್ಬಳ್ಳಿ ಮತ್ತು ಧಾರವಾಡ ಶಹರುಗಳ ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರಿಗಾಗಿ ಸ್ಥಳ ಕಾಯ್ದಿರಿಸುವ ಸಲುವಾಗಿ ಗಣಕ ಯಂತ್ರಗಳನ್ನು ಜೋಡಿಸಲಾಗುವುದು.

## ರೈಲು ಮಾರ್ಗ

ಸದರ್ನ್ ಮರಾಠಾ ರೈಲ್ವೆ ಕಂಪನಿಯವರು ಮೀಟರ್‌ಗೇಜ್ ರೈಲ್ವೆ ನಿರ್ಮಾಣ ಕಾರ್ಯವನ್ನು ದಿನಾಂಕ 1.11.1882 ರಂದು ಧಾರವಾಡ ಜಿಲ್ಲೆಯಲ್ಲಿ ಆರಂಭಿಸಿದರು. ಇದಕ್ಕೆ ಮುನ್ನ ದಿನಾಂಕ 1.6.1882 ರಲ್ಲಿ ಕಂಪನಿಯು ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡಿತ್ತು. ಇದರ ಅನುಸಾರ ರೈಲ್ವೆ ಮಾರ್ಗಗಳ ನಿರ್ಮಾಣದಿಂದ, ವಾರ್ಷಿಕ ಶೇಕಡ 5 ರಂತೆ ಸದರ್ನ್ ಮರಾಠಾ ರೈಲ್ವೆ ಕಂಪನಿಗೆ ಲಾಭ ದೊರೆಯದಿದ್ದರೆ ಸರ್ಕಾರವು ಕಡಿಮೆ ಬಿದ್ದ ಮೊತ್ತವನ್ನು ತುಂಬಿ ಕೊಡಲು ಒಪ್ಪಿತ್ತು. ನಿಗದಿತ ಲಾಭವು ದೊರೆಯದ ಕಾರಣ 1891 ರವರೆಗೂ ಸರ್ಕಾರ ಹಣವನ್ನು ಪಾವತಿ ಮಾಡುತ್ತಿತ್ತು. ಈಗಿನ ಕರ್ನಾಟಕ ಕಾಲೇಜ ಕಟ್ಟಡ ಅಂದಿನ ಸದರ್ನ್ ಮರಾಠಾ ರೈಲ್ವೆ ಕಂಪನಿಯ ಮುಖ್ಯ ಕಛೇರಿಯಾಗಿತ್ತು. 1887 ರ ಆದಿಭಾಗದಲ್ಲಿ, ಕಂಪನಿಯು ಜಿಲ್ಲೆಯಲ್ಲಿ ಮೀಟರ್‌ಗೇಜ ರೈಲುಮಾರ್ಗಗಳನ್ನು ನಿರ್ಮಿಸಿತ್ತು. ಇದಕ್ಕೂ ಮೊದಲು 1885 ರಲ್ಲಿ ಹುಬ್ಬಳ್ಳಿಯಲ್ಲಿ ರೈಲ್ವೇ ಕಾರ್ಯಾಗಾರವನ್ನು ಆರಂಭಿಸಲಾಯಿತು. 1890 ರ ಹೊತ್ತಿಗೆ ಈ ರೈಲ್ವೆ ಜಾಲವನ್ನು ಪುಣೆಯಿಂದ ಮೈಸೂರುವರೆಗೆ (ಬೆಂಗಳೂರು ಮೂಲಕ) ಮತ್ತು ವಿಜಯವಾಡದಿಂದ ಮರ್ಮಗೋವಾದವರೆಗೆ ವಿಸ್ತರಿಸಲಾಯಿತು. ಹೊಗೆ ಬಂಡಿಗಳ ಓಡಾಟದಿಂದ ವ್ಯಾಪಾರ ವಹಿವಾಟು ಹಾಗೂ ಜನಜೀವನದ ಮೇಲೆ ಅಪಾರ ಪ್ರಭಾವವಾಯಿತು. ಹತ್ತಿಯ ಅಲ್ಲದೆ ಧಾನ್ಯಾದಿಗಳ ರಫ್ತು ಮತ್ತು ಆಮದಿನ ವ್ಯವಹಾರ ಹೊಗೆಬಂಡಿಗಳ ಮೂಲಕ ವೇಗವಾಗಿ ನಡೆಯತೊಡಗಿತು. ಮಳೆಗಾಲದಲ್ಲೂ ವ್ಯತ್ಯಯವಿಲ್ಲದೆ ಸಾರಿಗೆ ಸಾಗುವಂತಾಯಿತು. ರೈಲ್ವೆಗಳ ಬೆಳವಣಿಗೆಯಿಂದ ಹಳೇಯ ವ್ಯಾಪಾರದ ದಾರಿಗಳಾಗಿದ್ದ ಉತ್ತರ ಕನ್ನಡದ ಕರಾವಳಿಗೆ ಹೋಗುವ ಘಟ್ಟದ ರಸ್ತೆಗಳು ಹಾಗೂ ಬಂದುರುಗಳ ಪ್ರಾಮುಖ್ಯತೆ ಕುಂದಿತು. 1903-4 ರ ವೇಳೆಗೆ ಹತ್ತಿಯ ರಫ್ತು ವ್ಯಾಪಾರ ಎಷ್ಟರಮಟ್ಟಿಗೆ ಹೆಚ್ಚಾಯಿತೆಂದರೆ ಜಿಲ್ಲೆಯಲ್ಲಿ ಉತ್ಪಾದಿಸಿದ ಎಲ್ಲ ಹತ್ತಿಯ ಸಾಗಾಣಿಕೆಯನ್ನು ನಿರ್ವಹಿಸಲು ರೈಲ್ವೆಯು ಅಸಮರ್ಥವಾಯಿತು. ಹುಬ್ಬಳ್ಳಿಯಿಂದ ಕಾರವಾರಕ್ಕೆ ವಿಸ್ತರಣೆಯಾಗಬೇಕಿದ್ದ ರೈಲು ಮಾರ್ಗ ಗೋವೆಯ ಜೊತೆ ರೈಲು ಸಂಪರ್ಕ ಬಂದುದರಿಂದ ಕಾರ್ಯಗತವಾಗಲಿಲ್ಲ.

ಸದರ್ನ್ ಮರಾಠಾ ಕಂಪನಿಯು 1908 ರಲ್ಲಿ ಮದ್ರಾಸ್ ರೈಲ್ವೆ ಕಂಪನಿಯೊಂದಿಗೆ ವಿಲೀನವಾಗಿ ಎಂ. ಅಂಡ್ ಎಸ್.ಎಮ್. ಕಂಪನಿಯಾಗಿ ಜನ್ಮತಳೆಯಿತು. 1919 ರ ಸಮಯದಲ್ಲಿ ಹುಬ್ಬಳ್ಳಿ-ಶಿರಸಿ ನಡುವಣ 105 ಕಿ.ಮೀ. ಮಾರ್ಗ, ಹುಬ್ಬಳ್ಳಿ ಯಲ್ಲಾಪುರ 67 ಕಿ.ಮೀ., ಮತ್ತು ಹಾವನೂರು-ಹಾವೇರಿ ಮಧ್ಯೆ 35 ಕಿ.ಮೀ. ಮಾರ್ಗಗಳ, ನಿರ್ಮಾಣದ ಕಾರ್ಯ ಕೈಗೊಳ್ಳಲು ಖಾಸಗಿಯವರು ಮುಂದೆ ಬಂದಿದ್ದರು. ಆಗಿನ ಸರ್ಕಾರದ ಪರಿಶೀಲನೆಯಲ್ಲಿ ಈ ಸಲಹೆಗಳು ಇದ್ದರೂ ಸಹ ಮುಂದೆ ಯಾವ ಪ್ರಗತಿಯು ಆಗಲಿಲ್ಲ. ಸರ್ಕಾರದ ಯೋಜನೆಗೆ ಅನುಗುಣವಾಗಿ 1944 ರ ಏಪ್ರಿಲ್ ಒಂದರಂದು ಇಡೀ ಎಂ. ಅಂಡ್ ಎಸ್.ಎಮ್. ಜಾಲವನ್ನು ದಕ್ಷಿಣ ರೈಲ್ವೆಯಲ್ಲಿ ಸೇರ್ಪಡೆ ಮಾಡಲಾಯಿತು. ಇದರಿಂದ ಧಾರವಾಡ ಜಿಲ್ಲೆಯ ರೈಲು ಮಾರ್ಗಗಳು ದಕ್ಷಿಣ ರೈಲ್ವೆಗೆ ವರ್ಗಾಯಿಸಲ್ಪಟ್ಟವು. 1950-51 ರಲ್ಲಿ ಜಿಲ್ಲೆಯಲ್ಲಿ ಒಟ್ಟು 315 ಕಿ.ಮೀ. ಉದ್ದದ ಮೀಟರ್‌ಗೇಜ್ ರೈಲು ಮಾರ್ಗವಿತ್ತು. ಮತ್ತು ರೈಲು ನಿಲ್ದಾಣಗಳ ಸಂಖ್ಯೆ 30 ಆಗಿತ್ತು. ಜಿಲ್ಲೆಯ 17 ತಾಲ್ಲೂಕುಗಳ ಪೈಕಿ ಕಲಘಟಗಿ, ಹಾನಗಲ್, ಹಿರೇಕೆರೂರು, ಮುಂಡರಗಿ, ನರಗುಂದ, ಶಿರಹಟ್ಟಿ ಮತ್ತು ಶಿಗ್ಗಾಂವಿ ತಾಲೂಕುಗಳಲ್ಲಿ ಯಾವ ರೈಲು ಮಾರ್ಗವೂ ಇರಲಿಲ್ಲ.

ದಿನಾಂಕ 31.10.1956 ರಲ್ಲಿ ದಕ್ಷಿಣ ರೈಲ್ವೇಯ ಪುನರ್ರಚನೆಯಾದಾಗ ಹುಬ್ಬಳ್ಳಿ ವಿಭಾಗ ಅಸ್ತಿತ್ವಕ್ಕೆ ಬಂದಿತು. ಪುನಃ ದಿನಾಂಕ 2.10.1966ರಲ್ಲಿ ದಕ್ಷಿಣ-ಮಧ್ಯ ರೈಲ್ವೆ ಸ್ಥಾಪನೆಯಾದಾಗ ಹುಬ್ಬಳ್ಳಿಯು ವಿಭಾಗೀಯ ಕೇಂದ್ರವಾಯಿತು. ಹುಬ್ಬಳ್ಳಿ-ಗುಂತಕಲ್-ದ್ರೋಣಾಚಲಂ ಮಾರ್ಗ ಇದಕ್ಕೆ ಸೇರ್ಪಡೆಯಾಯಿತು. ಹುಬ್ಬಳ್ಳಿ, ಹರಿಹರ ಮಾರ್ಗ ದಕ್ಷಿಣ ರೈಲ್ವೆಗೆ ಸೇರಿಸಲ್ಪಟ್ಟಿತು. ಅಳ್ನಾವರ, ದಾಂಡೇಲಿ ನಡುವಣ 31.7 ಕಿ.ಮೀ.ಗಳ ಮೀಟರ್‌ಗೇಜ ಮಾರ್ಗವನ್ನು 1.2.1919 ರಲ್ಲಿ ಸಂಚಾರಕ್ಕೆ ತೆರೆಯಲಾಯಿತು. ಆದರೆ ದಕ್ಷಿಣ ರೈಲ್ವೆಯು ಈ ಮಾರ್ಗವನ್ನು 1.10.1962 ರಲ್ಲಿ ಕರ್ನಾಟಕ ಸರ್ಕಾರದಿಂದ ಖರೀದಿಸಿತು. ಜಿಲ್ಲೆಯಲ್ಲಿ ಒಟ್ಟು 320.72 ಕಿ.ಮೀ.ಉದ್ದದ (31.3.1994) ರೈಲು ಮಾರ್ಗವಿದ್ದು ಅವುಗಳ ವಿವರಗಳು ಈ ರೀತಿ ಇದೆ. 1. ಪುಣೆ-ಬೆಂಗಳೂರು ಮಾರ್ಗವು ಬೆಳಗಾವಿ ಜಿಲ್ಲೆಯ ಲೋಂಡಾ ಜಂಕ್ಷನ್‌ನಿಂದ ಅಳ್ನಾವರ ರೈಲ್ವೆ ನಿಲ್ದಾಣದ ಬಳಿ ಧಾರವಾಡ ಜಿಲ್ಲೆಯನ್ನು ಪ್ರವೇಶಿಸುತ್ತದೆ. ದಕ್ಷಿಣದಲ್ಲಿ ಜಿಲ್ಲೆಯ ಅಂಚಿನಲ್ಲಿ ಚಿತ್ರದುರ್ಗ ಜಿಲ್ಲೆಯ ಹರಿಹರವನ್ನು ಪ್ರವೇಶಿಸುತ್ತದೆ. ಈ ವಿಭಾಗದ ರೈಲು ನಿಲ್ದಾಣಗಳ ಪಟ್ಟಿ ಈ ರೀತಿ ಇದೆ. ಅಳ್ನಾವರ, ಕಾಶಾನಟ್ಟಿ, ಕಂಬಾರಗಣವಿ, ನಾಗಲಾವಿ, ಮುಗದ, ಕಾರಕೊಪ್ಪ, ಧಾರವಾಡ, ನವಲೂರು, ಅಮರಗೋಳ, ಉಣಕಲ್, ಹುಬ್ಬಳ್ಳಿ, ಕುಂದಗೋಳ, ಸಂಶಿ, ಗುಡಗೇರಿ, ಯಲವಿಗಿ, ಸವಣೂರು, ಕರ್ಜಗಿ, ಹಾವೇರಿ, ಬ್ಯಾಡಗಿ, ದೇವರಗುಡ್ಡ, ರಾಣೆಬೆನ್ನೂರು ಮತ್ತು ಚಳಗೇರಿ. 2. ಹುಬ್ಬಳ್ಳಿ, ಸೊಲ್ಲಾಪುರ ಮಾರ್ಗವು, ಹುಬ್ಬಳ್ಳಿ, ನವಲಗುಂದ-ಗದಗ ಹಾಗೂ ರೋಣ ತಾಲೂಕುಗಳನ್ನು ಹಾದು ಹೊಳೆ ಆಲೂರು ರೈಲ್ವೆ ನಿಲ್ದಾಣದ ಬಳಿಕ ಮಲಪ್ರಭಾ ನದಿಯನ್ನು ದಾಟಿ ಬಿಜಾಪುರ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಈ ಹಾದಿಯಲ್ಲಿ ಜಿಲ್ಲೆಯ ಮಿತಿಯಲ್ಲಿ ಬರುವ ರೈಲ್ವೆ ನಿಲ್ದಾಣಗಳು ಹುಬ್ಬಳ್ಳಿ, ಕುಸುಗಲ್, ಹೆಬಸೂರು, ಶಿಶ್ವಿನಹಳ್ಳಿ, ನವಲಗುಂದ ರಸ್ತೆ, ಅಣ್ಣಿಗೇರಿ, ಕೊಂಡಿಕೊಪ್ಪ, ಹುಲಕೋಟಿ, ಬಿಂಕದಕಟ್ಟಿ, ಗದಗ, ಹೊಂಬಳ, ಬಳಗಾನೂರು, ಮಲ್ಲಾಪುರ, ಸೋಮನಕಟ್ಟಿ ಮತ್ತು ಹೊಳೆ ಆಲೂರು, ನಂತರ ಮಲಪ್ರಭಾ ನದಿಯನ್ನು ದಾಟಿ ಬಿಜಾಪುರ ಜಿಲ್ಲೆಯನ್ನು ಪ್ರವೇಶಿಸುತ್ತದೆ. 3. ಹುಬ್ಬಳ್ಳಿ, ಗುಂತಕಲ್ ರೈಲುಮಾರ್ಗವು ಹುಬ್ಬಳ್ಳಿಯಿಂದ-ಗದಗಿನವರೆಗೆ ಸೊಲ್ಲಾಪುರ ಮಾರ್ಗದಲ್ಲಿಯೇ ಸಾಗಿ ಗದಗಿನ ನಂತರ ಕಣಗಿನಹಾಳ ಮತ್ತು ಹರ್ಲಾಪುರ ರೈಲ್ವೆ ನಿಲ್ದಾಣಗಳನ್ನು ದಾಟಿ, 84 ನೇ ಕಿ.ಮೀ. ಬಳಿ ಜಿಲ್ಲೆಯ ಗಡಿಯನ್ನು ದಾಟಿ ಹೊಸಪೇಟೆ ಕಡೆ ಸಾಗುತ್ತದೆ.

**ಜಿಲ್ಲೆಯ ಪ್ರಮುಖ ರೈಲ್ವೆ ನಿಲ್ದಾಣಗಳಿಂದ ಪ್ರಯಾಣಿಸಿದವರ ಸಂಖ್ಯೆ ಹಾಗೂ ಗಳಿಸಿದ ಆದಾಯ (1992-93 ಮತ್ತು 1993-94).**

| ರೈಲ್ವೆ ನಿಲ್ದಾಣ | 1992-93 | | 1993-94 | |
|---|---|---|---|---|
| | ಪ್ರಯಾಣಿಕರ ಸಂಖ್ಯೆ | ಆದಾಯ (ರೂಪಾಯಿಗಳು) | ಪ್ರಯಾಣಿಕರ ಸಂಖ್ಯೆ | ಆದಾಯ (ರೂಪಾಯಿಗಳು) |
| ಹುಬ್ಬಳ್ಳಿ | 9,67,826 | 4,28,57,568 | 9,56,391 | 4,57,15,878 |
| ಗದಗ | 8,89,607 | 1,08,44,355 | 8,49,983 | 1,07,31,563 |
| ಧಾರವಾಡ | 1,72,205 | 66,92,702 | 1,22,228 | 52,28,358 |
| ಅಳ್ನಾವರ | 63,514 | 10,55,112 | 50,651 | 9,69,317 |
| ಅಣ್ಣಿಗೇರಿ | 42,186 | 4,96,634 | 40,388 | 4,26,702 |
| | | ಸರಕು ಸಾಗಾಣಿಕೆಯಿಂದ ಗಳಿಸಿದ ಆದಾಯ | | |
| | | 92-93 | | 93-94 |
| ಹುಬ್ಬಳ್ಳಿ | | 90,09,429 | | 84,66,706 |

ಆಧಾರ: ಮಂಡಲ ರೈಲ್ವೆ ವ್ಯವಸ್ಥಾಪಕರ ಕಛೇರಿ, ಹುಬ್ಬಳ್ಳಿ.

ದೇಶದ ಎಲ್ಲಾ ರೈಲು ಮಾರ್ಗಗಳನ್ನು ಬ್ರಾಡ್‌ಗೇಜ್‌ಗೆ ಪರಿವರ್ತಿಸಬೇಕೆಂಬ ಕೇಂದ್ರ ಸರ್ಕಾರದ ನೀತಿಗನುಗುಣವಾಗಿ, ಜಿಲ್ಲೆಯಲ್ಲೂ ಸಹ ಗೇಜ್ ಪರಿವರ್ತಿಸುವ ಕಾರ್ಯ ನಡೆಯುತ್ತಿದೆ. ಇದರಲ್ಲಿ ಹುಬ್ಬಳ್ಳಿ-ಲೊಂಡಾ ಮಾರ್ಗವು 70.45 ಕಿ.ಮೀ. ಉದ್ದವಿದ್ದು 1995 ರ ಮಾರ್ಚ್ 31 ರೊಳಗಾಗಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಇದಕ್ಕೆ ತಗಲುವ ಅಂದಾಜು ವೆಚ್ಚ 53 ಕೋಟಿ ರೂಪಾಯಿಗಳು. ಹುಬ್ಬಳ್ಳಿ ಮತ್ತು ಹೊಸಪೇಟೆ ನಡುವಿನ 143 ಕಿ.ಮೀ. ಮಾರ್ಗದ ಪರಿವರ್ತನಾ ಕಾರ್ಯ ದಿನಾಂಕ 31.5.1995 ರೊಳಗಾಗಿ

ಮುಗಿಯುವ ನಿರೀಕ್ಷೆಯಿದೆ. ಬೆಂಗಳೂರು, ಹುಬ್ಬಳ್ಳಿ, ಮೀರಜ್ ಮಾರ್ಗವನ್ನು 1995ರ ಏಪ್ರಿಲ್ ಒಂದರಂದು ಸಂಚಾರಕ್ಕೆ ತೆರೆಯುವ ಯೋಜನೆಯಿದೆ. ಹುಬ್ಬಳ್ಳಿ-ಹರಿಹರ ಮಧ್ಯೆ ರೈಲ್ವೆ ಮಾರ್ಗದ ಬ್ರಾಡ್‌ಗೇಜ್ ಪರಿವರ್ತನೆ ಕಾರ್ಯ 1994-95 ನೇ ಸಾಲಿನಲ್ಲಿ ಪ್ರಾರಂಭವಾಗಿದೆ. ಇದು ಬೇಗ ಮುಕ್ತಾಯವಾಗಿ 1995ರಲ್ಲಿ ಬೆಂಗಳೂರು ಹುಬ್ಬಳ್ಳಿ ನಡುವೆ ಶತಾಬ್ಧಿ ಎಕ್ಸ್‌ಪ್ರೆಸ್ ಓಡಿಸುವ ಯೋಜನೆ ಮಂಜೂರಾಗಿದೆ. ಜಿಲ್ಲೆಯಲ್ಲಿ 193.72 ಕಿ.ಮೀ. ರೈಲುಮಾರ್ಗ ದಕ್ಷಿಣ - ಮಧ್ಯ ರೈಲ್ವೆಗೂ 127.00 ಕಿ.ಮೀ. ಮಾರ್ಗ ದಕ್ಷಿಣ ರೈಲ್ವೆಗೂ ಸೇರಿದೆ. ಒಟ್ಟು ಮಾರ್ಗದ ಪ್ರಮಾಣ 320.72 ಕಿ.ಮೀ.

### ರೈಲ್ವೆ ಕಾರ್ಯಾಗಾರ, ಹುಬ್ಬಳ್ಳಿ

ಹುಬ್ಬಳ್ಳಿಯ ಮೀಟರ್‌ಗೇಜ್ ಕಾರ್ಯಾಗಾರ 1885 ರಲ್ಲಿ ಆರಂಭಗೊಂಡು ಶತಮಾನ ದಾಟಿದೆ. ಬ್ರಿಟಿಷರಿಂದ ಸ್ಥಾಪಿಸಲ್ಪಟ್ಟ ಈ ಕಾರ್ಯಾಗಾರ 1919 ರಲ್ಲಿ ಸದರ್ನ್ ಮರಾಠ ರೈಲ್ವೆ ಕಂಪನಿಯ ಹತೋಟಿಗೆ ಸೇರಿತು. ದಕ್ಷಿಣ-ಮಧ್ಯ ರೈಲ್ವೆ ವಿಭಾಗ ಪ್ರಾರಂಭವಾದಾಗ 1966ರಲ್ಲಿ ದಕ್ಷಿಣ ರೈಲ್ವೆಯಿಂದ, ದಕ್ಷಿಣ-ಮಧ್ಯ ರೈಲ್ವೆಯ ಹತೋಟಿಗೆ ಬಂದಿತು. ಮೀಟರ್‌ಗೇಜ್‌ಗೆ ಸಂಬಂಧಿಸಿದ ಉಗಿ ಇಂಜನ್‌ಗಳು, ಕ್ಯಾರಿಯೇಜ್, ವ್ಯಾಗನ್ ಇತ್ಯಾದಿಗಳನ್ನು ದುರಸ್ತಿ ಮತ್ತು ಸಜ್ಜುಗೊಳಿಸುವ ಕೆಲಸಗಳನ್ನು ಇಲ್ಲಿ ಕೈಗೊಳ್ಳಲಾಗುತ್ತಿತ್ತು. ಇತ್ತೀಚಿನ ವರ್ಷಗಳಲ್ಲಿ ಡೀಜಲ್ ಹಾಗೂ ಎಲೆಕ್ಟ್ರಿಕ್ ಎಂಜಿನ್‌ಗಳ ಬಳಕೆ ಹೆಚ್ಚಾಗಿದೆ. ಆದರೆ ಇವುಗಳನ್ನು ದುರಸ್ತಿಗೊಳಿಸುವ ವ್ಯವಸ್ಥೆ ಈ ಕಾರ್ಯಾಗಾರದಲ್ಲಿ ಇಲ್ಲದೇ ಇರುವುದರಿಂದ ಪ್ರಗತಿ ಕುಂಠಿತವಾಗಿದೆ. ಅಲ್ಲದೆ 1991-92 ರಲ್ಲಿ ದೇಶದಲ್ಲಿ ರೈಲು ಮಾರ್ಗಗಳನ್ನು ಬ್ರಾಡ್‌ಗೇಜ್‌ಗೆ ಪರಿವರ್ತಿಸಬೇಕೆಂಬ ಯೋಜನೆಯನ್ನು ಕೇಂದ್ರ ಸರ್ಕಾರ ರೂಪಿಸಿದೆ. ಇದರ ಅನುಸಾರ ಅನೇಕ ಭಾಗಗಳಲ್ಲಿ ಗೇಜ್ ಪರಿವರ್ತನೆಯ ಕಾರ್ಯ ಭರದಿಂದ ಸಾಗುತ್ತಿದೆ. ಇನ್ನು ಮುಂದೆ ಈ ಕಾರ್ಯಾಗಾರವನ್ನು ಬ್ರಾಡ್‌ಗೇಜ್‌ಗೆ ಸಂಬಂಧಪಟ್ಟಂತೆ ದುರಸ್ತಿ ಮಾಡುವ ಕಾರ್ಯಾಗಾರವಾಗಿ ನವೀಕರಿಸಿದರೆ ಮಾತ್ರ ಅದು ಹಿಂದಿನ ಮಹತ್ವವನ್ನು ಮತ್ತೆ ಪಡೆಯುವುದು ಸಾಧ್ಯ. ಇಲ್ಲಿ ತಯಾರಾದ ಕೊನೆಯ ಮೀಟರ್‌ಗೇಜ್ ಉಗಿಬಂಡಿ ಎಂಜಿನ್ ಜನವರಿ 1995 ರಲ್ಲಿ ಹೊರಬಿದ್ದು ಅಲ್ಲಿಗೆ ಆ ಉತ್ಪಾದನಾ ವಿಭಾಗ ಮುಚ್ಚುವಂತಾಗಿದೆ.

### ವಿಮಾನ ಸಂಚಾರ

ಉತ್ತರ ಕರ್ನಾಟಕದ ಬಹು ಮುಖ್ಯ ಅವಳಿ ನಗರಗಳಾದ ಹುಬ್ಬಳ್ಳಿ ಮತ್ತು ಧಾರವಾಡಗಳು ಬಹಳ ಶೀಘ್ರವಾಗಿ ಬೆಳೆಯುತ್ತಿದ್ದು ಔದ್ಯಮಿಕ ಕ್ಷೇತ್ರದಲ್ಲಿ ಸಹ ಮುಂದುವರೆದಿದ್ದು ಇಲ್ಲಿ ಒಂದು ವಿಮಾನ ನಿಲ್ದಾಣ ಸ್ಥಾಪಿಸುವ ಬಗ್ಗೆ 1970 ರಿಂದಲೂ ಪ್ರಯತ್ನಗಳು ನಡೆದವು. ಈ ದಿಸೆಯಲ್ಲಿ ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್ ಸೂಕ್ತವಾದ ಸ್ಥಳದಲ್ಲಿ 347 ಎಕ್ರೆ (ಗೋಕುಲದ ಬಳಿ) ಜಮೀನನ್ನು ಕೇಂದ್ರ ಸರ್ಕಾರಕ್ಕೆ ಉಚಿತವಾಗಿ ಕೊಟ್ಟಿತು. ವಿಮಾನ ನಿಲ್ದಾಣ ನಿರ್ಮಿಸುವ ಖರ್ಚನ್ನು ರಾಜ್ಯ ಸರ್ಕಾರವೇ ವಹಿಸಿಕೊಳ್ಳಬೇಕೆಂಬ ಷರತ್ತಿನೊಡನೆ ಹುಬ್ಬಳ್ಳಿಗೆ ವಾಯುದೂತ್ ವಿಮಾನಗಳ ಸಂಚಾರ ಏರ್ಪಡಿಸಲು ಕೇಂದ್ರ ಸರ್ಕಾರ ಒಪ್ಪಿತು. 1988 ರಲ್ಲಿ ರಾಜ್ಯ ಸರ್ಕಾರದ ಖರ್ಚಿನಲ್ಲಿ ಲೋಕೋಪಯೋಗಿ ಇಲಾಖೆಯು, ವಿಮಾನ ನಿಲ್ದಾಣದ ಕೆಲಸವನ್ನು ಪೂರೈಸಿತು. 1989ರಲ್ಲಿ ವಾಯುದೂತ ವಿಮಾನಗಳ ಸಂಚಾರ ಆರಂಭವಾಗಿ ಕೊಂಚ ಸಮಯದಲ್ಲೇ (ಮೇ 1989)ನಿಂತು ಹೋಯಿತು. ನಂತರ ಬೋಯಿಂಗ್ ವಿಮಾನಗಳ ಸಂಚಾರಕ್ಕೆ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೆ ಏರಿಸುವ ಪ್ರಸ್ತಾವನೆಯನ್ನು ಸಹ ಕೈಗೆತ್ತಿಕೊಳ್ಳಲಾಯಿತು. ಈ ಬಗ್ಗೆ ಭಾರತದ ವಿಮಾನ ನಿಲ್ದಾಣ ಪ್ರಾಧಿಕಾರದೊಡನೇ ಸಮಾಲೋಚನೆ ನಡೆಸಲಾಯಿತು. ಮೇಲ್ದರ್ಜೆಗೆ ಏರಿಸುವ ಕೆಲಸವನ್ನು ಎರಡು ಹಂತಗಳಲ್ಲಿ ಪ್ರಾರಂಭಿಸಲು ಯೋಜಿಸಲಾಯಿತು. ಇದೇ 1994 ರ ಏಪ್ರಿಲ್ 17 ರಿಂದ ಮದ್ರಾಸ್-ಬೆಂಗಳೂರು-ಹುಬ್ಬಳ್ಳಿ ನಡುವೆ ವಿಮಾನ ಸಂಚಾರವನ್ನು ಖಾಸಗೀ ವಾಯುಯಾನ ಸಂಸ್ಥೆ ಎನ್.ಈ.ಪಿ.ಸಿ. ಆರಂಭಿಸಿತು. ಇತ್ತೀಚೆಗೆ ಹುಬ್ಬಳ್ಳಿಯಿಂದ ಮುಂಬೈಗೆ ವಿಮಾನಯಾನವನ್ನು ವಿಸ್ತರಿಸಿತು. ಸದ್ಯಕ್ಕೆ ಈ ಸೌಲಭ್ಯ ವಾರದಲ್ಲಿ ಮೂರು ದಿನ ಅಂದರೆ ಸೋಮವಾರ, ಬುಧವಾರ ಮತ್ತು ಶುಕ್ರವಾರ (1, 3, 5) ಪ್ರಯಾಣಿಕರಿಗೆ ಲಭ್ಯವಾಗುತ್ತಿದೆ.

## ಅಂಚೆ ಕಛೇರಿಗಳು

ಬ್ರಿಟಿಷರು 1803 ರಲ್ಲಿ ಒಂದು ಹೊಸ ಅಂಚೆ ಹಾದಿಯನ್ನು ಮದ್ರಾಸ್ ಮತ್ತು ಮುಂಬೈ ನಡುವೆ ಪ್ರಾರಂಭಿಸಿದರು. ಇದು ರನ್ನರ್ ಮಾರ್ಗವಾಗಿದ್ದು ಬೆಂಗಳೂರು, ಧಾರವಾಡ, ಪುಣೆ ಮೂಲಕ ನಡೆಯುತ್ತಿತ್ತು. ಇದಲ್ಲದೆ ಮಲಬಾರ್‌ನಿಂದ ಮುಂಬೈಗೆ, ಹೊನ್ನಾವರ ಮತ್ತು ಧಾರವಾಡಗಳ ಮಾರ್ಗವಾಗಿ ರನ್ನರ್‌ಗಳ ಮುಖಾಂತರ ಟಪ್ಪಾಲು ಸಾಗಿಸಲ್ಪಡುತ್ತಿತ್ತು. ಈ ಟಪ್ಪಾಲು ಚೀಲಗಳು ಧಾರವಾಡದಲ್ಲಿ ವಿನಿಮಯವಾಗುತ್ತಿದ್ದವು. ಅಂದಿನ ಕಾಲಕ್ಕೆ ಧಾರವಾಡವು ಟಪ್ಪಾಲು ವ್ಯವಸ್ಥೆಯ ಕೇಂದ್ರವಾಗಿತ್ತು. 1830 ರಲ್ಲಿ ಮುಂಬಯಿ ಇಲಾಖೆ ಪ್ರಕಟಿಸಿದ ಅಂಚೆ ಕಛೇರಿಗಳ ಪಟ್ಟಿಯಲ್ಲಿ ಧಾರವಾಡದ ಹೆಸರಿದೆ. ಈ ಅಂಚೆ ಕಛೇರಿ 1820 ರ ಸುಮಾರಿನಲ್ಲಿ ಪ್ರಾರಂಭಿಸಲ್ಪಟ್ಟಿರಬಹುದು. ಹಾಗೂ ಈ ಕಛೇರಿ ಮುಂಬೈ ಪ್ರಾಂತದ ಜಿ.ಪಿ.ಓ.ರವರ ಆಡಳಿತಕ್ಕೆ ಒಳಪಟ್ಟಿತು. ಧಾರವಾಡದಿಂದ ಅನ್ಯ ಪ್ರದೇಶಗಳಿಗೆ ರವಾನಿಸುತ್ತಿದ್ದ ಅಂಚೆ ಶುಲ್ಕ 1830 ರಲ್ಲಿ ಈ ರೀತಿ ಇತ್ತು: (1) ಧಾರವಾಡ-ಮುಂಬಯಿ ನಡುವೆ ಒಂದು ತೊಲ ತೂಕದ ಪಾಕೀಟಿಗೆ 9 ಆಣೆ (57 ಪೈಸೆ) ಅಂಚೆ ಶುಲ್ಕ. (2) ಧಾರವಾಡ-ಮದ್ರಾಸ್ ನಡುವೆ 12 ಆಣೆ (75 ಪೈಸೆ) ಒಂದು ತೊಲೆ ತೂಕದ ಪಾಕೀಟಿಗೆ, ಹಾಗೂ 50 ತೊಲೆ ತೂಕದ ಪಾರ್ಸಲ್‌ಗೆ 3 ರೂ.8 ಆಣೆ (50 ಪೈಸೆ). ಹುಬ್ಬಳ್ಳಿಯಲ್ಲಿ ಅಂಚೆ ಕಛೇರಿಯು 1833 ರ ಹೊತ್ತಿಗಾಗಲೇ ಅಸ್ತಿತ್ವದಲ್ಲಿದ್ದ ಸಂಗತಿಯು ಅದೇ ವರ್ಷದ ಫೋರ್ಟ್ ಸೇಂಟ್ ಜಾರ್ಜ (ಮದ್ರಾಸ್) ಗೆಜೆಟಿನಲ್ಲಿ ಪ್ರಕಟವಾದ ಅಂಚೆ ಕಛೇರಿಗಳ ಯಾದಿಯಲ್ಲಿ ತಿಳಿದು ಬರುತ್ತದೆ. ಪುಣೆ, ಧಾರವಾಡ, ಹುಬ್ಬಳ್ಳಿ, ಬೆಂಗಳೂರು ಅಂಚೆ ರವಾನಿಸುವ ಮಾರ್ಗದಲ್ಲಿ ರನ್ನರ್‌ಗಳು ಟಪ್ಪಾಲು ಸಾಗಿಸುತ್ತಿದ್ದರು ಮತ್ತು ಈ ಕಾರ್ಯಕ್ಕೆ 230 ಜನ ರನ್ನರ್‌ಗಳನ್ನು ತೊಡಗಿಸಲಾಗಿತ್ತು. ಮುಂಬೈಯಿಂದ-ಮದ್ರಾಸ್‌ಗೆ ಟಪ್ಪಾಲು ತಲುಪಿಸಲು ಸುಮಾರು 15 ದಿನಗಳಾಗುತ್ತಿದ್ದವು. 1855 ರ ಹೊತ್ತಿಗೆ ಪುಣೆಯಿಂದ ಟಪ್ಪಾಲು ಚಕ್ಕಡಿಯಲ್ಲಿ, 1870 ರಲ್ಲಿ ರೈಲ್ವೆ ಮೂಲಕ, ನಂತರ ರೈಲ್ವೆ ಇಲ್ಲದ ಭಾಗಗಳಲ್ಲಿ ಟಾಂಗಾದ ಮೂಲಕ ಹುಬ್ಬಳ್ಳಿ ತಲುಪುತ್ತಿತ್ತು. 1874 ರಲ್ಲಿ ಧಾರವಾಡ ಅಂಚೆ ಕಛೇರಿಯು ಹೆಡ್ ಪೋಸ್ಟ್ ಆಫೀಸ್ ಆಗಿ ಪರಿವರ್ತನೆಯಾಯಿತು. 1890 ರಲ್ಲಿ ಪುಣೆ, ಹುಬ್ಬಳ್ಳಿ, ಬೆಂಗಳೂರು ರೈಲ್ವೆ ಮಾರ್ಗ ಪೂರ್ಣವಾದ ನಂತರ, ರೈಲ್ವೆ ಮೂಲಕ ಅಂಚೆ ಸಾಗಾಣಿಕೆ ಪ್ರಾರಂಭವಾಯಿತು. ಅಂಚೆ ಪತ್ರಗಳನ್ನು ರೈಲ್ವೆ ಬೋಗಿಯಲ್ಲಿ ವಿಂಗಡಿಸುವುದಕ್ಕಾಗಿ ಆರ್.ಎಂ.ಎಸ್.ಎಚ್. ವಿಭಾಗವನ್ನು ಹುಬ್ಬಳ್ಳಿಯಲ್ಲಿ ಪ್ರಾರಂಭಿಸಲಾಯಿತು. ನಂತರ ಇದರ ವ್ಯಾಪ್ತಿಗೆ ಹುಬ್ಬಳ್ಳಿ-ಬೆಂಗಳೂರು, ಹಾಗೂ ಹುಬ್ಬಳ್ಳಿ-ಗುಂತಕಲ್ ಭಾಗಗಳನ್ನು ಸೇರಿಸಲಾಯಿತು. ಆದರೆ ಕಾರಣಾಂತರಗಳಿಂದ ಹುಬ್ಬಳ್ಳಿ ಆರ್.ಎಂ.ಎಸ್.ಹೆಚ್. ಕಛೇರಿಯನ್ನು 1915 ರ ಹೊತ್ತಿಗೆ ಮುಚ್ಚಲಾಯಿತು. ಅದರ ಅಧೀನದಲ್ಲಿದ್ದ ರೈಲ್ವೆ ಭಾಗಗಳನ್ನು ಮುಂಬೈ ಮತ್ತು ಮದ್ರಾಸ್‌ನ ಆರ್.ಎಂ.ಎಸ್.ಎಚ್. ವಿಭಾಗಗಳಿಗೆ ವರ್ಗಾಯಿಸಲಾಯಿತು.

1884 ರ ಸಮಯದಲ್ಲಿ ಧಾರವಾಡವು ಕೆನರಾ ಅಂಚೆ ವಿಭಾಗಕ್ಕೆ ಒಳಪಟ್ಟಿತ್ತು. ಜಿಲ್ಲೆಯಲ್ಲಿ ಒಟ್ಟು 49 ಅಂಚೆ ಕಛೇರಿಗಳಿದ್ದವು. ಅದರಲ್ಲಿ 1 ವಿತರಣಾ ಕಛೇರಿ, 2 ಟೌನ್ ಸಬ್ ಆಫೀಸುಗಳು, 28 ಸಬ್ ಆಫೀಸುಗಳು ಹಾಗೂ 18 ಹಳ್ಳಿಯ ಆಫೀಸುಗಳು ಇದ್ದವು. ಈ ಪೈಕಿ ಬ್ರಿಟಿಷರ ಆಡಳಿತವಿದ್ದ ಪ್ರದೇಶಗಳಲ್ಲಿ 25 ಸಬ್ ಆಫೀಸುಗಳು, 17 ಹಳ್ಳಿಯ ಆಫೀಸುಗಳು ಕೆಲಸ ಮಾಡುತ್ತಿದ್ದವು. ಸಬ್ ಆಫೀಸುಗಳು ಇದ್ದ ಸ್ಥಳಗಳು (1) ಅಣ್ಣಿಗೇರಿ, (2) ಬಂಕಾಪುರ, (3) ಬ್ಯಾಡಗಿ, (4) ಡಂಬಳ, (5) ದುಂಡಶಿ, (6) ಗದಗ, (7) ಗರಗ, (8) ಗುಡಗೇರಿ, (9) ಹಾನಗಲ್, (10) ಹಾವೇರಿ, (11) ಹೆಬ್ಬಳ್ಳಿ, (12) ಹಿರೇಕೆರೂರು, (13) ಹುಬ್ಬಳ್ಳಿ, (14) ಕಲಘಟಗಿ, (15) ಕರ್ಜಗಿ, (16) ಮಿಶ್ರೀಕೋಟಿ, (17) ಮುಗದ, (18) ಮುಂಡರಗಿ, (19) ನರಗುಂದ, (20) ನವಲಗುಂದ, (21) ರಾಣೆಬೆನ್ನೂರು, (22) ರೋಣ, (23) ಸವಣೂರು, (24) ಶಿಗ್ಗಾಂವಿ ಹಾಗೂ (25) ತುಮ್ಮಿನಕಟ್ಟಿ; ಮತ್ತು ಸಂಸ್ಥಾನಗಳಿಗೆ ಸಂಬಂಧಿಸಿದ ಸಬ್ ಆಫೀಸುಗಳಾದ ಕುಂದಗೋಳ, ಲಕ್ಷ್ಮೇಶ್ವರ ಮತ್ತು ಶಿರಹಟ್ಟಿ; ಇತರ ಹಳ್ಳಿಗಳಲ್ಲಿದ್ದ ಅಂಚೆ ಕಛೇರಿಗಳು 1. ಅಬ್ಬಿಗೇರಿ, 2. ಅಗಡಿ, 3. ಆಲೂರು, 4. ಅರಳಿಕಟ್ಟಿ, 5. ಬಮ್ಮನಹಳ್ಳಿ, 6. ಗುತ್ತಲ, 7. ಹಲಗೇರಿ, 8. ಹುಲಕೋಟಿ, 9. ಕುಪ್ಪೇಲೂರು, 10. ಕುರ್ತುಕೋಟಿ, 11. ಮಹಾರಾಜಪೇಟೆ, 12. ಮೋಟೆಬೆನ್ನೂರು 13. ಮುಳಗುಂದ 14. ನರೇಂದ್ರ 15. ತಡಕೋಡ 16. ತಡಸ ಹಾಗೂ 17. ಉಪ್ಪಿನ ಬೆಟಗೇರಿ ಬ್ರಿಟಿಷ್ ಪ್ರದೇಶದಲ್ಲಿ, ಮತ್ತು ಒಂದು ಸಂಸ್ಥಾನೀ ಪ್ರದೇಶದಲ್ಲಿ 18. ದೊಡವಾಡ ಇದ್ದವು. ಈ 18 ರಲ್ಲಿ 17 ಹಳ್ಳಿಯ ಅಂಚೆ ಕಛೇರಿಗಳು, ಹಳ್ಳಿಯ ಶಾಲಾ ಉಪಾಧ್ಯಾಯರ ಉಸ್ತುವಾರಿಯಲ್ಲಿದ್ದವು. ಒಂದು ಖಾಸಗಿ ಗೃಹಸ್ಥರ ಉಸ್ತುವಾರಿಯಲ್ಲಿ ಇತ್ತು. ಪೋಸ್ಟಮೆನ್‌ಗಳು ಮತ್ತು ರನ್ನರ್‌ಗಳು ಈ ಹಳ್ಳಿಗಳಲ್ಲಿ ಅಂಚೆಯನ್ನು ವಿತರಿಸುತ್ತಿದ್ದವು. ಅಂಚೆ ಕಛೇರಿಗಳಿಲ್ಲದ ಸಣ್ಣ ಹಳ್ಳಿಗಳಲ್ಲಿ ಸಹ 44 ಮಂದಿ ಪೋಸ್ಟಮೆನ್‌ಗಳು ಅಂಚೆಯನ್ನು ವಿತರಣೆ ಮಾಡುತ್ತಿದ್ದರು. ಮುಂಬೈಗೆ ರವಾನೆಯಾಗುತ್ತಿದ್ದ ಹಾಗೂ

ಅಲ್ಲಿಂದ ಬರುತ್ತಿದ್ದ ಅಂಚೆಯು ಮುಂಬೈ ಮತ್ತು ಪುಣೆ ನಡುವೆ 'ದಿ ಗ್ರೇಟ್ ಇಂಡಿಯನ್ ಪೆನಿನ್‌ಸುಲರ್ ರೈಲ್ವೆ' ಮೂಲಕ ಸಾಗಿಸಲ್ಪಡುತ್ತಿತ್ತು. ಮತ್ತು ರೈಲು ವಿಸ್ತರಣೆಗೆ ಮೊದಲು ಪುಣೆಯಿಂದ ಹುಬ್ಬಳ್ಳಿಗೆ ಚಕ್ಕಡಿ ಅಥವಾ ಟಾಂಗಾಗಳಲ್ಲಿ ರವಾನೆಯಾಗುತ್ತಿತ್ತು. ಧಾರವಾಡ ನಗರದ ಸಿಟಿ ಅಂಚೆ ಕಛೇರಿ ಸುಮಾರು 1880 ರಿಂದಲೂ ಅಸ್ತಿತ್ವದಲ್ಲಿದೆ. ಮತ್ತು ರೈಲ್ವೆ ಸ್ಟೇಷನ್ ಉಪ ಅಂಚೆ ಕಛೇರಿ 1890 ರ ಸುಮಾರಿಗೆ ಆರಂಭಿಸಿ ನಂತರ ಮುಚ್ಚಲ್ಪಟ್ಟಿರಬೇಕು. ಹುಬ್ಬಳ್ಳಿಯ ದುರ್ಗದ ಬೈಲು ಬ್ರ್ಯಾಂಚ್ ಪೋಸ್ಟ್ ಆಫೀಸು 1910 ರ ಸುಮಾರಿಗೆ ಆರಂಭವಾಗಿ ನಂತರ ಸಿಟಿ ಪೋಸ್ಟ್ ಆಫೀಸ್ ಆಗಿ ಮುಂದುವರೆಯಿತು. 1953 ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ 32 ಉಪ ಅಂಚೆ ಕಛೇರಿಗಳು, 142 ಬ್ರ್ಯಾಂಚ್ ಕಛೇರಿಗಳು ಹಾಗೂ 28 ತಂತಿ ಕಛೇರಿಗಳಿದ್ದವು. ದಿನಾಂಕ 1.4.1960 ರಲ್ಲಿ ಕರ್ನಾಟಕ ಅಂಚೆ ಮತ್ತು ತಂತಿ ವೃತ್ತವು ಸ್ಥಾಪನೆಗೊಂಡು ಮುಂಬಯಿ ವೃತ್ತದಲ್ಲಿದ್ದ ಧಾರವಾಡ ವಿಭಾಗದ ಅಂಚೆ ಕಛೇರಿಗಳು, ಕರ್ನಾಟಕ ವೃತ್ತಕ್ಕೆ ಸೇರ್ಪಡೆಯಾದವು. ನಂತರ ಹುಬ್ಬಳ್ಳಿ ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಪೋಸ್ಟ್ ಆಫೀಸುಗಳು ತೆರೆಯಲ್ಪಟ್ಟವು. 1965 ರಲ್ಲಿ ಹುಬ್ಬಳ್ಳಿ ಪ್ರಧಾನ ಅಂಚೆ ಕಛೇರಿಯಾಯಿತು. ಹಾಗೂ 1982 ರಲ್ಲಿ ಪತ್ರಾಂಕಿತ (ಗೆಜೆಟೆಡ್) ದರ್ಜೆ ಪಡೆಯಿತು. ದಿನಾಂಕ 2.4.1979 ರಲ್ಲಿ ಧಾರವಾಡವನ್ನು ಉತ್ತರ ಕರ್ನಾಟಕ ವಲಯದ ಕೇಂದ್ರಸ್ಥಾನವನ್ನಾಗಿ ಮಾಡಲಾಯಿತು.

ಜನಗಣತಿ ಪ್ರಕಾರ 1981 ಹಾಗೂ 1991 ರಲ್ಲಿ ಪ್ರತೀ 6,283 ಹಾಗೂ 6,873 ಜನರಿಗೆ ಒಂದು ಅಂಚೆ ಕಛೇರಿಯಿದ್ದರೆ, ದಿನಾಂಕ 31.3.1994 ರಲ್ಲಿ ಸರಾಸರಿ 7,097 ಜನರಿಗೆ ಒಂದು ಅಂಚೆ ಕಛೇರಿ ಸೌಲಭ್ಯವಿದ್ದಿತು. 1981 ಹಾಗೂ 1991 ರಲ್ಲಿ ಪ್ರತೀ 15.57 ಚ.ಕಿ.ಮೀ. ಮತ್ತು 15.98 ಚ.ಕಿ.ಮೀ.ಗಳಿಗೆ ಒಂದು ಅಂಚೆ ಕಛೇರಿಯಿದ್ದರೆ, ದಿನಾಂಕ 31.3.1994 ರಲ್ಲಿ 15.85 ಚ.ಕಿ.ಮೀ.ಗಳ ಪ್ರದೇಶಕ್ಕೆ ಒಂದು ಅಂಚೆ ಕಛೇರಿಯಿದ್ದಿತು. ಅಂಚೆ ಇಲಾಖೆಯು ಜಿಲ್ಲೆಯಲ್ಲಿನ ಜನರಿಗೆ ಅನೇಕ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದೆ ಮತ್ತು ಅವುಗಳ ವಿವರಗಳು ದಿನಾಂಕ 31.3.1994 ರ ಅಂತ್ಯಕ್ಕೆ ಹೀಗಿತ್ತು: ಹುಬ್ಬಳ್ಳಿಯ ಅಂಚೆ ಕಛೇರಿಯು ರಾತ್ರಿ ವೇಳೆಯ ಅಂಚೆ ಕಛೇರಿಯಾಗಿ ಕೆಲಸ ಮಾಡುತ್ತಿದೆ. ಹಾಗೂ ಜಿಲ್ಲೆಯಲ್ಲಿರುವ ಏಕಮಾತ್ರ ಅಂಚೆ ಚೀಟಿಗಳ ಸಂಗ್ರಹಣೆಯ ಜಾಗ (ಫಿಲಾಟೆಲಿಕ್ಸ್ ಕೌಂಟರ್) ಇದೇ ಕಛೇರಿಯಲ್ಲಿದೆ. ತ್ವರಿತವಾಗಿ ಅಂಚೆ ರವಾನಿಸುವ ಜಾಗಗಳು (ಸ್ಪೀಡ್ ಪೋಸ್ಟ್ ಕೌಂಟರ್‌ಗಳು) ಧಾರವಾಡ, ಹುಬ್ಬಳ್ಳಿ, ಗದಗ ಮತ್ತು ರಾಣೆಬೆನ್ನೂರು ಕೇಂದ್ರ ಕಛೇರಿಗಳಲ್ಲಿ ಕೆಲಸ ಮಾಡುತ್ತಿವೆ. ಅಲ್ಲದೆ ಇಲ್ಲಿ ನಮೂದಿಸಿದ ಸ್ಥಳಗಳಲ್ಲಿ ತ್ವರಿತವಾಗಿ ಅಂಚೆ ರವಾನಿಸುವ ವಿಸ್ತರಣಾ ಕೌಂಟರುಗಳಿವೆ. (ಸ್ಪೀಡ್ ಪೋಸ್ಟ್ ಎಕ್ಸ್‌ಟೆನ್‌ಷನ್ ಕೌಂಟರುಗಳು). 1. ಧಾರವಾಡ, ಮಾರುಕಟ್ಟೆ, 2. ಧಾರವಾಡ, ಕರ್ನಾಟಕ ವಿಶ್ವವಿದ್ಯಾನಿಲಯ, 3. ಧಾರವಾಡ, ರೈಲ್ವೆ ಸ್ಟೇಷನ್, 4. ಧಾರವಾಡ, ವಿದ್ಯಾಗಿರಿ, 5. ಹುಬ್ಬಳ್ಳಿನಗರ, 5. ಹುಬ್ಬಳ್ಳಿ, ಟ್ರಾಫಿಕ್ ಐಲಾಂಡ್, 6. ಹುಬ್ಬಳ್ಳಿ, ವಿದ್ಯಾನಗರ 7. ಹುಬ್ಬಳ್ಳಿ, ಉದ್ಯಮನಗರ, 8. ಹುಬ್ಬಳ್ಳಿ, ಆರ್ ಎಮ್ ಎಸ್ ಹಾಗೂ 9. ಗದಗ ರೈಲ್ವೆ ಸ್ಟೇಷನ್. ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಒದಗಿಸಿರುವ ತ್ವರಿತ ಅಂಚೆ ಬಟವಾಡೆ ಸೇವೆ (ಪಾಯಿಂಟ್ ಟು ಪಾಯಿಂಟ್ ಸ್ಪೀಡ್ ಪೋಸ್ಟ್) ಈ ನಗರಗಳ ಮಧ್ಯೆ ನಡೆಯುತ್ತಿದೆ. 1. ಹುಬ್ಬಳ್ಳಿ-ಬೆಳಗಾವಿ 2. ಧಾರವಾಡ-ಬೆಳಗಾವಿ 3. ಹುಬ್ಬಳ್ಳಿ-ಗುಲ್ಬರ್ಗಾ 4. ಧಾರವಾಡ-ಗುಲ್ಬರ್ಗಾ, 5. ಬಿಜಾಪುರ-ಹುಬ್ಬಳ್ಳಿ 6. ಗದಗ-ಬೆಂಗಳೂರು 7. ಹುಬ್ಬಳ್ಳಿ-ಧಾರವಾಡ ಅಲ್ಲಿಂದ ಕಾರವಾರಕ್ಕೆ.

ಧಾರವಾಡ ಜಿಲ್ಲೆಯ ಪ್ರತೀ ತಾಲ್ಲೂಕಿನಲ್ಲಿದ್ದ ಒಟ್ಟು ಅಂಚೆ ಪೆಟ್ಟಿಗೆಗಳ ಸಂಖ್ಯೆ ಈ ರೀತಿ ಇತ್ತು. (31.3.1994 ರ ಅಂತ್ಯಕ್ಕೆ): 1. ಧಾರವಾಡ 242; 2. ಹುಬ್ಬಳ್ಳಿ 225; 3. ಕಲಘಟಗಿ 90; 4. ಕುಂದಗೋಳ 75; 5. ಸವಣೂರು 67; 6. ಶಿಗ್ಗಾಂವಿ 121; 7. ಬ್ಯಾಡಗಿ 95; 8. ಹಾವೇರಿ 137; 9. ಹಾನಗಲ್ಲು 148; 10. ಹಿರೇಕೆರೂರು 157; 11. ರಾಣೆಬೆನ್ನೂರು 155; 12. ಗದಗ 142; 13. ಮುಂಡರಗಿ 64; 14. ನರಗುಂದ; 15. ನವಲಗುಂದ 89; 16. ಶಿರಹಟ್ಟಿ 118; ಹಾಗೂ 17. ರೋಣ 147.

**ಜಿಲ್ಲೆಯುಲ್ಲಿ ಅಂಚೆ ಕಛೇರಿಗಳು ನಿರ್ವಹಿಸಿದ ಟಪ್ಪಾಲಿನ ವಿವರಗಳು.**

| | 1992-93 | 1993-94 |
|---|---|---|
| ರಿಜಿಸ್ಟರ್ ಮಾಡಿರದ ವಸ್ತುಗಳು | 6,68,71,799 | 1,87,58,122 |
| ವಿಮಾ ರಿಜಿಸ್ಟರ್ ಮಾಡಿದ ವಸ್ತುಗಳು | 12,10,022 | 11,87,304 |

| | 1992-93 | 1993-94 |
|---|---|---|
| ರಿಜಿಸ್ಟರ್ ಮಾಡಿದ ಭಾಂಗಿಗಳು | 75,870 | 23,682 |
| ಮನಿಯಾರ್ಡರ್‌ಗಳು, ಹೆಚ್ಚು ಬೆಲೆಯ ಮನಿಯಾರ್ಡರ್‌ಗಳು ಸೇರಿದಂತೆ | 7,81,495 | 4,70,317 |

ಅತ್ಯುತ್ತಮ ಅಂಚೆ ಸೇವೆಗಳಿಂದು ಪ್ರಶಸ್ತಿ ಪಡೆದವರ ಹೆಸರುಗಳು ಈ ರೀತಿ ಇದೆ. 1991-92 ರಲ್ಲಿ ಎನ್.ಕೆ. ನೆಗಳೂರು, ಕೆ.ಎಂ. ಪಿಂಜಾರ, ಹೆಚ್.ಸಿ. ಪಾಟೀಲ, ಎಮ್.ಹೆಚ್. ಬಿದರಿಕಟ್ಟಿ, ಕೆ.ಬಿ. ದೇಸಾಯಿ, ಜೆ.ಎಮ್. ಕುಪ್ಪೆಲೂರ; 1992-93 ರಲ್ಲಿ ಎಸ್.ಕೆ. ಕುಲಕರ್ಣಿ, ಎಮ್.ವೈ. ಖಾವಗಲ್, ವಿ.ಹೆಚ್. ಹೆಬ್ಬಳ್ಳಿ, ಬಿ.ಆರ್. ಕಲ್ಲೂರ್, ಆರ್.ಎಂ. ಜೋಷಿ, ಜಿ.ಎಂ. ಮಗಜಿಕೊಂಡ, ಬಿ.ಎ. ಮೆಣಸಿನಕಾಯಿ, ಬಿ.ಬಿ. ಅಣ್ಣಿಗೇರಿಶೆಟ್ಟರ್, ಎಂ.ಎನ್. ಶಿರಹಟ್ಟಿ, ಎಸ್.ಟಿ. ಹರಿಜನ; 1993-94 ರಲ್ಲಿ ಎಂ.ಎಫ್. ಮಡಿವಾಳರ, ಎಸ್.ಬಿ. ಅಸುಂಡಿ, ಎನ್.ಜಿ. ಜಮ್ಮಾಳ, ಜಿ.ಎನ್. ಶಿವಳ್ಳಿ, ಜಿ.ವೈ. ಕರಿಕಟ್ಟಿ, ಎಸ್.ಆರ್. ಕುಲಕರ್ಣಿ ಮತ್ತು ಸಿ.ಹೆಚ್. ದೊಡ್ಡಮನಿ.

**ಕೋಷ್ಟಕ 7.10 ತಾಲೂಕುವಾರು ಅಂಚೆ ಕಛೇರಿಗಳ ವಿವರಗಳು.**

| ತಾಲೂಕು | 1953 ಉಪಅಂಚೆ ಕಛೇರಿ | 1953 ಅಂಚೆ ಶಾಖೆಗಳು | 1969-70 ಒಟ್ಟು ಅಂಚೆ ಕಛೇರಿಗಳು | 74-75 | 86-87 | 88-89 | 91-92 | 93-94 |
|---|---|---|---|---|---|---|---|---|
| | | | | ಒಟ್ಟು ಅಂಚೆ ಕಛೇರಿಗಳು | | | | |
| ಬ್ಯಾಡಗಿ | 1 | 4 | 25 | 27 | 21 | 21 | 22 | 23 |
| ಧಾರವಾಡ | 4 | 15 | 55 | 62 | 60 | 61 | 65 | 68 |
| ಗದಗ | 3 | 16 | 37 | 40 | 44 | 44 | 45 | 45 |
| ಹಾನಗಲ್ | 2 | 5 | 46 | 49 | 43 | 43 | 45 | 45 |
| ಹಾವೇರಿ | 1 | 14 | 38 | 39 | 37 | 38 | 39 | 39 |
| ಹಿರೇಕೆರೂರು | 1 | 8 | 21 | 25 | 43 | 48 | 48 | 47 |
| ಹುಬ್ಬಳ್ಳಿ | 5 | 14 | 33 | 42 | 53 | 54 | 50 | 50 |
| ಕಲಘಟಗಿ | 1 | 1 | 15 | 20 | 28 | 28 | 30 | 30 |
| ಕುಂದಗೋಳ | 2 | 6 | 18 | 20 | 27 | 27 | 27 | 27 |
| ಮುಂಡರಗಿ | 1 | 6 | 20 | 20 | 26 | 26 | 26 | 26 |
| ನರಗುಂದ | 1 | 2 | 12 | 18 | 13 | 13 | 13 | 13 |
| ನವಲಗುಂದ | 2 | 9 | 22 | 23 | 35 | 36 | 36 | 37 |
| ರಾಣೆಬೆನ್ನೂರು | 1 | 10 | 35 | 38 | 52 | 48 | 48 | 48 |
| ರೋಣ | 3 | 17 | 48 | 51 | 52 | 52 | 52 | 52 |
| ಶಿಗ್ಗಾಂವಿ | 2 | 8 | 23 | 26 | 28 | 28 | 28 | 28 |
| ಶಿರಹಟ್ಟಿ | 2 | 7 | 27 | 32 | 34 | 34 | 34 | 34 |
| ಸವಣೂರು | - | - | 14 | 18 | 26 | 27 | 28 | 29 |
| | 32 | 142 | 489 | 550 | 622 | 648 | 636 | 641 |

**ದಿನಾಂಕ 31.3.1994 ರಂದು ಜಿಲ್ಲೆಯಲ್ಲಿದ್ದ ವಿವಿಧ ವರ್ಗಗಳ ಅಂಚೆ ಕಛೇರಿಗಳು.**

| | ಮುಖ್ಯ ಅಂಚೆ ಕಛೇರಿ | ಉಪ ಅಂಚೆ ಕಛೇರಿಗಳು | ಇತರೇ ಉಪ ಅಂಚೆ ಕಛೇರಿಗಳು | ಶಾಖಾ ಕಛೇರಿಗಳು |
|---|---|---|---|---|
| ಧಾರವಾಡ | 2 | 62 | 2 | 167 |
| ಗದಗ | 2 | 31 | 26 | 144 |
| ಹಾವೇರಿ | 2 | 27 | 14 | 165 |

**ದೂರವಾಣಿ ಸೇವೆ:** ಅವಳಿ ನಗರಗಳಲ್ಲಿ ದೂರವಾಣಿ ಬಳಕೆ ಪ್ರಾರಂಭವಾಗಿದ್ದು 1936 ರಲ್ಲಿ, ದಿನಾಂಕ 31.3.1936 ರಂದು 50 ಜೋಡಣೆಗಳ (ಕನೆಕ್ಷನ್) ಸಾಮರ್ಥ್ಯದ ದೂರವಾಣಿ ವಿನಿಮಯ ಕೇಂದ್ರವನ್ನು ಧಾರವಾಡದಲ್ಲಿ ಸ್ಥಾಪನೆ ಮಾಡಲಾಯಿತು. ಆ ಸಮಯದಲ್ಲಿ 30 ಜೋಡಣೆಗಳು ಕೆಲಸ ಮಾಡುತ್ತಿದ್ದವು. 1949 ರಲ್ಲಿ ಇದರ ಸಾಮರ್ಥ್ಯವನ್ನು 100 ಜೋಡಣೆಗಳಿಗೆ ಹೆಚ್ಚಿಸಿದಾಗ 38 ಜೋಡಣೆಗಳು ಮಾತ್ರ ಕೆಲಸ ಮಾಡುತ್ತಿದ್ದವು. ಜಿಲ್ಲೆಯಲ್ಲಿ ಒಟ್ಟು ಆರು ದೂರವಾಣಿ ವಿನಿಮಯ ಕೇಂದ್ರಗಳು 1953 ರಲ್ಲಿ ಕೆಲಸ ಮಾಡುತ್ತಿದ್ದವು. ಅವೆಂದರೆ (1) ಹುಬ್ಬಳ್ಳಿ, (2) ಧಾರವಾಡ, (3) ಗದಗ, (4) ಹುಬ್ಬಳ್ಳಿಯ ಸ್ಥಳೀಯ ಕರೆಯ ಕಛೇರಿ, (4) ಹುಬ್ಬಳ್ಳಿಯ ಸ್ಥಳೀಯ ಕರೆಯ ಕಛೇರಿ (5) ಧಾರವಾಡ ಸ್ಥಳೀಯ ಕರೆಯ ಕಛೇರಿ ಹಾಗೂ (6) ಹಾವೇರಿ ಸ್ಥಳೀಯ ಕರೆಯ ಕಛೇರಿ. ಇವುಗಳಲ್ಲಿ ಹುಬ್ಬಳ್ಳಿ, ಧಾರವಾಡ ಮತ್ತು ಗದಗ ವಿನಿಮಯ ಕೇಂದ್ರಗಳು ಹಳೇಯ ಪದ್ಧತಿಯಂತೆ (ಸ್ವಿಚ್ ಬೋರ್ಡ್) ಬ್ಯಾಟರಿ ಚಾಲಿತವಾಗಿ ನಿರ್ವಹಿಸಲ್ಪಡುತ್ತಿತ್ತು. ಇದೇ ಸಮಯದಲ್ಲಿ (1953) ಹುಬ್ಬಳ್ಳಿ ವಿನಿಮಯ ಕೇಂದ್ರದ ಸಾಮರ್ಥ್ಯ 150 ಜೋಡಣೆಗಳಾಗಿದ್ದವು; ಕೆಲಸ ಮಾಡುತ್ತಿದ್ದ ಜೋಡಣೆಗಳು 86 ಹಾಗೂ ವಿಸ್ತರಣೆಗಳು 18 ಇದ್ದವು. ಧಾರವಾಡ ಕೇಂದ್ರದ ಸಾಮರ್ಥ್ಯ 100 ಲೈನ್‌ಗಳಾಗಿದ್ದು, 86 ಕೆಲಸ ಮಾಡುವ ಜೋಡಣೆಗಳಿದ್ದವು; ಅಲ್ಲದೆ 18 ವಿಸ್ತರಣೆಗಳಿದ್ದವು. 60 ಲೈನ್‌ಗಳ ಸಾಮರ್ಥ್ಯದ ಗದಗಿನ ವಿನಿಮಯ ಕೇಂದ್ರದಲ್ಲಿ 55 ಕೆಲಸ ಮಾಡುವ ಜೋಡಣೆಗಳಿದ್ದವು (ಕನೆಕ್ಷನ್ಸ್). ಇದರಲ್ಲಿ 11 ವಿಸ್ತರಣೆಗಳಿದ್ದವು.

1960 ರ ನಂತರ 400 ಜೋಡಣೆಗಳ ಸಾಮರ್ಥ್ಯದ ಸ್ವಯಂ ಚಾಲಿತ ಕೇಂದ್ರವು ಧಾರವಾಡದಲ್ಲಿ ಸ್ಥಾಪನೆಯಾಯಿತು. ಲೋಕಲ್ ಕಾಲ್ ವ್ಯವಸ್ಥೆಯು 1966 ರ ಸುಮಾರಿಗೆ ಹುಬ್ಬಳ್ಳಿ ಮತ್ತು ಧಾರವಾಡಗಳ ನಡುವೆ ಜಾರಿಗೆ ಬಂದಿತು. ನಂತರ ಧಾರವಾಡವನ್ನು ಹುಬ್ಬಳ್ಳಿಯ ವಿನಿಮಯ ಕೇಂದ್ರದ ಉಪ ಕೇಂದ್ರವನ್ನಾಗಿ ಮಾಡಲಾಯಿತು. ಅವಳಿ ನಗರಗಳನ್ನು 1980 ರಲ್ಲಿ ದೇಶದ ಎಸ್.ಟಿ.ಡಿ. ಜಾಲಕ್ಕೆ ಒಳಪಡಿಸಿರುವುದರಿಂದ ಅನೇಕ ಪ್ರಮುಖ ನಗರಗಳಿಗೆ ಎಸ್.ಟಿ.ಡಿ. ಸೌಲಭ್ಯವಿದೆ.

**ಕೋಷ್ಟಕ 7.11: ದೂರವಾಣಿ ವಿನಿಮಯ ಕೇಂದ್ರಗಳು ಹಾಗೂ ತಾಲೂಕುವಾರು ದೂರವಾಣಿಗಳ ಸಂಖ್ಯೆ**

| ಕ್ರ. ಸಂ. | ತಾಲೂಕು | ದೂರವಾಣಿ ವಿನಿಮಯ ಕೇಂದ್ರಗಳು | | ದೂರವಾಣಿಗಳು | | | | | |
|---|---|---|---|---|---|---|---|---|---|
| | | 86-87 | 90-91 | 69-70 | 71-72 | 86-87 | 88-89 | 89-90 | 90-91 |
| 1 | ಬ್ಯಾಡಗಿ | 2 | 1 | 85 | 86 | 167 | 204 | 227 | 248 |
| 2 | ಧಾರವಾಡ | 5 | 7 | 613 | 693 | 2,576 | 3,690 | 3,574 | 3,624 |
| 3 | ಗದಗ | 7 | 9 | 505 | 539 | 1,500 | 1,709 | 1,885 | 1,985 |
| 4 | ಹಾನಗಲ್ | 6 | 6 | 106 | 101 | 214 | 215 | 223 | 223 |
| 5 | ಹಾವೇರಿ | 4 | 11 | 169 | 197 | 446 | 561 | 822 | 972 |
| 6 | ಹಿರೇಕೆರೂರು | 4 | 6 | 42 | 56 | 158 | 168 | 304 | 309 |
| 7 | ಹುಬ್ಬಳ್ಳಿ | 1 | 12 | 2,266 | 2,250 | 7,547 | 8,510 | 7,624 | 10,624 |
| 8 | ಕಲಘಟಗಿ | 7 | 2 | 27 | 27 | 70 | 92 | 108 | 108 |

| ಕ್ರ. ಸಂ. | ತಾಲೂಕು | ದೂರವಾಣಿ ವಿನಿಮಯ ಕೇಂದ್ರಗಳು | | ದೂರವಾಣಿಗಳು | | | | | |
|---|---|---|---|---|---|---|---|---|---|
| | | 86-87 | 90-91 | 69-70 | 71-72 | 86-87 | 88-89 | 89-90 | 90-91 |
| 9 | ಕುಂದಗೋಳ | 4 | 4 | 45 | 44 | 139 | 161 | 158 | 158 |
| 10 | ಮುಂಡರಗಿ | 2 | 8 | 26 | 26 | 73 | 83 | 155 | 255 |
| 11 | ನರಗುಂದ | 4 | 4 | 59 | 60 | 207 | 213 | 241 | 261 |
| 12 | ನವಲಗುಂದ | 8 | 9 | 49 | 58 | 256 | 265 | 279 | 280 |
| 13 | ರಾಣೆಬೆನ್ನೂರು | 10 | 14 | 178 | 188 | 793 | 881 | 1,183 | 1,283 |
| 14 | ರೋಣ | 8 | 13 | 139 | 139 | 278 | 262 | 441 | 445 |
| 15 | ಸವಣೂರು | 1 | 1 | 53 | 53 | 94 | 99 | 118 | 126 |
| 16 | ಶಿಗ್ಗಾಂವಿ | 4 | 4 | 33 | 32 | 117 | 133 | 164 | 164 |
| 17 | ಶಿರಹಟ್ಟಿ | 5 | 5 | 63 | 60 | 168 | 192 | 242 | |
| | | 82 | 116 | 4,454 | 4,609 | 14,823 | 17,438 | 17,748 | 21,307 |

ಇತ್ತೀಚಿನ ವರ್ಷಗಳಲ್ಲಿ ದೂರವಾಣಿ ಸಂಪರ್ಕದಲ್ಲಿ ವಿಸ್ತರಣೆಯಾಗಿ ದಿನಾಂಕ 31.3.1994 ರ ಅಂತ್ಯಕ್ಕೆ ಜಿಲ್ಲೆಯಲ್ಲಿ ಒಟ್ಟು 124 ದೂರವಾಣಿ ವಿನಿಮಯ ಕೇಂದ್ರಗಳು ಹಾಗೂ 30,335 ದೂರವಾಣಿ ಸಂಪರ್ಕಗಳು ಇದ್ದವು.

**ತಂತೀ ಸೇವೆ:** ಮುಖ್ಯ ಪಟ್ಟಣಗಳಾಗಿದ್ದ ಹುಬ್ಬಳ್ಳಿ, ಧಾರವಾಡ ಮತ್ತು ಗದಗಗಳಲ್ಲಿ 1884 ರ ಸಮಯದಲ್ಲೇ ಟೆಲಿಗ್ರಾಫ್ (ತಂತೀ) ಕಛೇರಿಗಳು ಕೆಲಸ ಮಾಡುತ್ತಿದ್ದವು. ತಂತಿ ಕಛೇರಿಗಳ ಆಡಳಿತಕ್ಕೆ ಯಾವುದೇ ಪ್ರತ್ಯೇಕ ವ್ಯವಸ್ಥೆಯಿರಲಿಲ್ಲ. ಅವುಗಳು ಅಂಚೆ ಕಛೇರಿಗಳ ಒಂದು ಭಾಗವಾಗಿದ್ದು ಸಂಯುಕ್ತ ಅಂಚೆ ಕಛೇರಿಗಳಾಗಿದ್ದವು. ಸುಮಾರು 1870 ರಿಂದ 1900 ರವರೆಗೆ ರಸ್ತೆ ಸಾರಿಗೆ ವ್ಯವಸ್ಥೆಯಲ್ಲಿ ಬಹಳ ಸುಧಾರಣೆಗಳುಂಟಾಗಿದ್ದಲ್ಲದೇ, ಮೀಟರ್‌ಗೇಜ್ ರೈಲ್ವೆ ಸೌಲಭ್ಯವು ಒದಗಿದ ನಂತರ ಜಿಲ್ಲೆಯ ಆಂತರಿಕ ಹಾಗೂ ಹೊರಗಿನ ವ್ಯಾಪಾರ ವಹಿವಾಟುಗಳಲ್ಲಿ ಗಣನೀಯ ಪ್ರಗತಿಯುಂಟಾಯಿತು. ಇದರ ದೆಸೆಯಿಂದ ಜಿಲ್ಲೆಯ ಅನೇಕ ಸ್ಥಳಗಳಲ್ಲಿ ತಂತಿ ಕಛೇರಿಗಳನ್ನು ಸ್ಥಾಪಿಸಲಾಯಿತು. 1953 ರಲ್ಲಿ ಧಾರವಾಡ ಜಿಲ್ಲೆಯಲ್ಲಿ 28 ತಂತಿ ಕಛೇರಿಗಳಿದ್ದವು. ಇವು ಸಂಯುಕ್ತ ಅಂಚೆ ಕಛೇರಿಗಳಾಗಿದ್ದವು. ಇದರ ವಿವರಗಳು ಇಂತಿದೆ.

**ತಾಲೂಕುವಾರು ಪಟ್ಟಿ**

1. ಬ್ಯಾಡಗಿ ಪೇಟಾ:ಬ್ಯಾಡಗಿ; 2. ಧಾರವಾಡ ತಾಲೂಕು: ಧಾರವಾಡ ಹೆಡ್ ಆಫೀಸು, ಧಾರವಾಡ ಪಟ್ಟಣ, ಧಾರವಾಡ ರೈಲ್ವೆ ನಿಲ್ದಾಣ ಮತ್ತು ಅಳ್ನಾವರ; 3. ಗದಗ ತಾ: ಗದಗ ನಗರ, ಗದಗ-ಬೆಟಗೇರಿ ಮತ್ತು ಗದಗ (ಮೂರು); 4. ಹಾನಗಲ್ ತಾ: ಹಾನಗಲ್ ಮತ್ತು ಅಕ್ಕಿ ಆಲೂರು; 5. ಹಾವೇರಿ ತಾ: ಹಾವೇರಿ; 6. ಹಿರೇಕೆರೂರು ತಾ: ಹಿರೇಕೆರೂರು; 7. ಹುಬ್ಬಳ್ಳಿ ತಾ: ಹುಬ್ಬಳ್ಳಿ ನಗರ ಮತ್ತು ಹುಬ್ಬಳ್ಳಿ (ಎರಡು); 8. ಕಲಘಟಗಿ ತಾ: ಕಲಘಟಗಿ; 9. ಕುಂದಗೋಳ ಪೇಟಾ: ಕುಂದಗೋಳ ಮತ್ತು ಗುಡಗೇರಿ; 10. ಮುಂಡರಗಿ ಪೇಟಾ: ಮುಂಡರಗಿ; 11. ನರಗುಂದ ಪೇಟಾ: ನರಗುಂದ; 12. ನವಲಗುಂದ ತಾ: ನವಲಗುಂದ ಮತ್ತು ಅಣ್ಣಿಗೇರಿ; 13. ರಾಣೆಬೆನ್ನೂರು ತಾ: ರಾಣೆಬೆನ್ನೂರು; 14. ರೋಣ ತಾ: ರೋಣ ಮತ್ತು ಹೊಳೆ ಆಲೂರು; 15. ಶಿಗ್ಗಾಂವಿ ತಾಲೂಕು: ಶಿಗ್ಗಾಂವಿ ಮತ್ತು ಸವಣೂರು; 16. ಶಿರಹಟ್ಟಿ ತಾ: ಶಿರಹಟ್ಟಿ ಮತ್ತು ಲಕ್ಷ್ಮೇಶ್ವರ.

**ಕೋಷ್ಟಕ 7.12: ವಿವಿಧ ತಾಲೂಕುಗಳಲ್ಲಿರುವ ತಂತೀ ಕಛೇರಿಗಳ ಅಂಕಿ ಸಂಖ್ಯೆಗಳು**

| | 1986-87 | 1987-88 | 1988-89 | 1991-92 | 1992-93 |
|---|---|---|---|---|---|
| ಬ್ಯಾಡಗಿ | 7 | 7 | 7 | 9 | 11 |
| ಧಾರವಾಡ | 34 | 34 | 34 | 33 | 36 |
| ಗದಗ | 28 | 28 | 28 | 27 | 27 |
| ಹಾನಗಲ್ | 22 | 22 | 22 | 23 | 24 |
| ಹಾವೇರಿ | 23 | 23 | 23 | 26 | 28 |
| ಹಿರೇಕೆರೂರು | 13 | 13 | 15 | 20 | 23 |
| ಹುಬ್ಬಳ್ಳಿ | 48 | 48 | 48 | 40 | 44 |
| ಕಲಘಟಗಿ | 12 | 12 | 14 | 13 | 14 |
| ಕುಂದಗೋಳ | 11 | 11 | 11 | 16 | 16 |
| ಮುಂಡರಗಿ | 8 | 8 | 8 | 10 | 10 |
| ನರಗುಂದ | 8 | 8 | 7 | 7 | 7 |
| ನವಲಗುಂದ | 14 | 14 | 15 | 15 | 15 |
| ರಾಣೆಬೆನ್ನೂರು | 23 | 23 | 26 | 27 | 28 |
| ರೋಣ | 27 | 27 | 27 | 30 | 38 |
| ಸವಣೂರು | 7 | 7 | 7 | 7 | 7 |
| ಶಿಗ್ಗಾಂವಿ | 7 | 7 | 7 | 13 | 13 |
| ಶಿರಹಟ್ಟಿ | 18 | 18 | 19 | 19 | 23 |
| | 310 | 310 | 318 | 335 | 364 |

**ದೂರದರ್ಶನ**

ಜಿಲ್ಲೆಯ ಪ್ರಥಮ ದೂರದರ್ಶನ ಮರು ಪ್ರಸಾರ ಕೇಂದ್ರವನ್ನು ದಿನಾಂಕ 10.9.1984ರಂದು ಗದಗಿನಲ್ಲಿ ಪ್ರಾರಂಭಿಸಲಾಯಿತು. ಇಲ್ಲಿನ ಟ್ರಾನ್ಸ್‌ಮಿಟರ್ 100 ವಾಟ್ಸ್ ಶಕ್ತಿಯುಳ್ಳದ್ದಾಗಿತ್ತು. ಮತ್ತೊಂದು 100 ವಾಟ್ಸ್ ಶಕ್ತಿಯ ಟ್ರಾನ್ಸ್‌ಮೀಟರ್‌ನ್ನು ಧಾರವಾಡ ನಗರದಲ್ಲಿ ದಿನಾಂಕ 28.9.1984 ರಂದು ಪ್ರಾರಂಭಿಸಲಾಯಿತು. ಈ ರಿಲೇ ಕೇಂದ್ರಗಳನ್ನು ಬೆಂಗಳೂರು ಮುಖ್ಯ ಕೇಂದ್ರದೊಂದಿಗೆ ಸಂಪರ್ಕ ಕಲ್ಪಿಸಿದ್ದು 1990ರಲ್ಲಿ. ಧಾರವಾಡ ಮತ್ತು ಗದಗಿನ ರಿಲೇ ಕೇಂದ್ರಗಳು ಬೆಂಗಳೂರು ಮುಖ್ಯ ಕೇಂದ್ರದ ಕಾರ್ಯಕ್ರಮಗಳನ್ನು ಮರು ಪ್ರಸಾರ ಮಾಡುತ್ತಿವೆ. ಗದಗಿನ ಮರು ಪ್ರಸಾರ ಕೇಂದ್ರ ಸುತ್ತ ಮುತ್ತಲಿನ ಪಟ್ಟಣ ಹಾಗೂ ಗ್ರಾಮಾಂತರ ಪ್ರದೇಶಗಳ ಸುಮಾರು 4.4 ಲಕ್ಷ ಮಂದಿ ಈ ಕೇಂದ್ರದ ವ್ಯಾಪ್ತಿಗೆ ಬರುತ್ತಾರೆ. ಧಾರವಾಡದಲ್ಲಿ ಈಗ 10 ಕಿ.ವಾ. ಶಕ್ತಿಯ ಟ್ರಾನ್ಸ್‌ಮೀಟರ್‌ನ್ನು ಸ್ಥಾಪಿಸಿದ್ದು ಇತ್ತೀಚೆಗೆ ಅದು ಕಾರ್ಯಾರಂಭ ಮಾಡಿದೆ. ಇಂತಹ ಅಧಿಕ ಶಕ್ತಿಯ ಮರುಪ್ರಸಾರ ಕೇಂದ್ರದ ಸ್ಥಾಪನೆಗೆ ಬಹಳ ದಿನಗಳಿಂದ ಒತ್ತಾಯಿಸುತ್ತಿದ್ದ ಈ ಭಾಗದ ಜನರ ಬೇಡಿಕೆ ಈಡೇರಿರುವುದಲ್ಲದೆ, ಸುಮಾರು 70 ಕಿ.ಮೀ. ಪರಿಧಿಯೊಳಗಿನ ಜನರಿಗೆ ದೂರದರ್ಶನ ಕಾರ್ಯಕ್ರಮಗಳನ್ನು ವೀಕ್ಷಿಸಲು ಸಾಧ್ಯವಾಗುವುದು. ಧಾರವಾಡ ಜಿಲ್ಲೆಯ ಬಹುಪಾಲು ಪ್ರದೇಶ, ಪಕ್ಕದ ಬೆಳಗಾವಿ, ಉತ್ತರ ಕನ್ನಡ ಹಾಗೂ ಬಿಜಾಪುರಗಳ ಅನೇಕ ಪ್ರದೇಶಗಳು ಇದರ ವ್ಯಾಪ್ತಿಗೆ ಬರುತ್ತವೆ. ಧಾರವಾಡ ಜಿಲ್ಲೆಯ ಸುಮಾರು 19.13 ಲಕ್ಷ ಜನರು

ಬೆಳಗಾವಿ ಜಿಲ್ಲೆಯಲ್ಲಿ 15.9 ಲಕ್ಷ ಜನರು, ಉತ್ತರ ಕನ್ನಡ ಜಿಲ್ಲೆಯ 4.8 ಲಕ್ಷ ಮತ್ತು ಬಿಜಾಪುರ ಜಿಲ್ಲೆಯ 27,000 ಮಂದಿ ಧಾರವಾಡದ ಮರು ಪ್ರಸಾರ ಕೇಂದ್ರದ ವ್ಯಾಪ್ತಿಗೆ ಬರುತ್ತಾರೆ.

**ಆಕಾಶವಾಣಿ ಕೇಂದ್ರ, ಧಾರವಾಡ:** ಉತ್ತರ ಕರ್ನಾಟಕದಲ್ಲಿಯೇ ಮೊದಲ ಆಕಾಶವಾಣಿ ಕೇಂದ್ರವನ್ನು ಧಾರವಾಡದಲ್ಲಿ 1950 ನೇ ಜನವರಿ 8 ನೇ ತಾರೀಕು ಪ್ರಾರಂಭಿಸಲಾಯಿತು. ಈ ಕೇಂದ್ರದ ಸ್ಥಾಪನೆ, ಉತ್ತರ ಕರ್ನಾಟಕದ ಸಾಂಸ್ಕೃತಿಕ ರಂಗಕ್ಕೆ ಮಹತ್ತರವಾದ ಕೊಡುಗೆಯಾಯಿತು. ಮುಂಬೈ ಕರ್ನಾಟಕದ ಧಾರವಾಡ, ಬೆಳಗಾವಿ, ಉತ್ತರ ಕನ್ನಡ ಹಾಗೂ ಬಿಜಾಪುರ ಜಿಲ್ಲೆಗಳು ಈ ಕಾರ್ಯಕ್ರಮಗಳಿಂದ ಪ್ರಯೋಜನ ಪಡೆಯುತ್ತಿದ್ದವು. ಅಲ್ಲಿನ ಗಣ್ಯ ಕಲಾವಿದರಿಗೂ ಹೆಚ್ಚಿನ ಪ್ರೋತ್ಸಾಹ ದೊರಕುವಂತಾಯಿತು. ಈ ಪ್ರಸಾರ ಕೇಂದ್ರದ ಸಾಮರ್ಥ್ಯ ಒಂದು ಕಿಲೋವಾಟ್ ಶಕ್ತಿಯದಾಗಿತ್ತು. ಆಕಾಶವಾಣಿ ಕೇಂದ್ರದಿಂದ ಸುಮಾರು 3 ಕಿ.ಮೀ. ದೂರದಲ್ಲಿ ಒಂದು ರಿಸಿವಿಂಗ್ ಕೇಂದ್ರವನ್ನು ಸ್ಥಾಪಿಸಲಾಯಿತು. ದೆಹಲಿ ಹಾಗೂ ಇತರ ಕೇಂದ್ರಗಳ ವಾರ್ತೆ ಮತ್ತಿತರ ಕಾರ್ಯಕ್ರಮಗಳನ್ನು ಪುನರ್ ಪ್ರಸಾರ ಮಾಡುವುದು ಇದರ ಮುಖ್ಯ ಉದ್ದೇಶವಾಗಿತ್ತು. ಮೊದಲಿಗೆ ಪ್ರಸಾರ ಬೆಳಿಗ್ಗೆ 7.45 ರಿಂದ 8.45 ರವರೆಗೆ ಹಾಗೂ ಸಂಜೆ 6 ರಿಂದ 10 ರವರೆಗೆ ನಡೆಯುತ್ತಿತ್ತು. ಈ ಕಾರ್ಯಕ್ರಮಗಳಲ್ಲಿ ಕರ್ನಾಟಕ ಹಾಗೂ ಹಿಂದೂಸ್ಥಾನೀ ಶಾಸ್ತ್ರೀಯ ಸಂಗೀತ, ಲಘುಸಂಗೀತ, ಲಘು ಮನರಂಜನೆ ಇತ್ಯಾದಿಗಳು ಒಳಗೊಂಡಿದ್ದವು. ಉತ್ತರ ಕರ್ನಾಟಕದ 60 ಜನ ನಾಟಕ ರಚನಾಕಾರರು ಮತ್ತು 200 ಮಂದಿಯ ಕಲಾವಿದರ ತಂಡಗಳು ಕಾರ್ಯಕ್ರಮಗಳನ್ನು ರೂಪಿಸಿ ಪ್ರಸಾರಕ್ಕೆ ಅಣಿಗೊಳಿಸುವುದರಲ್ಲಿ ನಿರತರಾಗಿದ್ದರು. ಅನೇಕ ಪ್ರತಿಭಾನ್ವಿತ ಕಲಾವಿದರು ಆಕಾಶವಾಣಿಯ ಮೂಲಕ ಬೆಳಕಿಗೆ ಬಂದು ಪ್ರಸಿದ್ಧಿಯನ್ನು ಪಡೆದರು. ದಿನಾಂಕ 18.10.1964 ರಿಂದ ಈ ಕೇಂದ್ರ ಹತ್ತು ಕಿಲೋವಾಟ ಶಕ್ತಿಯ ಪ್ರೇಷಕವನ್ನು ಪಡೆದು ಧಾರವಾಡ, ಬೆಳಗಾವಿ, ಬಿಜಾಪುರ, ಉತ್ತರ ಕನ್ನಡ ಮತ್ತು ಬಳ್ಳಾರಿ ಜಿಲ್ಲೆಗಳನ್ನು ಸಹ ತನ್ನ ವ್ಯಾಪ್ತಿಗೆ ಒಳಪಡಿಸಿತು. ವಾಣಿಜ್ಯ ವಿಭಾಗದ ಸೇವೆಯನ್ನು ಪ್ರಾರಂಭಿಸಿದ್ದು 1970 ರಲ್ಲಿ. ಹೊಸದಾಗಿ ನಿರ್ಮಿಸಿದ ಸ್ಟುಡಿಯೋ ಕಟ್ಟಡದಿಂದ ಕಾರ್ಯಕ್ರಮಗಳನ್ನು 14.4.1983 ರಿಂದ ಪ್ರಾರಂಭಿಸಲಾಯಿತು. ಧಾರವಾಡದ ಆಕಾಶವಾಣಿ ಕೇಂದ್ರಕ್ಕೆ 1981 ರಲ್ಲಿ ಒಂದು ಪ್ರದೇಶಿಕ ಸಮಾಚಾರ ಘಟಕವನ್ನು ಜೋಡಿಸಲಾಯಿತು. ಇದು ಪ್ರತಿ ನಿತ್ಯ ಬೆಳಗ್ಗೆ ಕನ್ನಡದಲ್ಲಿ ಪ್ರಾದೇಶಿಕ ಸಮಾಚಾರವನ್ನು ಬಿತ್ತರಿಸುತ್ತದೆ. ಖ್ಯಾತನಾಮರಾದ ಡಾ॥ ಡಿ.ಆರ್. ಬೇಂದ್ರೆ, ಡಾ॥ ಶಿವರಾಮ ಕಾರಂತ, ಡಾ॥ ಮುಗಳಿ, ಡಾ॥ ರಾಜಾರಾಮಣ್ಣ, ಡಾ॥ ವಿ.ಕೆ. ಗೋಕಾಕ ಮುಂತಾದವರ ಬಗ್ಗೆ ಕಾರ್ಯಕ್ರಮಗಳನ್ನು ಸಿದ್ಧಪಡಿಸಿ ಪ್ರಸಾರ ಮಾಡಲಾಗಿದೆ. ಹಾಗೂ ಪ್ರಖ್ಯಾತ ಸಂಗೀತ ವಿದ್ವಾಂಸರಾದ ಡಾ॥ ಮಲ್ಲಿಕಾರ್ಜುನ ಮನ್ಸೂರ್, ಪಂಡಿತ ಬಸವರಾಜ ರಾಜಗುರು ಮತ್ತು ಡಾ॥ ಗಂಗೂಬಾಯಿ ಹಾನಗಲ್ ರವರು ಈ ಕೇಂದ್ರಕ್ಕೆ ಅಪಾರ ಕೀರ್ತಿಯನ್ನು ತಂದಿರುತ್ತಾರೆ. ಸಂಗೀತ, ಜಾನಪದ, ನಾಟಕ ಮುಂತಾದ ಕ್ಷೇತ್ರಗಳಲ್ಲಿ ಅತ್ಯುತ್ತಮ ಕಾರ್ಯಕ್ರಮಗಳನ್ನು ನಿರ್ಮಿಸಿ ಪ್ರಸಾರ ಮಾಡಿದ್ದಕ್ಕಾಗಿ ಧಾರವಾಡ ಕೇಂದ್ರಕ್ಕೆ ಅನೇಕ ರಾಷ್ಟ್ರೀಯ ಪುರಸ್ಕಾರಗಳು ಲಭಿಸಿದೆ.

**ಪ್ರವಾಸೋದ್ಯಮ:** ಧಾರವಾಡ ಜಿಲ್ಲೆಯು ಉತ್ತರ ಕರ್ನಾಟಕದ ಆಯಕಟ್ಟಿನ ಸ್ಥಾನದಲ್ಲಿದ್ದು ಅನೇಕ ಐತಿಹಾಸಿಕ ಹಾಗೂ ಪುಣ್ಯಸ್ಥಳಗಳ ಬೀಡಾಗಿದೆ. ಇಲ್ಲಿನ ಕೆಲವೊಂದು ಮಠ ಮಂದಿರಗಳು ವರ್ಷದ ಎಲ್ಲಾ ದಿನಗಳಲ್ಲೂ ಅಪಾರ ಭಕ್ತ ಸಮೂಹವನ್ನು ಆಕರ್ಷಿಸುತ್ತದೆ. ಉಲ್ಲೇಖನೀಯ ದೇವಾಲಯಗಳು ಗದಗಿನ ವೀರನಾರಾಯಣ, ತ್ರಿಕೂಟೇಶ್ವರ, ಡಂಬಳದ ದೊಡ್ಡಬಸಪ್ಪ ದೇವಾಲಯ, ಗುಡ್ಡಗುಡ್ಡಾಪುರದ ಮೈಲಾರ ದೇವಾಲಯ, ಲಕ್ಕುಂಡಿಯ ಜೈನ ದೇವಾಲಯ, ಕಾಗಿನೆಲೆಯ ಆದಿಕೇಶವ, ಹಾನಗಲ್ಲಿನ ತಾರಕೇಶ್ವರ ಇತ್ಯಾದಿಗಳು. ಹಾಗೂ ಜಿಲ್ಲೆಯಲ್ಲಿ ಅನೇಕ ಸಂತರು ಬಾಳಿ ಬೆಳಗಿದ್ದಾರೆ. ಶಿರಹಟ್ಟಿ ಫಕೀರೇಶ್ವರರು, ಹುಬ್ಬಳ್ಳಿ ಸಿದ್ಧಾರೂಢರು, ಗುರುನಾಥರೂಢರು, ಅಗಡಿ ಶೇಷಾಚಲಸ್ವಾಮಿಗಳು, ಧಾರವಾಡದ ಮೃತ್ಯುಂಜಯಪ್ಪಗಳು, ಶಿಶುನಾಳ ಷರೀಫಸಾಹೇಬರು ಮುಂತಾದವರು. ಅವರ ಸಮಾಧಿ ತಾಣಗಳು ಭಕ್ತರ ಪಾಲಿಗೆ ಜಾಗೃತ ತಾಣಗಳಾಗಿವೆ. ಹಾಗೂ ಅನೇಕ ಮಠಗಳಲ್ಲಿ ಬರತಕ್ಕಂತಹ ಭಕ್ತಾದಿಗಳಿಗೆ ನಿತ್ಯದಾಸೋಹ ಹಾಗೂ ವಸತಿ ಸೌಲಭ್ಯವನ್ನು ಒದಗಿಸಿದೆ. ಅಲ್ಲದೆ ಶೈಕ್ಷಣಿಕ ರಂಗದಲ್ಲೂ ಕೆಲವು ಮಠಗಳು ಮುಂಚೂಣಿಯಲ್ಲಿದ್ದು ಶಾಲಾ ಕಾಲೇಜುಗಳ ಸ್ಥಾಪನೆಗೆ ಕಾರಣವಾಗಿರುವುದೇ ಅಲ್ಲದೆ ವಿದ್ಯಾರ್ಥಿಗಳಿಗೆ ಉಚಿತ ಊಟ ಮತ್ತು ವಸತಿ ಸೌಕರ್ಯವನ್ನು ಏರ್ಪಡಿಸಿದೆ.

1992 ನೇ ಸಾಲಿನಲ್ಲಿ ಸರ್ಕಾರವು ಪ್ರವಾಸೋದ್ಯಮದ ಸರ್ವತೋಮುಖ ಅಭಿವೃದ್ಧಿಗೆ ಯೋಜನೆಯೊಂದನ್ನು ರೂಪಿಸಿ ಕೆಲವೊಂದು ರಿಯಾಯಿತಿಗಳನ್ನು ಪ್ರಕಟಿಸಿದೆ. ಇದರಲ್ಲಿ ಖಾಸಗಿ ರಂಗಕ್ಕೆ ಮಹತ್ವದ ಸ್ಥಾನವನ್ನು ಕೊಟ್ಟು ಪರಿಣಾಮಕಾರಿಯಾಗಿ

ಬಳಸಿಕೊಳ್ಳಲು ಉದ್ದೇಶಿಸಲಾಗಿದೆ. ಅಲ್ಲದೆ ರಾಜ್ಯದ ಕರಕುಶಲತೆ, ಸಂಸ್ಕೃತಿ ಹಾಗೂ ಕಲಾ ಪರಂಪರೆಯನ್ನು ಪರಿಚಯಿಸುವುದು, ಜಿಲ್ಲೆಗಳಲ್ಲಿ ನಶಿಸುತ್ತಿರುವ ಜಾನಪದ ಕಲಾಸಂಪತ್ತನ್ನು ಉಳಿಸಿ ಬೆಳೆಸುವ ದೃಷ್ಟಿಯಿಂದ ರಾಜ್ಯಾದಂತ ಸಂಬಂಧಿಸಿದ ಜಿಲ್ಲೆಗಳ ಆಡಳಿತಗಳ ಸಹಕಾರದೊಡನೆ ಜಿಲ್ಲಾ-ಪ್ರವಾಸಿ ಉತ್ಸವಗಳನ್ನು ಏರ್ಪಡಿಸಲಾಗುತ್ತಿದೆ. ಈ ದಿಸೆಯಲ್ಲಿ 1992 ರ ನವೆಂಬರ್ ತಿಂಗಳಲ್ಲಿ ನಡೆಸಿದ ಲಕ್ಕುಂಡಿ ಉತ್ಸವಕ್ಕೆ ಇಲಾಖೆಯು ಎರಡು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿತು. ಜಿಲ್ಲೆಯ ಶಿಶುವಿನಾಳ ಗ್ರಾಮದಲ್ಲಿ 3.71 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಛತ್ರ ನಿರ್ಮಾಣ ಕಾರ್ಯ ಕೈಗೊಳ್ಳಲಾಗಿದೆ. ಅಬಲೂರಿನಲ್ಲಿ ಸರ್ವಜ್ಞ ಮಂಟಪಕ್ಕೆ ಪ್ರಾಕಾರ ನಿರ್ಮಿಸುವ ಕೆಲಸ ಎರಡು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಡೆಯುತ್ತಿದೆ. 1992-93 ನೇ ಸಾಲಿನಲ್ಲಿ ಗದಗಿನಲ್ಲೊಂದು ಪ್ರವಾಸಿ ಮಾಹಿತಿ ಕೇಂದ್ರವನ್ನು ತೆರೆಯಲಾಯಿತು; ಹಾಗೂ ಪ್ರವಾಸೋದ್ಯಮದ ಅಭಿವೃದ್ಧಿಗೆ 1.35 ಗುಂಟೆ ಜಮೀನನ್ನು ಪಡೆದುಕೊಳ್ಳಲಾಗಿದೆ. ಹುಬ್ಬಳ್ಳಿ-ಧಾರವಾಡದ ಉಣಕಲ್ ಕೆರೆಯಲ್ಲಿ ಜಲಕ್ರೀಡೆ ಕೇಂದ್ರವನ್ನು ಆರಂಭಿಸಲು ಉದ್ದೇಶಿಸಲಾಗಿದೆ. ಈ ದಿಸೆಯಲ್ಲಿ 94-95 ನೇ ಸಾಲಿನಲ್ಲಿ ಖಾಸಗಿ ವ್ಯಕ್ತಿಯೊಬ್ಬರಿಗೆ ತರಬೇತಿ ನೀಡಿ ಎರಡು ಆಸನಗಳ ದೋಣಿಯಂಥಹ ಕ್ರೀಡಾ ಸಾಧನವನ್ನು ಮತ್ತು ಅದಕ್ಕೆ ಜೋಡಿಸಲು 10 ಅಶ್ವಶಕ್ತಿಯ ಒಂದು ಮೋಟರನ್ನು ಉಚಿತವಾಗಿ ನೀಡಲಾಗಿದೆ. ಇದೀಗ ಈ ಕ್ರೀಡೆ ಪ್ರಾರಂಭವಾಗಿದೆ.

ಕೇಂದ್ರ ಸರ್ಕಾರದ ನೆರವಿನ ಮೂಲಕ 94-95 ನೇ ಸಾಲಿನಲ್ಲಿ, ಧಾರವಾಡ ನಗರದಲ್ಲಿ 53.37 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಯಾತ್ರಿ ನಿವಾಸವನ್ನು ನಿರ್ಮಿಸಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಜಿಲ್ಲೆಯ ಮುಖ್ಯ ಕೇಂದ್ರಗಳಾದ ಧಾರವಾಡ, ಹುಬ್ಬಳ್ಳಿ ಹಾಗೂ ಹಾವೇರಿಗಳಲ್ಲಿ ಅತಿಥಿ ಗೃಹಗಳಿವೆ (ಸರ್ಕಿಟ್ ಹೌಸ್). ತಾಲೂಕು ಹಾಗೂ ಇತರ ಮುಖ್ಯ ಕೇಂದ್ರಗಳಲ್ಲಿ ಲೋಕೋಪಯೋಗಿ ಇಲಾಖೆಯ ನಿರೀಕ್ಷಣಾ ಮತ್ತು ಪ್ರವಾಸಿ ಮಂದಿರಗಳಿವೆ. ಸರ್ಕಾರಿ ನೌಕರರು ಹಾಗೂ ಖಾಸಗೀಯವರಿಗೆ ಇವುಗಳಲ್ಲಿ ತಂಗುವುದಕ್ಕೆ ವ್ಯವಸ್ಥೆ ಇದೆ. ಅರಣ್ಯ ಇಲಾಖೆಯು ತನ್ನ ಸಿಬ್ಬಂದಿ ವರ್ಗಕ್ಕಾಗಿ ಕಲಕೇರಿ, ದೇವಿಕೊಪ್ಪ ಧಾರವಾಡ ಮತ್ತು ಹಾನಗಲ್ ತಾ॥ ನ ಹೊಂಕಣಗಳಲ್ಲಿ ವಿಶ್ರಾಂತಿ ಗೃಹಗಳನ್ನು ಹೊಂದಿದೆ.